ಮಾನ್ಯ ಸದಸ್ಯರು: ಅಲ್ಲಿ ಸ್ಟ್ರೈಕ್ ಮಾಡಿದರೆ, ಇಲ್ಲಿ ಸಭಾತ್ಯಾಗ ಮಾಡುತ್ತಿದ್ದಾರೆ.

ಶ್ರೀ ಆರಗ ಜ್ಞಾನೇಂದ್ರ: ಇಲ್ಲಿ ತಮಿಳು ಪೇಪರ್‌ನವರು ಯಾರೂ ಇಲ್ಲ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಕಪ್ಪು ಬಟ್ಟೆ ಪಕ್ಕದಲ್ಲಿದ್ದರೆ ಮಾಧುಸ್ವಾಮಿಯವರಿಗೆ ಮಾತನಾಡಲು ಸ್ಫೂರ್ತಿ ಸಿಕ್ಕುವುದಿಲ್ಲ ಎಂದು . . . . .

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾಧುಸ್ವಾಮಿಯವರು ಅವರಿಗೆ ಸಪೋರ್ಟ್ ಮಾಡಿ, ಅವರು ಪಾಪ ಸುಮ್ಮನೆ, ...

ಶ್ರೀ ಜೆ.ಸಿ. ಮಾಧುಸ್ವಾಮಿ: ಅವರೇನಾದರೂ ತಮಿಳುನಾಡು ಅಸೆಂಬ್ಲಿಯಲ್ಲಿ ಕುಳಿತಿದ್ದಾರೆಯೇ? ನೀವೇನಾದರೂ ಅವರಿಗೆ ಜಯಲಲಿತಾ ಕಂಡಹಾಗೆ ಕಾಣುತ್ತಿರುವಿರಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಈಗ ಅವರು ಡಿ.ಎಂ.ಕೆ. ಪಾರ್ಟಿ ಸೇರಿದ್ದಾರೆ. ಅವರು ಸುಖವಾಗಿ ಕುಳಿತಿದ್ದರು, ಕಣ್ಣು ಒರೆಸಿಕೊಂಡು . . . . .

ಶ್ರೀ ಜೆ.ಸಿ. ಮಾಧುಸ್ವಾಮಿ: ಖರ್ಗೆಯವರನ್ನು ನೀವು ಜಯಲಲಿತಾರವರಿಗೆ ಹೋಲಿಸುವುದು ತಪ್ಪು. ಇಲ್ಲಿ ಯಾರೂ ಜಯಲಲಿತಾ ಇಲ್ಲ.

('ಯಾವುದೇ ಕಾರಣಕ್ಕೂ ತಮಿಳ್ನಾಡಿಗೆ ನೀರು ಬಿಡಕೂಡದು' ಎಂದು ಘೋಷಣೆಯನ್ನು ಕೂಗುತ್ತಾ, ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಎಸ್. ರಾಜೇಂದ್ರನ್: ಇದು ತಮಿಳುನಾಡು ವಿರುದ್ಧ ಎಂದರೆ, ಮತ್ತೆ ತಮಿಳುನಾಡಿನವರನ್ನು ಪಬ್ಲಿಸಿಟಿ ಮಾಡಿದ ತರಹ ಆಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಕಣ್ಣಿನಲ್ಲಿ ಧೂಳು ಬಿದ್ದಿದೆ ಎಂದು ಕಣ್ಣು ಒರೆಸಿಕೊಳ್ಳಲು ತಂದಂಥ ಬಟ್ಟೆ ಅದು. ಆದರೆ, ನೀವು ಅವರೇಕೋ ಕಪ್ಪು ಬಟ್ಟೆ ತಂದಿದ್ದಾರೆ ಎಂದು ಹೇಳಿದಿರಿ. ಪಾಪ ಅವರು ನಿನ್ನೆ ಅಲ್ಲಿ ಇಲ್ಲಿ . . . . .

ಶ್ರೀ ಜೆ.ಸಿ. ಮಾಧುಸ್ವಾಮಿ: ನಿಮ್ಮನ್ನು ಮಾತನಾಡಲು ಬಿಡುವುದಿಲ್ಲ, ಧರಣಿ ಮಾಡುತ್ತೇನೆ ಎಂದು ಹೇಳುತ್ತಿದ್ದರು. ಅದಕ್ಕಾಗಿ ಅವರನ್ನು ಕಳುಹಿಸಿಬಿಟ್ಟೆವು.

(ಸದನದಲ್ಲಿ ನಗು)

ಶ್ರೀ ಬಸವರಾಜ ರಾಯರೆಡ್ಡಿ: ವಾಟಾಳ್‌ರವರಿಗೆ ಸ್ವಲ್ಪ ವಿರಾಮದ ಅವಶ್ಯಕತೆ ಇತ್ತು. ಹಾಗಾಗಿ, ಹೊರ ಹೋದರು.

3. ವಿತ್ತೀಯ ಕಾರ್ಯಕಲಾಪ:(ಮುಂದುವರೆದದ್ದು)

2005-06ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಮುಂದುವರೆದ ಚರ್ಚೆ

ಶ್ರೀ ಜೆ.ಸಿ. ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ಇವತ್ತು ತಾವು 25 ಬೇಡಿಕೆಗಳನ್ನು ಸಾರಾಸಗಟಾಗಿ ಮಂಡಿಸಿದ್ದೀರಿ. ಇದು ಬಹುಶಃ ಸಾಮಾನ್ಯ ವಿಷಯಗಳ ಮೇಲೆ ಆದಂಥ ಚರ್ಚೆಯಾಗುತ್ತದೆ ಎಂದು ನಾನು ಭಾವಿಸಿಕೊಂಡು, 2-3 ಇಲಾಖೆಗಳ ಮೇಲೆ ಬೆಳಕು ಚೆಲ್ಲಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಈ ರಾಜ್ಯದಲ್ಲಿ ಇವತ್ತು ಯಥೇಚ್ಛವಾಗಿ ಸಂಪತ್ಭರಿತವಾಗಿರುವಂಥ ಇಲಾಖೆಯೆಂದರೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ. ಈ ಇಲಾಖೆಯಲ್ಲಿ ಇಡೀ ರಾಜ್ಯದ ಸಂಪತ್ತು ಕೊಳ್ಳೆ ಹೋಗುತ್ತಿದೆ. ಈ ಶಾಸನ ಸಭೆಯಲ್ಲಿ ಈ ವಿಷಯ ಪ್ರಸ್ತಾಪವಾಗಬೇಕು, ಇದಕ್ಕೆ ಏನಾದರೊಂದು ಕಡಿವಾಣ ಹಾಕಬೇಕು, ಇದನ್ನು ಏನಾದರೊಂದು ನೆಲೆಗೆ, ಒಂದು ದಿಕ್ಕಿಗೆ ತೆಗೆದುಕೊಂಡು ಹೋಗಬೇಕು

ಎಂದು ನಾವು ಅನೇಕ ಸಲ ಪ್ರಯತ್ನ ಮಾಡಿದ್ದೇವೆ. ಆದರೆ, ಅಕಸ್ಮಾತ್ತಾಗಿ ಆ ಚರ್ಚೆ ಇಲ್ಲಿ ಆಗಲೇ ಇಲ್ಲ. ಹತ್ತು ವರ್ಷದ ಹಿಂದೆ ನಾನು ಈ ಶಾಸನ ಸಭೆಯಲ್ಲಿ ಮಾತನಾಡಿದ್ದೆ. ಮೈನ್ಸ್ ಅಂಡ್ ಮಿನರಲ್ಸ್ ಕನ್ಸೆಷನ್ ಆ್ಯಕ್ಟ್‌ಗೆ ಈ ರಾಜ್ಯದಿಂದ ನಾವು ಒಂದು ಅಮೆಂಡ್‌ಮೆಂಟನ್ನು ಕಳುಹಿಸಬೇಕಾಗುತ್ತದೆ, ಎಂದು ಹೇಳಿದ್ದೆ. ಅರ್ಜಿಯನ್ನು ಹಾಕುವ ಕಾಲದಿಂದ, ಎನ್.ಓ.ಸಿ ಕೊಡುವ ಕಡೆಯಿಂದ, ಲೀಸ್ ಕೊಡುವವರೆಗೆ ನಾವು ಏನಾದರೊಂದು ಪಾಲಿಸಿಯನ್ನು ಎನ್ವಿಸೇಜ್ ಮಾಡದೇ ಹೋದರೆ, ಕರ್ನಾಟಕದಂಥ ದಕ್ಷಿಣ ಭಾಗದ ರಾಜ್ಯಗಳು ನಾಶವಾಗಿ ಹೋಗುತ್ತವೆ, ನಮ್ಮ ಸಂಪತ್ತು ಕೊಳ್ಳೆ ಹೋಗುತ್ತದೆ ಎಂದು ಹೇಳಿದ್ದೆ. ಮಹಾತ್ಮಾ ಗಾಂಧಿಯವರು ಸ್ವಾತಂತ್ರ್ಯ ತಂದುಕೊಟ್ಟಿದ್ದು, ನಾವು ಬರೀ ಇಲ್ಲಿ ನಿಂತುಕೊಂಡು ಭಾಷಣ ಮಾಡಬೇಕು ಎಂದು ಅಲ್ಲ. ಈ ದೇಶದ ಕಚ್ಚಾ ಪದಾರ್ಥವನ್ನು ಏನಾದರೊಂದು ಫಿನಿಷ್ಡ್ ಪ್ರಾಡಕ್ಟ್ ಮಾಡಿ, ಆ ಮೂಲಕ ಈ ದೇಶದ ಕೈಗಳಿಗೆ ಕೆಲಸ ಕೊಟ್ಟು, ನಮ್ಮ ದೇಶದಿಂದ ಆಚೆ ಹೋಗುವಂಥ ಸಂಪತ್ತನ್ನು ಈ ದೇಶಕ್ಕೇ ಬಳಸಿಕೊಳ್ಳುವಂಥ ಸ್ಥಿತಿ ನಿರ್ಮಾಣವಾಗುತ್ತದೆ ಎನ್ನುವ ಉದ್ದೇಶದಿಂದ ಸ್ವಾತಂತ್ರ್ಯ ತಂದುಕೊಟ್ಟರು. ಅವತ್ತಿನ ಸ್ಥಿತಿಗೆ ಹೋಲಿಸಿದರೆ ಇವತ್ತು ಅದರ ನೂರರಷ್ಟು, ಸಾವಿರದಷ್ಟು ಪಟ್ಟು ನಾವು ಭಾರತಾಂಬೆಯನ್ನು ಮಾರುತ್ತಿದ್ದೇವೆ, ಅಡವಿಡುತ್ತಿದ್ದೇವೆ. ಯಾರಿಗೆ ಮಾರುತ್ತಿದ್ದೇವೆ? ಸನ್ಮಾನ್ಯ ಮುಖ್ಯಮಂತ್ರಿಗಳು ಈ ಖಾತೆಯನ್ನು ಇಟ್ಟುಕೊಂಡಿದ್ದಾರೆ. ಅವರ ಬಗ್ಗೆ ನನಗೆ ಬಹಳ ಗೌರವವಿದೆ. ಅವರು ಬಹಳ ಒಳ್ಳೆಯವರು, ಎಲ್ಲರನ್ನೂ ಒಂದೇ ಸಮನಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ, ಪಕ್ಷಪಾತವಿಲ್ಲದೇ ನಡೆದುಕೊಳ್ಳುತ್ತಿದ್ದಾರೆ. ಆದರೆ ಒಂದು ಮಾತನ್ನು ಹೇಳುತ್ತೇನೆ; Discipline and issues can never go together. ಒಂದು ಕಡೆ ಇಷ್ಯೂಸ್, ಇನ್ನೊಂದು ಕಡೆ ಡಿಸಿಪ್ಲೀನ್. ಆಡಳಿತ ನಡೆಸಬೇಕಾದರೆ ಡಿಸಿಪ್ಲೀನ್ ಬೇಕೇ ಬೇಕು. ಇದರಲ್ಲಿ ಎರಡು ಮಾತಿಲ್ಲ. ಅವರು ಚೆನ್ನಾಗಿ ಆಡಳಿತವನ್ನು ನಡೆಸುತ್ತಿದ್ದಾರೆ ಎನ್ನುವ ಒಂದೇ ಕಾರಣಕ್ಕೆ, ಏನು ಬೇಕಾದರೂ ಆಗಲಿ ಎಂದು ತೀರ್ಮಾನಗಳಾದರೆ ನಾಳೆ ಬರುವ ಈ ರಾಜ್ಯದ ಮಕ್ಕಳು ನಮ್ಮನ್ನು ಕ್ಷಮಿಸುವುದಿಲ್ಲ. ಇವತ್ತು ಮೈನ್ಸ್ ಏನಾಗಿದೆ? ಇವತ್ತು ನಾಮಕಾವಸ್ಥೆಗಾಗಿ ಮಾತ್ರ ಒಂದು ಅರ್ಜಿ ಹಾಕುತ್ತಾರೆ. ಅರ್ಜಿ ಹಾಕುವುದಕ್ಕೆ ಮೊದಲೇ, ಯಾರ್ಯಾರಿಗೆ ಮೈನ್ಸ್ ಕೊಡಬೇಕೆನ್ನುವುದು ತೀರ್ಮಾನವಾಗಿರುತ್ತದೆ. ಎಲ್ಲೆಲ್ಲಿ ಮೈನ್ಸ್ ಇದೆ ಎನ್ನುವ ವಿವರಣೆ ಕೂಡ ಯಾರ್ಯಾರಿಗೆ ಬೇಕೋ ಅವರಿಗೆ ಸಿಗುತ್ತದೆ. ಇಲ್ಲಿ ಕೂಡ ಮನಾಪಲಿಗಳು, ಇಲ್ಲಿ ಕೂಡ ದೊಡ್ಡದೊಡ್ಡ ವ್ಯವಹಾರಸ್ಥರು, ಇಲ್ಲಿ ಕೂಡ ನಮ್ಮ ರಾಜಕಾರಣದವರು ಕೈ ಹಾಕುವುದಕ್ಕೆ ಶುರು ಮಾಡಿಬಿಟ್ಟಿದೇವೆ. ಹಿಂದೆ 4 ಜನ, 5 ಜನ, 10 ಜನ ಮೈನ್ಸ್ ಲಾಬಿಯಲ್ಲಿದ್ದರು. ಆದರೆ ಇವತ್ತು, ಮನೆಮನೆಗೂ ಮೈನ್ಸ್ ಲೀಸ್ ತೆಗೆದುಕೊಳ್ಳಬೇಕು ಎನ್ನುವ ಸ್ಥಿತಿ ರಾಜ್ಯದಲ್ಲಿ ನಿರ್ಮಾಣವಾಗಿದೆ. ಒಂದು ಕಾಲದಲ್ಲಿ Karnataka was known for excise lobby. ಮಹಾರಾಷ್ಟ್ರವನ್ನು ಶುಗರ್ ಲಾಬಿ ಎಂದು ಕರೆಯುತ್ತಿದ್ದೇವೆ. ಈ ರಾಜ್ಯವನ್ನು education and excise lobby ಎಂದು ಕರೆಯುತ್ತಿದ್ದೆವು. ಆದರೆ ಇವತ್ತು, ಕರ್ನಾಟಕ ರಾಜ್ಯ ಪೂರ್ಣ ಮೈನ್ಸ್ ಲಾಬಿ ಕೆಳಗಿದೆ. ದುಡ್ಡಿಗೆ ಲೆಕ್ಕವೇ ಇಲ್ಲ. 4–5 ವರ್ಷಗಳ ಕೆಳಗೆ ಒಂದು ಟನ್‌ಗೆ 65 ರೂಪಾಯಿಗೆ ಮಾರುತ್ತಿದ್ದಂಥ ಮೈನ್ಸ್, ಮಿನರಲ್ಸ್‌ನ್ನು ಇವತ್ತು ಎರಡು ಸಾವಿರ ಚಿಲ್ಲರೆ ರೂಪಾಯಿಗಳಿಗೆ ಮಾರುತ್ತಿದ್ದೇವೆ. ಆದರೆ ಇದರಿಂದ ನಮಗೇನು ಲಾಭವಾಗುತ್ತದೆ ಎನ್ನುವುದು ಗೊತ್ತಿಲ್ಲ. ಒಂದು ಕಡೆ ಸಾಫ್ಟ್‌ವೇರ್‌ನವರನ್ನು ಟೆಕ್ನಾಲಜಿ ಎಂದು ಹೇಳಿ, ಅವರನ್ನು ತಂದು ಇಲ್ಲಿ ಇಟ್ಟುಕೊಂಡಿದ್ದೇವೆ. ಇವರು ಮಾಡುತ್ತಿರುವ

ವ್ಯವಹಾರದಿಂದ, ಕೇಂದ್ರ ಸರ್ಕಾರಕ್ಕೆ ಸ್ವಲ್ಪ ಸಹಾಯವಾಗಿದೆ, ಸರ್ಕಾರಕ್ಕೆ ರೆವಿನ್ಯೂ ಬರುತ್ತಿದೆ. ಆದರೆ ಮೈನ್ಸ್‌ದಲ್ಲಿ ಏನಾಗಿದೆ ಎಂಬುದು ನಮಗೆ ಗೊತ್ತಿಲ್ಲ. ಈ ರಾಜ್ಯದ ಇತಿಮಿತಿ ಏನು? ಮೈನ್ಸ್ ಅಂಡ್ ಮಿನರಲ್ಸ್ ಕನ್ಸೆಷನ್ ಆ್ಯಕ್ಟ್‌ನಲ್ಲಿ ಏನಾಗಬೇಕಾಗಿತ್ತು ಎಂಬುದು ನನಗೆ ಗೊತ್ತಿದೆ. ನಾನು ಅನೇಕ ಬಾರಿ ಸಜೆಸ್ಟ್ ಮಾಡಿದ್ದೇನೆ, ಹೊಸ ಮೈನ್ಸನ್ನು ನೀವು ಲೀಸ್‌ಗೆ ಕೊಡಬೇಕಾದರೆ, ಹೊಸದಾಗಿ ಏರಿಯಾಗಳನ್ನು ಆಯ್ಕೆ ಮಾಡಬೇಕಾದರೆ, ಸುಮಾರು ಕಡೆ ಇರುವ ರೆವಿನ್ಯೂ ಲ್ಯಾಂಡ್ ಮತ್ತು ಫಾರೆಸ್ಟ್ ಲ್ಯಾಂಡ್‌ಗಳನ್ನಾದರೂ ನೀವು ಬೇರೆ ನೋಟಿಫೈ ಮಾಡಬೇಕಾಗಿತ್ತು. ಈ ದೇಶದ ಮೈನ್ಸ್ ಮಿನಿಷ್ಟರ್‌ರವರು ಇಲ್ಲಿಗೆ ಬಂದು, ಮೈನ್ಸ್ ಹೇಗೆ ನಡೆಯುತ್ತಿವೆ ಎಂದು ಕೇಳಲಿಲ್ಲ. ಭಾರತ ಸರ್ಕಾರದ ಮೈನ್ಸ್ ಅಂಡ್ ಜಿಯಾಲಜಿ ಇಲಾಖೆಯ ಮಿನಿಸ್ಟರ್ ಬೆಂಗಳೂರಿಗೆ ಬಂದು, ಇಲ್ಲಿ ಕುಳಿತುಕೊಂಡು, ಪೆಂಡಿಂಗ್ ಅಪ್ಲಿಕೇಷನ್‌ಗಳನ್ನು ಏಕೆ ಡಿಸ್ಪೋಸ್ ಮಾಡಲಿಲ್ಲ ಎಂದು ಮೀಟಿಂಗ್ ಮಾಡುತ್ತಾರೆ. Why are you keeping the applications pending for lease ಅಂತ ಕೇಳುತ್ತಾರೆ ತಕ್ಷಣವೇ ಎಲ್ಲಾ ಕ್ಲಿಯರ್ ಆಗಿ ಹೋಗಿಬಿಡಬೇಕು. ಏಕೆಂದರೆ, 2007ನೇ ಇಸವಿಯವರೆಗೆ ಚೈನಾಕ್ಕೆ ಅಗ್ರಿಮೆಂಟ್ ಇದೆ. 2007ನೇ ಇಸವಿಯಾದ ಮೇಲೆ ಕೇಳುತ್ತಾರೋ, ಇಲ್ಲವೋ; ಈ ದಂಧೆ ಹೀಗೆ ನಡೆಯುತ್ತದೆಯೋ, ಇಲ್ಲವೋ, ನಮಗೆಲ್ಲಾ ವರಮಾನ ಚೆನ್ನಾಗಿರುತ್ತದೋ, ಇಲ್ಲವೋ ಎನ್ನುವ ಭೀತಿ ಅವರನ್ನು ಕಾಡುವುದಕ್ಕೆ ಶುರುಮಾಡಿಬಿಟ್ಟಿದೆ. ಈ ಮಧ್ಯೆ ಏನಾಗಿದೆ ಎಂದರೆ, ಆಡುವ ಹುಡುಗರು, ಪೋಲಿ ಹುಡುಗರು, ಸುಮ್ಮನೆ ತಿರುಗಾಡಿಕೊಂಡಿದ್ದವರು ಎಲ್ಲರೂ ಮೈನ್ಸ್ ಆ್ಯಕ್ಟಿವಿಟೀಸ್‌ನಲ್ಲಿ ತೊಡಗಿಬಿಟ್ಟಿದ್ದಾರೆ. ನಾವೇನಾದರೂ ಮೈನ್ಸ್ ಇರುವ ಏರಿಯಾದಲ್ಲಿ ಶಾಸಕಗಿರಿ ಮಾಡಬೇಕೆಂದರೆ, ನಮ್ಮ ಕುತ್ತಿಗೆಗೆ ಬಂದುಬಿಟ್ಟಿದೆ. ಮೊದಲು, ಎಲ್ಲರೂ ನಮಗೆ ಕಂಟ್ರಾಕ್ಟ್ ಕೊಡಿಸಿ ಎಂದು ಕೇಳುತ್ತಿದ್ದವರು, ಈಗ ದಿನಬೆಳಗಾದರೆ, ನಮಗೆ ಮೈನ್ಸ್ ಕೊಡಿಸಿ, ಟ್ರಾನ್ಸ್‌ಪೋರ್ಟ್ ಏಜೆನ್ಸಿ ಕೊಡಿಸಿ, ಅಲ್ಲಿ ಕೆಲಸ ಮಾಡಲು ನನ್ನನ್ನು ಏಜೆಂಟ್ ಎಂದು ಮಾಡಿ ಎಂದು ಕೇಳುತ್ತಾರೆ. ಇವತ್ತು ಲೀಸ್ ತೆಗೆದುಕೊಂಡಿರುವವರ್ಯಾರೂ ಮೈನ್ಸನ್ನು ಡೆವಲಪ್ ಮಾಡುತ್ತಿಲ್ಲ. ಲೀಸ್ ತೆಗೆದುಕೊಂಡವರು ಎಲ್ಲೋ ನೆಮ್ಮದಿಯಾಗಿದ್ದಾರೆ. ಟನ್ನಿಗೆ ಇಷ್ಟು ಎಂದು ಅವರಿಗೆ ರಾಯಲ್ಟಿ ಕೊಟ್ಟುಬಿಡಬೇಕು. ನೂರಿಪ್ಪತ್ತೋ ನೂರಿಪ್ಪತ್ತೈದೋ ಟನ್ನಿಗೆ ಕೊಡಬೇಕು. ಈಗ ಅದು 175 ರೂಪಾಯಿಗಳಿಂದ 225 ರೂಪಾಯಿಗಳವರೆಗೆ ಬಂದಿದೆ. ಎಂದೋ ಆತ ಒಂದಷ್ಟು ಹಣ ಕಟ್ಟಿ ಲೀಸ್ ತೆಗೆದುಕೊಂಡ ಎಂದರೆ ಅವನಿಗೆ ಪ್ರತಿ ಟನ್ನಿಗೆ ಇಷ್ಟು ಎಂದು ರಾಯಲ್ಟಿ ಬರುತ್ತದೆ. ಇವತ್ತು ಪ್ರತಿ ಟನ್ ಐರನ್ ಓರ್‌ಗೆ 225 ರೂಪಾಯಿಗಳ ರಾಯಲ್ಟಿ ಕೊಡಬೇಕು. ಇವತ್ತು ಅವನಿಗೆ ಹಣ ಕೊಟ್ಟುಬಿಟ್ಟು ಯಾರೋ ಬಂದು ಇಲ್ಲಿ ಮೈನ್ಸ್ ಮಾಡುತ್ತಾರೆ. ಅವರ ಹೆಸರಿಗೆ ಮೈನ್ಸ್ ಇರುವುದಿಲ್ಲ. ಒಂದು ಸಿಂಪಲ್ ಅಗ್ರಿಮೆಂಟ್ ಮೇಲೆ ಇವತ್ತು ಮೈನ್ಸ್‌ಗಳನ್ನು ಮಾಡುವ ಸ್ಥಿತಿ ಇದೆ. ಇವುಗಳನ್ನೆಲ್ಲಾ ಮಾಡಬೇಕಾದರೆ ನಿಯಮಗಳಿದ್ದವು. ಪೊಲೀಸರನ್ನು ಈ ದಂಧೆಯೊಳಗೆ ತರಬಾರದೆಂದು ಸರ್ಕಾರ ಒಂದು ಕಾಲಕ್ಕೆ ಯೋಚನೆ ಮಾಡಿತ್ತು. ಪೊಲೀಸಿನವರಿಗೆ ಈ ಕಾಯ್ದೆಯಲ್ಲಿ, ಈ ಆಕ್ಟಿವಿಟೀಸ್‌ನಲ್ಲಿ ಮಧ್ಯೆ ಪ್ರವೇಶ ಮಾಡಲು ಬಿಡಬಾರದು ಎಂದು ಯೋಚನೆ ಮಾಡಿತ್ತು. ಈಗ ಪೊಲೀಸಿನವರನ್ನು ಕೇಳುವ ಹಾಗಿಲ್ಲ. ಕೇಳಬೇಕಾಗಿರುವುದು ಮೈನ್ಸ್ ಅಂಡ್ ಜಿಯಾಲಜಿಯವರು, ಫಾರೆಸ್ಟ್‌ನವರು ಮತ್ತು ಆರ್.ಟಿ.ಓ ಗಳು. ಬಸಪ್ಪ ರೆಡ್ಡಿಯವರಿಗೆ ಏಕೆ ಎಕ್ಸ್‌ಟೆನ್‌ಷನ್ ಸಿಗಲಿಲ್ಲವೋ ಎಂದು ನನಗೆ ಅನುಮಾನ ಬಂದು ಬಿಟ್ಟಿದೆ. ಶ್ರೀನಿವಾಸ ರೆಡ್ಡಿಯವರ ಜೊತೆಗೆ . . . . . .

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಅವರ extension ಬಗ್ಗೆ ಅನುಮಾನಪಡುವ ಅವಶ್ಯಕತೆಯೇ ಇಲ್ಲ. ಅವರಿಗೆ extension ಕೊಡುವುದಕ್ಕೆ ಬಹಳ ಸ್ಪಷ್ಟವಾದ ಕಾರಣಗಳೇ ಇತ್ತು. ಐದು ವರ್ಷ extension ಕೊಟ್ಟಿದ್ದಾರೆ. ಏಕೆಂದರೆ ಆತ High Court ನಲ್ಲಿ ಮರಳು ಸಾಗಾಣಿಕೆ ವಿಚಾರದಲ್ಲಿ affidavit ಹಾಕುತ್ತಾನೆ. ಮರಳನ್ನು ಒಂದು ಮೀಟರ್ ಕೆಳಗಡೆ ತೆಗೆದರೆ ನದಿಯಲ್ಲಿ, ನದಿ ದಡದಲ್ಲಿ ground water level ಗೆ ತೊಂದರೆಯಾಗುತ್ತದೆಯೋ ಇಲ್ಲವೋ ಎಂದು certify ಮಾಡಿ ಕೊಡಿ ಎಂದು ಹೇಳಿದರೆ, Director ಆಗಿದ್ದಂಥ ಬಸಪ್ಪರೆಡ್ಡಿ affidavit ಹಾಕುತ್ತಾನೆ, ಮೂರು ಮೀಟರ್ ತೆಗೆದರೂ ಏನೂ ತೊಂದರೆಯಾಗುವುದಿಲ್ಲವೆಂದು ಸರ್ಕಾರದ ಪರವಾಗಿ affidavit ಹಾಕಿದಂಥ ಮನುಷ್ಯನಿಗೆ extension ಕೊಡದೆ ಇನ್ನೇನು ಮಾಡುತ್ತಾರೆ?

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿಯೇ ಹಾಕಿದ್ದಾರೆ. ಒಂದು ಪುಣ್ಯ ಕ್ಷೇತ್ರವಾದ 'ತೀರ್ಥರಾಮೇಶ್ವರ' ವಜ್ರವನ್ನು ಅಲ್ಲಿ 500 ಅಡಿ ಆಚೆಗೆ quarrying ಮಾಡಿ ಎಂದು ಹೇಳಿದರೆ, 'ಅಗತ್ಯವಿಲ್ಲ, 200 ಅಡಿ ಬಿಟ್ಟರೆ ಅದರ ಆಚೆಗೆ ಬೇಕಾಗಿಲ್ಲ. 200 ಅಡಿ ಬಿಟ್ಟು quarrying ಮಾಡಿ' ಎಂದು ಸನ್ಮಾನ್ಯ ಬಸಪ್ಪರೆಡ್ಡಿಯವರು ಆದೇಶ ಹೊರಡಿಸಿಬಿಟ್ಟರು. ನಮ್ಮದು ಅಲ್ಲಿ limestone ಇದೆ, manganese ಇದೆ, iron ore ಇದೆ, soap powder ಇದೆ, ಹೀಗೆ ಇವೆಲ್ಲಾ ಇರುವ ಕಡೆ mines ಇಲ್ಲವೆಂದು ಆದೇಶ ಕೊಡುವುದು 200 ಅಡಿ ಬಿಟ್ಟು ನೀವು ಮಾಡಿಕೊಳ್ಳಿ ಎಂದು; ಒಂದು ದೊಡ್ಡ ಬಂಡೆಯನ್ನು Mysore Cements ನವರಿಗೆ ಆ lease ಕೊಟ್ಟುಬಿಟ್ಟರು. ಇಡೀ ತಾಲ್ಲೂಕಿನ ಜನ ಎದ್ದುಬಂದು ಕೊರಳುಪಟ್ಟಿ ಹಿಡಿದು ಎಳೆದುಕೊಂಡು 'ಆ ಪುಣ್ಯ ಕ್ಷೇತ್ರವನ್ನು ಉಳಿಸಿ ಎಂದು' ಅದನ್ನು ನಿಲ್ಲಿಸಿದ್ದೇವೆ. ಒಂದು bore well ನಿಂದ ಇನ್ನೊಂದು bore well ಗೆ 850 ಅಡಿ ಅಂತರ ಇಡಬೇಕೆಂದು ನಿಮ್ಮ ಇಲಾಖೆಯಲ್ಲಿ ನಿಯಮ ಮಾಡಿದವರು mining quarrying ಗೆ 200 ಅಡಿ ಸಾಕು ಎಂದು ಆದೇಶ ಕೊಟ್ಟಿದ್ದೀರಲ್ಲಾ, ಯಾವ ಕಾನೂನಿನಲ್ಲಿ ಕೊಡುತ್ತಿದ್ದೀರಿ ಎಂದು ನಾನು ಪ್ರಶ್ನೆ ಕೇಳಿದೆ. . . . . . ಇಲ್ಲ, ಇಲ್ಲ, ಇದು effect ಆಗುವುದಿಲ್ಲ. Geologists ಕಳುಹಿಸಿ survey ಮಾಡಿಸಿದ್ದೇವೆ, ಈ source disturb ಆಗುವುದಿಲ್ಲವೆಂದು ಹೇಳಿದ. ಇಂಥ ಮನುಷ್ಯ ಕರ್ನಾಟಕದಲ್ಲಿದ್ದಾಗ ಏನು ನಡೆಯಬಾರದುದೆಲ್ಲಾ ನಡೆದಿದೆ?! ಇವತ್ತು ಇಲ್ಲಿ ನಿಂತುಕೊಂಡು ಮಾತನಾಡುತ್ತಿದ್ದೇನೆಂದು ಅಲ್ಲ. ಯಾರಿಗೆ lease ಕೊಟ್ಟ? ಯಾವ area lease ಕೊಟ್ಟ? ಎಷ್ಟು ಎಕರೆ ಪ್ರದೇಶ lease ಗೆ ಕೊಟ್ಟಿದ್ದಾನೆ? ಎಷ್ಟು ಎಕರೆ mining operations ಆಗುತ್ತಿದೆ? ಯಾವ item ಗೆ Lease ಕೊಟ್ಟಿದ್ದಾರೆ? ಯಾವ item ಅನ್ನು ಇವತ್ತು transport ಮಾಡುತ್ತಿದ್ದಾರೆ? ಇದೆಲ್ಲಾ ಬಹಳ debate ಆಗಬೇಕಾದಂಥ ವಿಷಯ. ಮಾನ್ಯ ಅಧ್ಯಕ್ಷರೆ, ತಾವು ನಮಗೆ ಊಟಕ್ಕೆ ಇಟ್ಟುಬಿಟ್ಟಿದ್ದೀರಿ. ಅರ್ಧ ಗಂಟೆಯೊಳಗೆ ನಿಮ್ಮ ಕುತ್ತಿಗೆ ಹಿಡಿದುಕೊಂಡುಬಿಡುತ್ತೇನೆ ಎಂದು ಕುತ್ತಿಗೆ ಹಿಡಿದುಕೊಂಡುಬಿಟ್ಟಿದ್ದೀರಿ. ಹಾಗಾಗಿ ಇದರ ವಿವರಣೆಗೆ ನಾನು ಹೋಗುವುದಿಲ್ಲ. ಆದರೆ ಇವತ್ತು ಇದು ಹುಲ್ಲುಗಾವಲು ಆಗಿ ಬಿಟ್ಟಿದೆ. ಇಡೀ ದೇಶ, ಇಡೀ ರಾಜ್ಯದಲ್ಲಿ ಇನ್ನು ನಾಲ್ಕೈದು ವರ್ಷದೊಳಗೆ ಪರಿಸರದಲ್ಲಿ ನಾಶವಾಗುತ್ತೇವೆ, ಸಂಪತ್ತಿನಲ್ಲಿ ನಾಶವಾಗುತ್ತೇವೆ, ಒಳ್ಳೆಯ ಹುಡುಗರನ್ನೆಲ್ಲಾ ಪೋಲಿ ಬೀಳಿಸಿ ಮನೆಗಳನ್ನು ಹಾಳು ಮಾಡುವ stage ಗೆ ನಾವು ಬಂದು ನಿಂತಿದ್ದೇವೆ. ಏನಾದರೂ ಒಂದು ಕಡಿವಾಣವನ್ನು ಸರ್ಕಾರ ಹಾಕುತ್ತದೆಂದು ನಾನು ಭಾವಿಸಿದ್ದೇನೆ. ದುರಾದೃಷ್ಟ ಯಾವುದೋ ಒಂದು ಸಣ್ಣ Supreme Court decision ಆಯಿತೆಂದು ಸನ್ಮಾನ್ಯ

ಮುಖ್ಯಮಂತ್ರಿಗಳು ಕುಳಿತು mines ಸಲುವಾಗಿ ಯಾರ್‍ಯಾರು ಅರ್ಜಿ ಹಾಕಿದ್ದಾರೆ ಅವರನ್ನು ಕರೆಸಿ interview ಮಾಡುವ ಸ್ಥಿತಿಗೆ ಈ ರಾಜ್ಯ ಬಂದಿದೆ. ಮಾನ್ಯ ಮುಖ್ಯಮಂತ್ರಿಗಳು ಕಳೆದ 17, 18 ಮತ್ತು 19ನೇ ತಾರೀಖು 'ಯಾರ್‍ಯಾರು applicants ಇದ್ದೀರಿ ಅವರು ಸನ್ಮಾನ್ಯ ಮುಖ್ಯಮಂತ್ರಿಗಳ ಮಗ್ಗಲಿಗೆ ನೀವು ಬಂದು ಕುಳಿತುಕೊಳ್ಳಬೇಕು' ಎಂದು ನೋಟೀಸ್ ಕೊಡುತ್ತಾರೆ. 'ಕಳ್ಳರನ್ನು, ಧಗಾಕೋರರನ್ನು ಕರೆಸಿ ನಿಮ್ಮ ಮುಂದೆ ಕೂರಿಸಿಕೊಳ್ಳುತ್ತೀರಿ. 'ಸರ್, ಈ ಕೆಲಸ ನೀವು ಮಾಡಬಾರದಾಗಿತ್ತು'. ಎಂದು ನಾನು ಹೋಗಿ ಗೌರವಾನ್ವಿತ ಮುಖ್ಯಮಂತ್ರಿಗಳನ್ನು ಕೇಳಿದೆ. 'ಇಲ್ಲ, ಇಲ್ಲ, Court decision ಆಗಿದೆ' ಎಂದು ಹೇಳಿದರು. Supreme Court ಒಂದು decision ಕೊಟ್ಟಿತು. The authority, which considers the lease, has to hear the applicant. Not necessarily the Hon'ble Chief Minister of Karnataka, not necessary the Mines and Geology Minister . . .

ಶ್ರೀ ಎಂ.ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ): ಮಾನ್ಯ ಮಾಧುಸ್ವಾಮಿಯವರೆ, ಗಣಿ ಮಂತ್ರಿಗಳು ಮಾನ್ಯ ಮುಖ್ಯಮಂತ್ರಿಗಳೇ ಆಗಿದ್ದರಿಂದ ಅವರೇ interview ಮಾಡಬೇಕಾಗುತ್ತದೆ. ಅವರು ಬಿಟ್ಟು ಇನ್ಯಾರು ಮಾಡಬೇಕು? ಮಾನ್ಯ ಮುಖ್ಯಮಂತ್ರಿಗಳೇ ಗಣಿ ಮಂತ್ರಿಗಳು ಆಗಿರುವುದರಿಂದ ಅವರೆ interview ಮಾಡುವುದರಲ್ಲಿ ತಪ್ಪೇನಿದೆ?

ಶ್ರೀ ಜೆ.ಸಿ. ಮಾಧುಸ್ವಾಮಿ: ಇದು ಆಯಿತು, ಬಿಡಿ ನಾನು ಮಾತನಾಡುತ್ತೇನೆ, ನನಗೆ ಅವರು ಟೈಲ್ಸ್ ಕೊಟ್ಟಿರುವುದು ಕಡಿಮೆ. ನಾನು ಆಮೇಲೆ ಮಾತನಾಡುತ್ತೇನೆ. ಮಾನ್ಯ ಅಧ್ಯಕ್ಷರೆ, ಇದು ಮಾತಿಗೆ ಎಷ್ಟು ಅವಕಾಶವಾಗಿದೆಯೆಂದು ತಿಳಿದುಕೊಳ್ಳಬೇಕಲ್ಲವೇ? ಆಚೆ ಜನ ಏನು ಮಾತನಾಡುತ್ತಾರೆಂದು ತಿಳಿದುಕೊಳ್ಳಬೇಕಲ್ಲವೇ? ಅವರು ಕರೆದು interview ಮಾಡಿದ್ದು ಬೇರೆ ವಿಚಾರ. ಮಾತು ಎಲ್ಲಿಗೆ ಹೋಯಿತು? ಇದರ ಬಗ್ಗೆ ಏನೇನು ಮಾತು ಆಗುತ್ತದೆ? ರಾಜ್ಯ ನಡೆಸುವವರು ಮುಖ್ಯಮಂತ್ರಿ ಸ್ಥಾನದಲ್ಲಿ ಕುಳಿತವರು ಯಾವ್ಯಾವ ಮಾತುಗಳನ್ನು ಕೇಳಬೇಕಾಗಿದೆ? ನನ್ನ ಪ್ರಕಾರ ಆ ಖಾತೆಯುನ್ನು ಇವರು ಇಟ್ಟುಕೊಂಡಿದ್ದೇ ತಪ್ಪು. ನನಗೆ ಬಹಳ ಗೌರವ ಇರುವ ಮಾನ್ಯ ಧರಂಸಿಂಗ್‌ರವರ ಬಗ್ಗೆ ನನಗೆ ನೋವು ಆಗಿರುವುದು – ಇವರು ಏಕೆ mines ಖಾತೆ ಇಟ್ಟುಕೊಂಡಿದ್ದಾರೆ? ಈ ಖಾತೆ ಇಟ್ಟುಕೊಂಡು ಏಕೆ ಇಷ್ಟು ಕೆಟ್ಟ ಹೆಸರು ಕೇಳುವ ಸ್ಥಿತಿಗೆ ತಂದಿದ್ದಾರೆ? ನಮ್ಮ ಬಾಯಿಗಳನ್ನು ಏಕೆ ಕಟ್ಟಿ ನಿಲ್ಲಿಸಿದ್ದಾರೆ? ನಾವು ಏಕೆ ಮಾತನಾಡಲಾರದಂಥ ಸ್ಥಿತಿಗೆ ಬಂದಿದ್ದೇವೆ ಎನ್ನುವುದೇ ಇವತ್ತು ನೋವು ಆಗಿದೆ. ಅದರಲ್ಲೇನೂ ಎರಡು ಮಾತಿಲ್ಲ. ಈ ಖಾತೆ ಅಲ್ಲಿ ಏಕೆ ಇತ್ತು ಎನ್ನುವುದೇ ನಮ್ಮ ನೋವು. ಅಂಥ ಸ್ಥಿತಿಯಲ್ಲಿ leasing ಅನ್ನು ಈಗ ಯಥೇಚ್ಛವಾಗಿ ಕೊಡುತ್ತಿದ್ದಾರೆ. ಸಣ್ಣ ಸಣ್ಣ ಗೋಮಾಳ, ಸಣ್ಣ ಸಣ್ಣ ಜಾನುವಾರುಗಳ ಮೇಯುತ್ತಿದ್ದ ಪ್ರದೇಶ ಕೂಡ ಇವತ್ತು lease ಆಗುತ್ತಿದೆ. 10 ಎಕರೆ, 5 ಎಕರೆ, 15 ಎಕರೆ, 20 ಎಕರೆ, development ಮಾಡುವುದಕ್ಕೆ ಒಂದು ಕೋಟಿ ರೂಪಾಯಿಗಳು, ಒಂದೂವರೆ ಕೋಟಿ ರೂಪಾಯಿಗಳು ಬೇಕೆಂದು ಕೇಳುವಾಗ ಇವತ್ತು 500 ರೂಪಾಯಿ ಕೂಡ ಜೇಬಿನಲ್ಲಿ ಇಲ್ಲದವರೆಲ್ಲಾ ಇವತ್ತು mines ಗೆ ಅರ್ಜಿ ಹಾಕಿಕೊಂಡು ಕುಳಿತಿದ್ದಾರೆ. ಜೇಬಿನಲ್ಲಿ ಸರಿಯಾಗಿ 500 ರೂಪಾಯಿ ಇಲ್ಲ ಅಂಥವರು ಬಂದು mines ಗೆ ಅರ್ಜಿ ಹಾಕುತ್ತಾರೆ. ನಾನು ಇವತ್ತು ಕೇಳುವುದು ಇಷ್ಟೆ. mines ಅನ್ನು ಕೊಡುವುದು ಬಿಡುವುದು NOC ಕೊಟ್ಟಮೇಲೆ ಪ್ರಕ್ರಿಯೆ ಆರಂಭವಾಗುತ್ತದೆ. ನಮ್ಮ ತಹಶೀಲ್ದಾರರುಗಳಿಗೆ ತಾವು instructions

ಅನ್ನು ಕೊಡಬೇಕಾಗುತ್ತದೆ. ಶ್ರೀ ತ್ರಿಪಾಠಿಯವರು ಅಲ್ಲಿಗೆ Director ಆಗಿ ಬಂದಮೇಲೆ ನಾನು ಅವರಿಂದ ಬಹಳ ನಿರೀಕ್ಷೆ ಮಾಡಿದ್ದೆ. ಈ ರಾಜ್ಯ ಕಂಡ ಒಳ್ಳೆಯ ಅಧಿಕಾರಿಗಳಲ್ಲಿ ಅವರೂ ಕೂಡ ಒಬ್ಬರಾಗಿದ್ದಾರೆ. ನಿಜವಾಗಿಯೂ ಅವರಿಂದ ಒಳ್ಳೆಯ ಕೆಲಸವನ್ನು ನಿರೀಕ್ಷೆ ಮಾಡಿದ್ದೆ. ಅದರಲ್ಲಿ ಎರಡು ಮಾತೇ ಇಲ್ಲ. ಬಸಪ್ಪರೆಡ್ಡಿಯವರು ಆಚೆಗೆ ಹೋಗಿ ತ್ರಿಪಾಠಿಯವರು ಒಳಗೆ ಬಂದಾಗ– 'ಪರವಾಗಿಲ್ಲ, ಇನ್ನಾದರೂ ಈ ಇಲಾಖೆ ಸ್ವಲ್ಪ ಶಿಸ್ತಿನ ಕೆಳಗಡೆ ಬರುತ್ತದೆಂದು' ಅಂದುಕೊಂಡಿದ್ದೆವು. ಆದರೆ ಅದು ಇಲ್ಲವೇ ಇಲ್ಲ. ಈ ಬಗ್ಗೆ ಎರಡು ನಿದರ್ಶನ ನಿಮಗೆ ಕೊಡುತ್ತೇನೆ. ನನ್ನ Constituency ನಲ್ಲಿ ಎರಡು ಸಲ mines ಅನ್ನು seize ಮಾಡಿದರು. 7 ಎಕರೆ ಬಿಸ್ಕೇಟ್ ಪಿಟ್ ಎಂದು ಅಲ್ಲಿ ಕರೆಯುತ್ತಾರೆ. IBM ನವರು Indian Bureau of Mines ನವರು inspect ಮಾಡಿ this is not a leased land ಇಲ್ಲಿ lease ಗೆ ಕೊಟ್ಟಿಲ್ಲವೆಂದು ಸ್ಪಷ್ಟವಾಗಿ ಹೇಳಿ ಅವರು ತಂದಿದ್ದ ಸುಮಾರು 70 ಸಾವಿರ ಟನ್ mines ಅನ್ನು confiscate ಮಾಡಿ forfeit ಮಾಡಿ ಎಂದು stock ಮಾಡಿಸಿ ಹೋಗಿದ್ದರು. ಇನ್ನೊಂದು ಕಡೆ 25 ಸಾವಿರ ಟನ್ mines ಅನ್ನು ಯಾರೋ illegal ಆಗಿ ಮಾಡಿದ್ದನ್ನು ನಿಮ್ಮ National Highway ಪಕ್ಕ ರಕ್ತಾದ್ರಿಪುರದ ಹತ್ತಿರ store ಮಾಡಿಸಿದರು, stock ಮಾಡಿಸಿದರು. ಅಲ್ಲಿ mines ನಿಲ್ಲಿಸಿದ್ದು ಹೋಗಿಬರುವವರಿಗೆಲ್ಲಾ ಕಾಣಿಸುತ್ತಿತ್ತು. ಬರೀ 5 ರೂಪಾಯಿಗಳನ್ನು per ton ಗೆ ದಂಡ ಹಾಕಿ 25 ಸಾವಿರ ಟನ್ mines ಅನ್ನು release ಮಾಡುತ್ತಾರೆ Mines and Geology Joint Director ಮತ್ತು Director. ಇನ್ನು 7 ಸಾವಿರ ಟನ್ initial deposit to bid EMD ಕಟ್ಟಿ ಎಂದಿದ್ದಕ್ಕೆ ಒಂದೂವರೆ ಕೋಟಿ ರೂಪಾಯಿಗಳಂತೆ 4 ಜನರು ಕಟ್ಟಿದರು. ಹರಾಜು ಕೂಗಿದ್ದಿದ್ದರೆ ನಮ್ಮ ಅಂದಾಜು ಆವತ್ತು ಅದು ಏಳೂವರೆ ಕೋಟಿ ರೂಪಾಯಿಗಳಿಗೆ ಹರಾಜು ಆಗುತ್ತಿತ್ತು. ಇಷ್ಟಕ್ಕೆ ಕೂಗುತ್ತೇವೆ ಅಷ್ಟಕ್ಕೆ ಕೂಗುತ್ತೇವೆಂದು ನಮ್ಮ ಹತ್ತಿರ ಬಂದು ಹೇಳುತ್ತಾರೆ. ಆವತ್ತು ಏಳೂವರೆ ಕೋಟಿ ರೂಪಾಯಿಗಳಿಗೆ ಕೂಗುವುದಕ್ಕೆ ರೇಡಿ ಇದ್ದರು. ಇನ್ನು ಅರ್ಧ ಗಂಟೆ ಮುಕ್ಕಾಲು ಗಂಟೆಗೆ auction start ಆಗಬೇಕು, ಆಗ auction stayed ಎಂದು ದಿಢೀರ್ ಸೂಚನೆ ಬರುತ್ತದೆ. ಇದು High Court ನಿಂದ ಬಂತೇ? ಇಲ್ಲ. ಯಾರು? ಏಕೆ ಎಂದು ಕೇಳಿದರೆ ಅದಕ್ಕೆ ಉತ್ತರವೇ ಇಲ್ಲ. 4 ಜನ ದುಡ್ಡು ಕಟ್ಟುವವರು 'ಇಲ್ಲ ಸರ್, D.C. Office ಗೆ ಹೋಗಿದ್ದೇವು. ಇವತ್ತು auction stay ಆಗಿದೆ, ಹಾಗಾಗಿ ವಾಪಸ್ಸು ಬಂದೆವು' ಎಂದು ಹೇಳುತ್ತಾರೆ. ಅದಾದಮೇಲೆ ಅಲ್ಲಿ ಇದ್ದಂಥ mines ಏನಾಯ್ತು? ಗೊತ್ತಿಲ್ಲ. ಮಾನ್ಯ ವೆಂಕಟೇಶ್ ಎದ್ದು ಬಹಳ ಚೆನ್ನಾಗಿ ಹೇಳುತ್ತಿದ್ರಲ್ಲಾ. 5 ರೂಪಾಯಿ, 10 ರೂಪಾಯಿಗಳಿಗೆ penalty fix ಮಾಡಿ ಇವತ್ತು mines ಆಚೆಗೆ ಹೋಗುತ್ತಿದೆ. ಎರಡು ಸಾವಿರ, ಎರಡೂವರೆ ಸಾವಿರ ರೂಪಾಯಿ ton shipyard ನಲ್ಲಿರುವ mines ಗೆ 5 ರೂಪಾಯಿ penalty ಹಾಕುವುದಕ್ಕೆ ನಿಮ್ಮ ಶಾಸನದಲ್ಲಿ ಅವಕಾಶ ಇರುವಂಥದ್ದು!? ಬರೀ 5 ರೂಪಾಯಿ:

ಶ್ರೀ ಎಸ್. ರಾಜೇಂದ್ರನ್: ಒಂದು Transparency Act ಇದೆ. ಆ Transparency Act ಇವರಿಗೆ ಬೇಕೆಂದರೆ ತೆಗೆದುಕೊಳ್ಳುತ್ತಾರೆ. ಬೇಡವೆಂದರೆ no Transparency Act.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಇದಾದಮೇಲೆ ನಮ್ಮ ಪರಿಸ್ಥಿತಿ ಏನಾಗಿದೆ? ಯಾರು ಬೇಕೋ ಅವರು mines ಗೆ ಕೈಹಾಕಬಹುದು. ನಮ್ಮ District Minister ರವರು mines ನಿಲ್ಲಿಸಿದರು ಎಂದು ನನಗೆ ಬಂದು ಹೇಳಿದರು. ನಮ್ಮ District Minister ಹೋದರು, ಒಂದು ದಿವಸ ಇಡೀ mines ಇಲಾಖೆಯ ದಾಖಲೆಗಳನ್ನೆಲ್ಲಾ seize ಮಾಡು ಎಂದರು. ಅವರು ಹಿಡಿದುಕೊಂಡು ಬಂದು ಇಲ್ಲಿ ಎಲ್ಲೋ ಇಟ್ಟರು. ಇನ್ನು ಯಾರೋ D.C. ಗೆ ಸೂಚನೆ ಕೊಟ್ಟರು–'ನಮ್ಮ ಇಲಾಖೆಯ ಇವೆಲ್ಲಾ records ಅನ್ನು seize ಮಾಡುವುದಕ್ಕೆ ನೀನು ಯಾರು ಅಂತ, ಇವೆಲ್ಲಾ ತುಮಕೂರಿನಲ್ಲಿ ನಡೆದಿದೆ. ಈಗ ಮಾನ್ಯ ಸಚಿವರು ಇಲ್ಲಿ ಸದನದಲ್ಲಿಯೇ ಇದ್ದಾರೆ. ಅವರ ಎದುರಿಗೇ ಹೇಳುತ್ತಿದ್ದೇನೆ. ನನ್ನ guidance ತೆಗೆದುಕೊಂಡಿದ್ದರೆ ಅವರು seize ಮಾಡುವುದಕ್ಕೆ ಬಿಡುತ್ತಿದ್ದವೇ? ಯಾರಾದರೂ Mines Department ನವರಿಗೆ ಹೇಳಿ ಮಾಡಿಸಿ ಎಂದು ಹೇಳುತ್ತಿದ್ದೆವು. 'ಇದೇನು ತುಮಕೂರು ಹೀಗೆ ದರೋಡೆಯಾಗುತ್ತಿದೆ ಎಂದು ಇವರಿಗೆ ಪಾಪ ನೋವಾಯಿತು. ಹಿಡಿದುಬಿಟ್ಟರು. ಒಂದು ದಿವಸ ಕೈಹಾಕಿಬಿಟ್ಟರು. ಸಿಟ್ಟು ಬಂದಿತ್ತು. ಹೊಸದಾಗಿ ಮಂತ್ರಿಯಾಗಿದ್ದರು. ನನ್ನ ಖಾತೆ ಮಟ್ಟಿಗೆ ನಾನು ಇರಬೇಕು, ಈ ಖಾತೆಗೆಲ್ಲಾ ಕೈಹಾಕಬಾರದೆಂದು ಅವರಿಗೆ ಗೊತ್ತಾಗಲಿಲ್ಲ. ತಾವು ತಪ್ಪು ತಿಳಿದುಕೊಳ್ಳಬಾರದು. ನಾನು ನೇರವಾಗಿ ಹೇಳುತ್ತಿದ್ದೇನೆ. Seize ಮಾಡಿಬಿಟ್ಟರು. Seize ಮಾಡಿದರೆ Tumkur D.C. ಗೆ show notice. How could you seize the documents of Mines and Geology Office? ನೀವು ಯಾರು seize ಮಾಡುವುದಕ್ಕೆ? ಆಗ 'ನಾನು ಮಾಡಿಲ್ಲ, ಮಂತ್ರಿ ಮಾಡಿದ್ದಾರೆಂದು' ಅವರು ಹೇಳುವ ಹಾಗಿಲ್ಲ. ಮಂತ್ರಿಯವರ P.A. seize ಮಾಡಿ ತೆಗೆದುಕೊಂಡುಹೋಗಿ D.C. Office ಗೆ ಹಾಕಿಬಿಟ್ಟು ಅವರ ಮೇಲೆ ಹಾಕಿಬಿಟ್ಟ. ಅದಾದಮೇಲೆ ಒಂದು ದೊಡ್ಡ ಕದನ start ಆಯಿತು. ಪಾಪ, ಇವರು ಸಿಟ್ಟು ಮಾಡಿಕೊಂಡು ಚಿಕ್ಕನಾಯಕನಹಳ್ಳಿಯಿಂದ mines ಸಾಗಿಸುವುದನ್ನು ನಿಲ್ಲಿಸಿ ಎಂದು ಹೇಳಿದರು. ಎರಡು ದಿವಸ, ಮೂರು ದಿವಸ mines ಸಾಗಾಣಿಕೆ ನಿಂತುಹೋಯಿತು. Mines ಸಾಗಾಟ ಆಗದೆ ಏಕೆ ನಿಂತಿದೆ ಎಂದು ಸಂಬಂಧಪಟ್ಟವರು ಕೇಳಿದರೆ ಅದಕ್ಕೆ–District Minister ರವರು ಹೇಳಿದ್ದಾರೆ' ಎಂದು ಉತ್ತರ. ಎರಡು ದಿವಸವಾದ ಮೇಲೆ ಅದು re-open ಆಯಿತು. ಅದು ಏಕೆ open ಆಯಿತು ಎಂದು ಕೇಳಿದರೆ District Minister ಹೇಳಿದ್ದಾರೆಂದು ಉತ್ತರ ಬರುತ್ತದೆ. ಮತ್ತೆ Mines Minister ರವರಿಗೆ ಏನು ಕೆಲಸ? ಗೊತ್ತಿಲ್ಲ.

ಶ್ರೀ ಸಿ. ಚನ್ನಿಗಪ್ಪ (ರೇಷ್ಮೆ ಸಚಿವರು): ಒಂದ್ನಿಮಿಷ. ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರು ಹೇಳುವ ಮಾತೆಲ್ಲಾ ಸರಿ, ಒಪ್ಪಿಕೊಳ್ಳುತ್ತೇನೆ. ತುಮಕೂರು ಜಿಲ್ಲೆಯ ನಾಗರೀಕರು, ಪರಿಸರವಾದಿಗಳು ಕೊಟ್ಟಂಥ ಅರ್ಜಿಯ ಆಧಾರದ ಮೇಲೆ ಆ mines ಅನ್ನು ನಿಲ್ಲಿಸಬೇಕೆನ್ನುವ ಅವರ ಮನವಿ ಮೇಲೆ, ಶಾಸಕರ ಮನವಿ ಮೇಲೆ ಮಾನ್ಯ ಮುಖ್ಯಮಂತ್ರಿಗಳಿಗೆ ಕಾಗದ ಕೊಟ್ಟು ಅದನ್ನು stop ಮಾಡಿಸಿದ್ದು ಸತ್ಯ. ಅಲ್ಲಿ ಆಗತಕ್ಕಂಥ ಅನ್ಯಾಯ ಮತ್ತು ದರೋಡೆ ನಿಮಗೆ ಗೊತ್ತಿರುವ ವಿಚಾರ ಆದರೂ ಅವರು ನಿಲ್ಲಿಸಿದ ಮೇಲೆ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಅವರು ಮತ್ತೆ ಬಂದು ಅರ್ಜಿ ಕೊಟ್ಟು, ಕೋರ್ಟಿಗೆ ಹೋಗಿ Court ನಿಂದ ಒಂದು stay ತಂದು ಪ್ರಾರಂಭ ಮಾಡಿರುವುದನ್ನು ಬಿಟ್ಟರೆ ನಮ್ಮ ಸರ್ಕಾರ ಎಂದೆಂದೂ ಅವರಿಗೆ ಅವಕಾಶ ಕೊಟ್ಟಿಲ್ಲ. ಮಾನ್ಯ ಮಾಧುಸ್ವಾಮಿಯವರೆ, ಅಲ್ಲಿ ಏನಾಗಿದೆ ಎನ್ನುವುದು ಚೆನ್ನಾಗಿ ಗೊತ್ತಿದೆ. ಅದೇ ಊರಿನವರು

ನೀವು ಆಗಿರುವುದರಿಂದ ನಿಮಗೂ ಚೆನ್ನಾಗಿ ಗೊತ್ತಿದೆ. ಅದೇ ತಾಲ್ಲೂಕಿನವರು. ನಾನು ಅದನ್ನು stop ಮಾಡುವುದಕ್ಕೆ ಬರೆದಿದ್ದಾರೆ. ಆದರೂ ಬೇಕು ಎಂದು ಅವರು by overrule illegal ಆಗಿ ಅವರು transport ಮಾಡಿರುವುದು ಅದು ಸತ್ಯ. ಅದನ್ನು stop ಮಾಡುವುದಕ್ಕೆ ನಾವು ಕಾಗದ ಕೊಟ್ಟಿದ್ದೇವೆ. ಮತ್ತೆ Secretary ಯವರ ಹತ್ತಿರ ಮಾತನಾಡಿ inspection ಮಾಡಿ ಅದನ್ನು stop ಮಾಡಿಸಿದ್ದೇವೆ. ಅದು ಯಾವುದನ್ನೂ ಬಿಟ್ಟಿಲ್ಲ. ನೀವು ಹೇಳುವ ಮಾತಿನಲ್ಲಿ ನೂರಕ್ಕೆ ನೂರು ಸತ್ಯ ಇದೆ. ಅದನ್ನು ಸರ್ಕಾರ ನಿಲ್ಲಿಸಬೇಕು. ಸರ್ಕಾರದ ಕರ್ತವ್ಯ ಕೂಡ ಆಗಿದೆ. ಆ ಕೆಲಸವನ್ನು ಸರ್ಕಾರ ಮಾಡುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ನಾನು ಹೇಳುವುದು ಇಷ್ಟೆ. ತಾವು ನಿಲ್ಲಿಸಿದಿರಿ. ಮತ್ತೆ mining operation start ಆದಾಗ ಹೇಳಬೇಕಲ್ಲಾ ಯಾಕೆ operate ಮಾಡುವುದಕ್ಕೆ ಬಿಟ್ಟಿದ್ದೇವೆಂದು ತಾವು ಹೇಳಬೇಕಲ್ಲವೇ? ನಿಲ್ಲಿಸಿದ್ದೀರಿ ಎನ್ನುವ ಒಂದು ಕಾರಣಕ್ಕೆ ಜನ ಸಂತೋಷ ಪಟ್ಟರು. ತೆಗೆದಿರಿ ಎನ್ನುವಾಗ, 'ಹೇಗ್ರಿ ಮತ್ತೆ ಲಾರಿ ಓಡುತ್ತದೆ ಸರ್ಕಾರ ನಿಲ್ಲಿಸಿದ್ದು ಎಂದು ಮೂರನೇ ದಿವಸಕ್ಕೆ ನನ್ನ ಮೇಲೆ ಬಿದ್ದರು. ಆಗ ಅಲ್ಲಿ ಬೇರೆ ಮಾತೇ ಆಗುತ್ತದೆ. ಸ್ಟೇ ಇಲ್ಲ. ಕೋರ್ಟ್ ಆರ್ಡರ್ ಇಲ್ಲ. ಮನವಿ ಮೇಲೆ ಯಾವುದೂ ಆರ್ಡರ್ ಆಗಿಲ್ಲ. ಇವತ್ತು ನಿಂತಿತ್ತು, 3 ದಿವಸಕ್ಕೆ ಶುರುವಾಯಿತು. ಚಿಕ್ಕನಾಯಕನಹಳ್ಳಿಯಲ್ಲಿ ಮೈನ್ಸ್ ನಿಲ್ಲಿಸುವುದು, ಮೈನ್ಸ್ ನಡೆಯುವುದು ಚೆಲ್ಲಾಟ ಆಗಿಬಿಟ್ಟಿದೆ ಸಾರ್. ನಮ್ಮ ಊರು ಪಕ್ಕ 3–4 ಹಳ್ಳಿಯವರಿದ್ದಾರೆ. ದುಡ್ಡು ಬೇಕೆಂದಾಗ ಹೋಗಿ ಮೈನ್ಸ್ ನಿಲ್ಲಿಸುತ್ತಾರೆ. ಪ್ರತಿ ಮನೆಗೆ 3,200, 3,250, 4 ಸಾವಿರ ರೂಪಾಯಿಗಳವರೆಗೆ ಹಣ ಕೊಟ್ಟು, 53 ಲಕ್ಷ ರೂಪಾಯಿಗಳ ಪೇಮೆಂಟ್ ಮಾಡಿ ಇವರು ಮೈನ್ಸ್ ಸ್ಟಾರ್ಟ್ ಮಾಡುತ್ತಾರೆ. 53 ಲಕ್ಷ ರೂಪಾಯಿಗಳನ್ನು ಹಳ್ಳಿಯವರಿಗೆ, ಈಗ ಪ್ರತಿ ಮನೆ ಮನೆಗೆ ಹಂಚುತ್ತಾರೆ ಸಾರ್. ರಾಜ್ಯದಲ್ಲಿ ನಾವೆಲ್ಲಾ ಲೆಕ್ಕಕ್ಕೆ ಇಲ್ಲ. ಇದು ಏಕೆ ಹಂಚುತ್ತಾರೆ? ನಮ್ಮದು ಶಿಪ್‌ಮೆಂಟ್ ಹೋಗಬೇಕು. ನನಗೆ ಗೊತ್ತಿರುವವರೊಬ್ಬರು, ಅಲ್ಲಿ ಪ್ರಮುಖರಾದವರು, ಮೈನ್ಸ್ ಮಾಡುತ್ತಿದ್ದರು. ಒಂದು ದಿವಸ 12–13 ಲಾರಿ ಸೀಜ್ ಆಯಿತು. ಆತ ಏನು ಕೇಳುತ್ತಾನೆ ಸಾರ್? ಸಾರ್, 5–10 ಲಕ್ಷ ರೂ. ಪೆನಾಲ್ಟಿ ಹಾಕಿಬಿಡಿ, ಲಾರಿ ರಿಲೀಜ್ ಮಾಡಿ ಸಾಕು ನನಗೆ ಎಂದು ಕೇಳುತ್ತಾನೆ. ಮೈನ್ಸ್ ಆಕ್ಟ್‌ನಲ್ಲಿರುವುದು, ಫೆನಾಲ್ಟಿ ತೆಗೆದುಕೊಂಡು ಲಾರಿ ಬಿಟ್ಟು ಬಿಡಿ ಎಂದಿದೆ. ಎಷ್ಟು ಹಾಕುತ್ತೀರಾ ಹಾಕಿ ಸಾರ್ ಫೆನಾಲ್ಟಿಯನ್ನು, ಎಂದು ಹೇಳುತ್ತಾನೆ. ಅಯ್ಯೋ ಹುಚ್ಚ, 5 ಲಕ್ಷ ರೂಪಾಯಿ, 10 ಲಕ್ಷ ರೂಪಾಯಿ ಫೆನಾಲ್ಟಿ ಆಗುತ್ತದೆ ಅಂದರೆ, ಷಿಪ್‌ಮೆಂಟ್ ಹೋಗಬೇಕು ಸಾರ್. ನನಗೆ 40 ಲಕ್ಷ ರೂಪಾಯಿ ನಷ್ಟವಾಗುತ್ತದೆ, ಎಷ್ಟಾದರೂ ಫೆನಾಲ್ಟಿ ಹಾಕಿಕೊಳ್ಳಲಿ ತಹಸೀಲ್ದಾರ್‌ರವರು; ನನಗೆ ಲಾರಿ ಬಿಟ್ಟರೆ ಆಯಿತು ಎನ್ನುತ್ತಾನೆ. ಫಾರೆಸ್ಟ್ ಆಫೀಸರ್ ಬರುತ್ತಾರೆ, ದಿಢೀರ್ ಅಂತ ಲಾರಿ ಸ್ಟಾಪ್ ಮಾಡುತ್ತಾರೆ. ಹಣ ಏಕೆ ತರಲಿಲ್ಲವೆಂದು ಮನೆಯಲ್ಲಿ ಅವರ ಮನೆಯವರು ಮುನಿಸಿಕೊಂಡರೆ, ಚಿಕ್ಕನಾಯಕಹಳ್ಳಿಯಲ್ಲಿ ಮೈನ್ಸ್ ಲಾರಿಗಳು ನಿಂತು ಹೋಗಿಬಿಡುತ್ತವೆ. ಆಮೇಲೆ, ಇದ್ದಕ್ಕಿದ್ದಹಾಗೆ, ಶುರುವಾಗುತ್ತವೆ. ಅರೆ, ಸೀಜ್ ಮಾಡ್ರಯ್ಯ, ತೋರಿಸ್ರೀ, ಆ ಮಾಲನ್ನು ಏನಾದರೂ ಕಾನ್‌ಪಿಸ್‌ಕೇಟ್ ಮಾಡಿ ಎಂದರೆ ಒಬ್ಬರೂ ಇವತ್ತು ಮಾಡುತ್ತಿಲ್ಲ. ಲಾರಿ ನಿಲ್ಲಿಸುವುದು, ಲಾರಿ ಬಿಡುವುದು. ಯಾರಿಗೆ ಬೇಕೋ ನಿಲ್ಲಿಸುವುದು, ಯಾರು ಬೇಕೋ ಬಿಡುವುದು. ಇದರಿಂದೇನಾಗಿದೆ ಅಂದರೆ, ಇವತ್ತು ಮೈನ್ಸ್ ನಡೆಯುತ್ತಿರುವ ಭಾಗದಲ್ಲಿ ಇಡೀ ಆಡಳಿತ ನಾಶವಾಗಿದೆ. ಇನ್ನು, ಆರ್‌ಟಿ ಆಫೀಸ್‌ಗಳಲ್ಲಿ ಇವತ್ತು ನಂ.2 ಲಿಕ್ಕರ್ ಅನ್ನು ಕದ್ದು ಇಡೋದು ಈ ರಾಜ್ಯದಲ್ಲಿ

ಇವತ್ತು ಮೈನ್ಸ್ ಬಳ್ಳಾರಿಯಿಂದ ಮಂಗಳೂರಿಗೆ ಹೋಗುವುದು, ಚಿಕ್ಕನಾಯಕನಹಳ್ಳಿಯಿಂದ ಮಂಗಳೂರಿಗೆ ಹೋಗುವುದು, ಆರ್‌ಟಿಓ ಪಾಸ್ ಮಾಡಿಕೊಂಡು ಹೋಗುವುದು 3 ಆರ್‌ಟಿ ಆಫೀಸ್ ಸಿಗುತ್ತದೆಯೇ 4 ಆರ್‌ಟಿ ಆಫೀಸ್ ಸಿಗುತ್ತದೆಯೇ? 5 ಆರ್‌ಟಿ ಆಫೀಸ್ ಸಿಗುತ್ತದೆಯೇ ಎಂದು ಲೆಕ್ಕ ಹಾಕುವುದು. ಬಾಡಿಗೆ ಕೂಡ ಆ ಆಧಾರದ ಮೇಲೆ ನಿಗದಿಯಾಗುವುದು ಅಧ್ಯಕ್ಷರೇ ಬಳ್ಳಾರಿಯಿಂದ ಮಂಗಳೂರಿಗೆ ಒಂದು ಟನ್‌ಗೆ 780 ರೂಪಾಯಿ ಇತ್ತು. 2 ಆರ್‌ಟಿ ಆಫೀಸ್ ಕಡಿಮೆಯಾಯಿತೆಂದು ಈಗ 600 ರೂಪಾಯಿಗಳಿಗೆ ಇಳಿಸಿದ್ದಾರೆ. ಈಗ ನಮ್ಮಲ್ಲಿ ಚಿಕ್ಕನಾಯಕನಹಳ್ಳಿಯಲ್ಲಿ 600 ರೂಪಾಯಿ ಇತ್ತು. ಅದನ್ನು 480 ರೂ. ಗಳಿಗೆ ಇಳಿಸಿದ್ದಾರೆ. ಆರ್‌ಟಿಓ ಜಂಪ್. ಒಂದು ಸಣ್ಣ ಕಾಗದದ ಮೇಲೆ ಬರೆದುಕೊಡುವುದು. ಅದು ಪಾಸ್; ಆರ್‌ಟಿಓ ಪಾಸ್ ಅಂದರೆ . . . . .

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಮಾಧುಸ್ವಾಮಿಯವರು 2–3 ಸಾರಿ ಒತ್ತು ಕೊಟ್ಟರು. ನಮಗೇನು ಸಿಕ್ಕಿದೆ, ನಮ್ಮಗೇನು ಸಿಕ್ಕಿದೆ, ಎಂದು. ನಮಗೆ ಸಿಕ್ಕಿದೆ ಸ್ವಾಮಿ. ನಮ್ಮ ಊರುಗಳ ರಸ್ತೆಗಳೆಲ್ಲಾ ಒಡೆದು ಪುಡಿ ಪುಡಿಯಾಗಿವೆ. ನಮ್ಮ ಸೇತುವೆಗಳು ಒಡೆದು ಹೋಗಿವೆ. ನಮ್ಮ ಮೋರಿಗಳು ಒಂದೂ ಉಳಿಯಲಿಲ್ಲ. ನನಗೆ ಗೊತ್ತಿರುವ ಹಾಗೆ, ಬಳ್ಳಾರಿ ಜಿಲ್ಲೆಯ ಕೆಲವು ಭಾಗಕ್ಕೆ ರೇಂಜರ್ ಟ್ರಾನ್ಸ್‌ಫರ್ ಆಗಲಿಕ್ಕೆ 25 ಲಕ್ಷ ರೂಪಾಯಿ ಅಂತೆ. ನಾನು ನನ್ನ ಕಾರ್‌ನ್ನು ಅಡ್ಡ ಇಟ್ಟು ನಿಲ್ಲಿಸಿದೆ. ಜಿಲ್ಲಾ ಪರಿಷತ್ ರೋಡ್‌ನಲ್ಲಿ 40 ಟನ್‌ನ ಲಾರಿಗಳು ಹೋಗುತ್ತಿವೆ. ಅದು ಉಳಿಯುತ್ತದೆಯೇ ಸ್ವಾಮಿ? ನಾನು ಅವನ ಹತ್ತಿರ ದಾಖಲಾತಿ ಕಸಿದರೆ, ರೇಂಜರ್ ಹತ್ತಿರ ಯಾವ ರೋಡ್‌ನಲ್ಲಿ ಹೋಗಬಹುದೆನ್ನುವುದಕ್ಕೆ ರೋಡ್ ಪರ್ಮಿಟ್ ಅನ್ನು ಆಲ್ ರೋಡ್ಸ್ ಪರ್ಮಿಟ್ ಎಂದು ಹೇಳಿ ಸೀಲ್ ಹೊಡೆಸಿಕೊಂಡು ಬಂದಿದ್ದಾನೆ. ಸಿಗ್ನೇಚರ್ ಹಾಕಿಕೊಟ್ಟಿದ್ದಾನೆ. ಹೀಗಾದರೆ ಗತಿ ಏನಾಗುತ್ತದೆ ಹೇಳಿ?

ಶ್ರೀ ಜೆ.ಸಿ. ಮಾಧುಸ್ವಾಮಿ: ನಾನು ಅಲ್ಲಿಗೇ ಬರುತ್ತೇನೆ ಸಾರ್. ಸಾರ್, ಆರ್‌ಟಿಓಗಳು ಬಹಳ ಯಥೇಚ್ಛವಾಗಿ ಬದುಕುತ್ತಿದ್ದಾರೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೊಬ್ಬರು ದಕ್ಷ ಮಂತ್ರಿಗಳಿದ್ದಾರೆ. ಇವತ್ತು ಆರ್‌ಟಿಓಗೆ ಮೈನ್ಸ್ ಲಾರಿ ಹೋಗುವ ಭಾಗದಲ್ಲಿ ಬೇರೆ ವರಮಾನ ಬೇಕಾಗಿಲ್ಲ. ಡಿಎಲ್‌ಗೆ ದುಡ್ಡು ಕೇಳುವುದು, ನಿಮ್ಮ ಐಎಂವಿಗೆ ದುಡ್ಡು ಕೇಳುವುದು – ಇದೆಲ್ಲಾ ಈಗ ಸಣ್ಣ ವಿಷಯ ಆಗಿಹೋಗಿಬಿಟ್ಟಿದೆ. ಒಂದು ಲಾರಿ ಪಾಸ್ ಆದರೆ ಇಷ್ಟು, ತಿಂಗಳಿಗೆ 8 ಸಾವಿರ ರೂಪಾಯಿ, ಓವರ್–ಅಲ್. 3 ಆರ್‌ಟಿಓಗಳಿಗೆ, ಇಷ್ಟು ಕೊಡಬೇಕೆಂದು ನಿಗದಿ ಅದು. ಇನ್ನು ಫಾರೆಸ್ಟ್. ಫಾರೆಸ್ಟೇ ಇಲ್ಲದ ಭಾಗಕ್ಕೆ ಎಸಿಎಫ್ ಬರುತ್ತೇನೆ, ರೇಂಜರ್ ಬರುತ್ತೇನೆ; ಎಂಎಲ್‌ಎ ವಿರೋಧವಾಗಿದ್ದರೂ ಬರುತ್ತೇನೆ ಎನ್ನುವ ತೀಟೆ ಏಕೆ ಸ್ಟಾರ್ಟ್ ಆಗಿದೆ ಎಂದರೆ, ಮೈನ್ಸ್. ನಮ್ಮಲ್ಲಿ ಏನಿಲ್ಲ. ನಮ್ಮ ಭಾಗದಲ್ಲಿ ಗಿಡವೇ ಇಲ್ಲ. ಫಾರೆಸ್ಟ್ ಸುದ್ದಿಯನ್ನು ನಾವು ಮಾತನಾಡುವಂಥ ಸ್ಥಿತಿಯಲ್ಲೇ ಇಲ್ಲ. ಆದರೆ, ಚಿಕ್ಕನಾಯಕನಹಳ್ಳಿ, ಬಳ್ಳಾರಿ ಭಾಗಕ್ಕೇನಾದರೂ ಇವತ್ತು ಫಾರೆಸ್ಟ್ ಅಧಿಕಾರಿಗಳು ಬರಲೇಬೇಕು ಎಂದು ಸ್ಟಾರ್ಟ್ ಆಗಿದ್ದರೆ, ಫಾರೆಸ್ಟ್ ಬೆಳೆಸುತ್ತೇವೆಂದು ಅಲ್ಲ. ಮೈನ್ಸ್ ನುಂಗುತ್ತೇವೆ ಎಂದು. ಮೈನ್ಸ್. ಈ ಸ್ಥಿತಿಗೆ ಈ ರಾಜ್ಯ ಬಂದಿದೆ ಸಾರ್. ನಾನೊಂದು ಮಾತು ಕೇಳುತ್ತೇನೆ, ನೀವು ಇವತ್ತು 30 ಟನ್, 35 ಟನ್, 40 ಟನ್, ವೋಲ್ವೋಗೆ 75 ಕ್ಯಾರಿಯಿಂಗ್ ಕೆಪ್ಯಾಸಿಟಿಯನ್ನು ಇಟ್ಟು ಬಿಟ್ಟು, ವೆಹಿಕಲ್ಸ್ ಅನ್ನು ರಿಜಿಸ್ಟರ್ ಮಾಡುತ್ತಿದ್ದಾರೆ. ನೀವು ವೆಹಿಕಲ್ಸ್ ಅನ್ನು ಹೇಗೆ ರಿಜಿಸ್ಟರ್

ಮಾಡುತ್ತೀರಿ? ನಿಮ್ಮ ರೋಡ್, ಬ್ರಿಜ್ ಕೆಪ್ಯಾಸಿಟಿ, ಲೇಡನ್ ವೇಯ್ಟ್ ಅನ್ನು 20 ಟನ್ ಮೇಲೆ ತೆಗೆದುಕೊಳ್ಳುವುದಿಲ್ಲ. 40 ಟನ್ ಮೇಲೆ ತೆಗೆದುಕೊಳ್ಳುವುದಿಲ್ಲ ಎಂದು ಬೋರ್ಡ್ ಹಾಕುತ್ತೀರಿ. 70 ಟನ್ ಇರುವ ವೆಹಿಕಲ್ ಅನ್ನು ರಿಜಿಸ್ಟರ್ ಮಾಡಿ ಆಚೆ ಬಿಡುತ್ತಿದ್ದೀರಿ. ನೀವು ಮಾಡಿದಿರಿ, 15 ಟನ್ ಮೇಲೆ ರೋಡ್‌ನಲ್ಲಿ ಹೋಗಕೂಡದು ಎಂದು ಮಾಡಿದಿರಿ. ನಾನು ಅನೇಕ ಸಲ ಹೇಳಿದ್ದೇನೆ. ಗುಜರಾತ್ ನೋಡಿ, ರಾಜಸ್ಥಾನ ನೋಡಿ. 15 ಟನ್‌ಗೆ ಇಷ್ಟು ಟ್ಯಾಕ್ಸ್. 15 ಟನ್ ಮೇಲೆ ಎವ್ವೆರಿ ಟನ್‌ಗೆ ಇಷ್ಟು ಟ್ಯಾಕ್ಸ್ ಎಂದು ಫಿಕ್ಸ್ ಮಾಡಿ ಕಂದಾಯ ಸರ್ಕಾರಕ್ಕೆ ತೆಗೆದುಕೊಳ್ಳಲಿ, ಅವರೂ ಬದುಕುತ್ತಾರೆ. ಸಾರ್, ಎಲ್ಲಾ ಟ್ರಾನ್ಸ್‌ಪೋರ್ಟರ್ಸ್ ನಮಗೆ ಹೇಳುತ್ತಾರೆ. 25 ಟನ್‌ನಿಂದ 34, 35 ಟನ್‌ವರೆಗೆ ನಾವು ಹೊಡೆದೇ ಹೊಡೆಯುತ್ತೇವೆ ಅಂತ. ನಮಗೆ ಟನ್ ಮೇಲೆ ಬಾಡಿಗೆ ಫಿಕ್ಸ್ ಆಗುವುದರಿಂದ 17 ಟನ್‌ಗೆ ಮಂಗಳೂರಿಗೆ ತೆಗೆದುಕೊಂಡು ಹೋದರೆ ನಮಗೆ ಗಿಟ್ಟುವುದಿಲ್ಲ ಅಂತ ಹೇಳುತ್ತಾರೆ. ಸರ್ಕಾರ ಏನಾದರೂ ಮಾಡಿದರೆ ನಾವೂ ಉಳಿದುಕೊಳ್ಳುತ್ತೇವೆ. ಪ್ರತಿ ಲಾರಿ ಸಾರ್ ಇವತ್ತು 35 ಟನ್‌ನಿಂದ 40 ಟನ್ ಓರ್ ಅನ್ನು ಕ್ಯಾರಿ ಮಾಡುತ್ತಿದೆ. ಅದು ಎಲ್ಲರಿಗೂ ಗೊತ್ತು. ಗೊತ್ತಿಲ್ಲದೇ ಇರುವವರು ಯಾರೂ ಇಲ್ಲಿ ಇಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಬಡ್ಜೆಟ್ ಬುಕ್‌ನಲ್ಲೇನು ಹೇಳಿದ್ದಾರೆ ಗೊತ್ತಿದೆಯಾ?

"In recent times Hospet-Karwar road, Dharwad-Alnavar-Ramnagar-Anmod road and Chikkanayakanahalli-Hassan road are being used mainly by vehicles carrying mineral ore. The vehicles are carrying heavy load leading to higher wear and tear of the road. . . . . " ಎಂದು ಹೇಳುತ್ತಾರೆ. ಅದರ ಮೇಲೆ ಹೇಳುತ್ತಾರೆ.

"In order to make our efforts sustainable I propose to introduce levy of toll under Karnataka State Highways Act for this purpose. ಇವತ್ತಿನವರೆಗೆ ಏನಾದರೂ ಮಾಡಿದ್ದಾರಾ? ಈಗ 4 ತಿಂಗಳಾಯಿತು.

SRI J.C. MADHUSWAMY: I will come to that. ನನಗೆ ಗೊತ್ತು ಅದು. ಸಾರ್, ಅದಕ್ಕೆ ನಾನು ಆ ಚಾಪ್ಟರ್‌ಗೆ ಬರುವುದಕ್ಕೆ ಮೊದಲೆ ಇಲ್ಲಿಗೆ ಬಂದೆ. ಇದನ್ನೇನಾದರೂ ಮಾಡಿ ಅಂದೆ. ಬಡ್ಜೆಟ್‌ನಲ್ಲಿ ತಾವು ಹೇಳಿದಿರಿ. You have accepted. ಹೆವಿ ಲೋಡ್ ಹಾಕಿಕೊಂಡು ನಮ್ಮ ಟ್ರಕ್ಸ್ ರೋಡ್‌ನಲ್ಲಿ ಮೂವ್ ಮಾಡುತ್ತಿವೆ. The roads are not feasible to take care of that weight. ಏನು ಮಾಡಿದಿರಿ? ಚಿಕ್ಕನಾಯಕನಹಳ್ಳಿಯಿಂದ ಹಾಸನಕ್ಕೆ ಒಂದು ರೋಡ್ ಮಾಡುತ್ತಿದ್ದೇವೆ, ಟೋಲ್ ಕಲೆಕ್ಟ್ ಮಾಡುತ್ತೇವೆ, ಅದರಲ್ಲೇ ಲಾರಿಯವರನ್ನು ಬಿಡುತ್ತೇವೆ ಎನ್ನುತ್ತೀರಿ. ಎಲ್ಲಿ ಮಾಡಿದ್ದೀರಿ? What is the proposal before the government even after four months?

ಶ್ರೀ ಬಸವರಾಜ ರಾಯರೆಡ್ಡಿ: ಲಾರಿ ನಡೆಸುವವರಿಗೆ ಹೆವಿ ಟ್ಯಾಕ್ಸ್ ಹಾಕುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಯಾರಿಗೆ? ಸಾರ್, ನಾನು ಅದನ್ನು ಕೇಳುತ್ತಿಲ್ಲ. 4 ರೋಡ್ ಅನ್ನು ತಡೆಯುವಂಥ ರೋಡ್ ಮಾಡುತ್ತೇವೆಂದು ಬಡ್ಜೆಟ್‌ನಲ್ಲಿ ಓದಿ ಬಿಟ್ಟಿದ್ದಾರೆ.

ಶ್ರೀ ಬಸಬರಾಜ ರಾಯರೆಡ್ಡಿ: ಪೊಲೀಸರು ರಾತ್ರಿ ವಸೂಲಿ ಮಾಡುತ್ತಾರೆಂದು ಹೇಳಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ನೀವು ರೂಲಿಂಗ್ ಪಾರ್ಟಿಯಲ್ಲಿ ಕುಳಿತುಕೊಂಡು ಪೊಲೀಸ್‌ನವರು ವಸೂಲಿ ಮಾಡುತ್ತಾರೆಂದರೆ, ಹೇಗೆ ಮೈನ್ಸ್ ಅಂಡ್ ಮಿನರಲ್ಸ್ ಕನ್‌ಸೆಷನ್ ಆಕ್ಟ್‌ನಲ್ಲಿ ಪೊಲೀಸ್‌ನವರು ಮಧ್ಯೆ ಬರುವ ಹಾಗಿಲ್ಲ. ಸಾರ್, ಈಗ ನನ್ನ ಪ್ರಶ್ನೆ ಇಷ್ಟೆ, ತಾವು ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೇನು ಸದನದಲ್ಲಿ ಕುಳಿತಿದ್ದೀರಿ, ಒಂದು ಡಿಸಿಷನ್ ತೆಗೆದುಕೊಳ್ಳಬೇಕು. ಆರ್‌ಟಿಓಗಳ ಮನೆಗೆ ಹೋಗುತ್ತಿರುವ ದುಡ್ಡನ್ನು ನೀವೇನಾದರೂ ಮಾಡಿ ನಮ್ಮ ಖಜಾನೆಗೆ ಬರುವಂಥ ಒಂದು ನಿರ್ಧಾರವನ್ನು ನೀವು ತೆಗೆದುಕೊಳ್ಳಬೇಕು. ಈ ರಾಜ್ಯದ ಸಂಪತ್ತು ಲೂಟಿಯಾಗುತ್ತಿದೆ. ಪರ್ ಟನ್‌ಗೆ ಇಷ್ಟು ಎಂದು ತರಿಸಿಕೊಳ್ಳಿ. ರಾಜಸ್ಥಾನ ಗುಜರಾತ್‌ನಿಂದ ತರಿಸಿಕೊಳ್ಳಿ. Over and above is 17 tonnes, so much of peantly will be levied. ಎನ್ನಿ ಇಲ್ಲ, 25 ಟನ್‌ಗೆ ಪರ್ಮಿಟ್ ಕೊಡಿ; 30 ಟನ್‌ಗೆ ಪರ್ಮಿಟ್ ಕೊಡಿ. ನಾವು ತಕರಾರು ಮಾಡುವುದಿಲ್ಲ. You collect more tax for the state. ಯಾವನೋ ಬಡವನಿಗಾಗುತ್ತದೆ. ಏಕೆ ಮಾಡುತ್ತಿಲ್ಲ ನೀವು? ನೀವು ಉತ್ತರ ಹೇಳಬೇಕು. ಎರಡನೆಯದು, ಈಗೇನು ಎಗ್ಸಿಸ್ಟಿಂಗ್ ರೋಡ್ಸ್ ಇದೆ . . . .

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು): ಒಂದ್ನಿಮಿಷ, ಟ್ಯಾಕ್ಸ್ ಅಂದಿರಲ್ಲಾ, ಪೆನಾಲ್ಟಿ ಅಂದಿರಲ್ಲಾ, ತಾವು ರೀಸೆಂಟ್ ಸ್ಟ್ಯಾಟಿಸ್ಟಿಕ್ಸ್ ನೋಡಬೇಕು. ನಾವು ಬೇಕಾದರೆ ಅದನ್ನು ತಂದು ಕೊಡುತ್ತೇನೆ. ನಿಮಗೆ ಫರ್ನಿಶ್ ಮಾಡುತ್ತೇನೆ. ಈ ಹಿಂದೆ ಸೇಮ್ ಪದ್ಧತಿಯೇ ಇತ್ತು. ಇದೇನೂ ಹೊಸದಾಗಿ ನನ್ನ ಕಾಲದಲ್ಲಿ ಪ್ರಾರಂಭ ಆದಂಥದ್ದಲ್ಲ. ಮತ್ತು ಅನೇಕ ಆರ್‌ಟಿಓ, ಇನ್ಸ್‌ಪೆಕ್ಟರ್‌ಗಳಿಗೆ ಯಾರ್‍ಯಾರು ರೆಕಮೆಂಡ್ ಮಾಡುತ್ತಾರೆ?, ಹೇಗೆ ಮಾಡುತ್ತಾರೆ, ಅದೂ ನನಗೆ ಗೊತ್ತು. ನಾನು ಆ ಗೋಜಿಗೆ ಹೋಗುವುದಿಲ್ಲ. ಅದನ್ನು ಹೇಳಿದರೆ ಅದು ಚೆನ್ನಾಗಿಯೂ ಕಾಣುವುದಿಲ್ಲ. ಆದರೆ, ಒಂದು ಮಾತನ್ನು ಹೇಳುತ್ತೇನೆ. ಇದು 2–3 ಸಾರಿ ಇಲ್ಲಿ ಪ್ರಸ್ತಾಪವಾಯಿತು. ಆ ಮನೆಯಲ್ಲೂ ಪ್ರಸ್ತಾಪವಾಯಿತು. ಅದಾದಮೇಲೆ, ನಾನೊಂದು ಮೀಟಿಂಗ್ ಕರೆಸಿದೆ. ಮಾನ್ಯ ಮುಖ್ಯಮಂತ್ರಿಯವರಿಗೆ ನಾನೊಂದು ಸಲಹೆ ಕೊಟ್ಟಿದ್ದೇನೆ. ತಾವು ಹೇಳಿದ ಹಾಗೆ, ಒಂದು, ಮೈನ್ಸ್ ಅಂಡ್ ಜಿಯಾಲಜಿ, ಆರ್‌ಟಿಓ ಅಂದರೆ ಟ್ರಾನ್ಸ್‌ಪೋರ್ಟ್ ಕಮಿಷನರ್ ಮತ್ತು ಪೊಲೀಸ್ ಡಿಜಿಪಿ ಇವರು ಮೂವರದ್ದೂ ಒಂದು ಮೀಟಿಂಗ್ ಕರೆದು, ಪ್ಲಸ್ ಟ್ರಾನ್ಸ್‌ಪೋರ್ಟ್ ಅಸೋಸಿಯೇಷನ್‌ನ ಮುಖ್ಯಸ್ಥರನ್ನು ಕರೆಸಿ ಅವರಿಗೇನು ಕನ್‌ವೀನಿಯಂಟ್ ಆಗುತ್ತದೆ, minimum harassment, maximum benefit to the government and less damage to roads and bridges ಮಾಡಬೇಕೆರಿದು ಹೇಳಿ ನಾನು . . . . .

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಅಪ್‌ಗ್ರೇಡ್ ಮಾಡಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೋ ನೋ, ಅಪ್‌ಗ್ರೇಡ್ ಮಾಡುವುದು, ಅದಕ್ಕೆ ಖರ್ಚು ಮಾಡಬೇಕು ಅದು ಮಾಡುವುದು ಪಿಡಬ್ಲುಡಿ. ಅದಾದಮೇಲೆ, ಅದು ಮೀಟಿಂಗ್ ನಡೆಯಲಿಲ್ಲ. ಕೊನೆಗೆ, ಅವರು ಸ್ಟ್ರೈಕ್ ಮಾಡಿದರು, ಇವರು ಮಾಡಿದರು. ನಾವು ಕೊಪ್ಪಳದಲ್ಲಿ ನಿಲ್ಲಿಸಿದ್ದೆವು. ಒಂದು ತಿಂಗಳು ನಿಂತಿತ್ತು. ಹೊಸಪೇಟೆಯಲ್ಲಿ ಒಂದು ತಿಂಗಳು ನಿಂತಿತ್ತು. ಕೊನೆಗೆ ಎಲ್ಲಾ ಅಸೋಸಿಯೇಷನ್‌ನವರು ಬಂದು ಸ್ಟಾರ್ಟ್ ಮಾಡಬೇಕೆಂದು ಮಾಡಿದರು. ನನಗನ್ನಿಸುತ್ತದೆ, ಡಿ.ಆರ್. ಪಾಟೀಲ್‌ರವರಿಗೂ ಗೊತ್ತು. ಅವರದರಲ್ಲೂ ಒಂದು ತಿಂಗಳು ನಿಲ್ಲಿಸಿತ್ತು. ಕೊನೆಗೆ,

ಎಲ್ಲರೂ ಬಂದು ಅದನ್ನು ಹೆಚ್ಚು ಕಡಿಮೆ ಇಲ್ಲ, ರೋಡ್ ಆಗುವವರೆಗೆ ನೀವು ಹೋಗಲಿಲ್ಲ ಅಂದರೆ ನಮ್ಮದು ಲುಕ್ಸಾನಾಗುತ್ತದೆ ಎಂದರು. ಕೊನೆಗೆ ನಾವು, ಮಿನಿಮಂ ಅವರಿಗೆಷ್ಟು ಅಲೋಡ್ ಇದೆ, ಬಹಳ ಅಂದರೆ 5 ಪರ್ಸೆಂಟ್ ನೀವು ಅಲೋ ಮಾಡಿ, ಅದಕ್ಕಿಂತಲೂ ಜಾಸ್ತಿ ಮಾಡಿದರೆ ನೀವು ಫೆನಾಲ್ಟಿ ಕಲೆಕ್ಟ್ ಮಾಡಿ ಎಂದು ಹೇಳಿದ ಮೇಲೆ, ಎಲ್ಲಿ 10 ಕೋಟಿ ರೂಪಾಯಿ ಫೆನಾಲ್ಟಿ ಮೊದಲು ಕಲೆಕ್ಟ್ ಆಗುತ್ತಿತ್ತು, ಇವತ್ತು ಸುಮಾರು 30, 40 ಕೋಟಿ ರೂಪಾಯಿ ಫೆನಾಲ್ಟಿ ಹೆಚ್ಚು ಕಡಿಮೆ ಕಲೆಕ್ಟ್ ಆಗುತ್ತಿದೆ. ಇನ್ನೂ ಅದು ಕಡಿಮೆ ಇದೆ. ನಾನು ಒಪ್ಪಿಕೊಳ್ಳುತ್ತೇನೆ. ಇಲ್ಲ ಅಂತ ಅಲ್ಲ. ಆದರೆ, ತಾವು ಗುಜರಾತ್‌ನಲ್ಲಿ, ಏನೋ ಒಂದು ಗೌರ್ನಮೆಂಟ್ ಆರ್ಡರ್ ಇದೆ ಅದನ್ನು ತನ್ನಿ ಎಂದು ಹೇಳಿದ್ದೀರಿ. ನ್ಯಾಚುರಲಿ, ನಾವು ಅಮೆಂಡ್‌ಮೆಂಟ್ ಮಾಡಬೇಕಾದರೆ, ನಮ್ಮ ರೂಲ್ಸ್‌ಗೆ ಅಮೆಂಡ್‌ಮೆಂಟ್ ಮಾಡಿಕೊಳ್ಳುತ್ತೇವೆ; ಇಲ್ಲ, ಮೈನ್ಸ್ ಅಂಡ್ ಜಿಯಾಲಜಿಗೆ ಮಾಡಬೇಕು ಅಂದರೆ ಅದನ್ನು ಮಾಡಿಕೊಂಡು ಬೇಕಾದರೆ ಆ ಫೆನಾಲ್ಟಿ ಇಂಟ್ರಡ್ಯೂಸ್ ಮಾಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಸಾರ್, ಈಗ ನಮಗೊಂದು ಏಜೆನ್ಸಿ ಕೊಟ್ಟು ಬಿಡಿ, ನಾವು 100 ಕೋಟಿ ರೂ. ಕೊಡುತ್ತೇವೆ. ಅದನ್ನು ನಮಗೇನಾದರೂ ಕರೆದು ಬಿಟ್ಟು, ಟೆಂಡರ್ ಕರೆದು ಏಜೆನ್ಸಿ ಫಿಕ್ಸ್ ಮಾಡಿ ಬಿಡಿ. ಕೆಎಸ್‌ಆರ್‌ಟಿಸಿಯಲ್ಲಿ ಜಾಸ್ತಿ ಕಲೆಕ್ಟ್ ಮಾಡುವವರಿಗೆ ಕಮಿಷನ್ ಕೊಡುವ ಹಾಗೆ ನಮಗೂ ಒಂದೊಂದು ಆರ್‌ಟಿ ಆಫೀಸ್ ಪಾಯಿಂಟ್‌ನಲ್ಲಿ ಯಾರಿಗಾದರೂ ಕರೆದು ಫಿಕ್ಸ್ ಮಾಡಿ. ಇಷ್ಟು ಕೋಟಿ ರೂ. ಕೊಟ್ಟು ಬಿಡಿ ಟ್ಯಾಕ್ಸ್, ಮಿಕ್ಕಿದ್ದು ನೀವು ತೆಗೆದುಕೊಳ್ಳಿ ಅಂತ ಮಾಡಿ. I will bid for Rs. 100 crores.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಹಿಂದೆ ಟೋಲ್ ಕಲೆಕ್ಷನ್ ಮಾಡುವವರಿಗೆ ಆಕ್ಷನ್ ಮಾಡುತ್ತಿದ್ದರು. ನೋಡೋಣ, ಯೋಚನೆ ಮಾಡೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ: ಈಗಲೂ ಮಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಈಗಲೂ ಮಾಡಿ, whoever carries ನಿಮಗೆ ಹೇಳಿರುವ ಲೋಡ್‌ಗಿಂತ . .

ಶ್ರೀ ಮಲ್ಲಿಕಾರ್ಜುನ ಖರ್ಗೆ: ಹಿಂದೆ ತಮಗೆ ಗೊತ್ತಿದೆ, ಒಂದು ಊರಿನಿಂದ ಒಂದು ಊರಿಗೆ ಹೋಗಬೇಕಾದಾಗ ಟೋಲ್ ಕಲೆಕ್ಷನ್ ಮಾಡುವುದು, ಜಾತ್ರೆಗೆ ಹೋಗಬೇಕಾದಾಗ, ಮಾಡುವುದು ಅದೆಲ್ಲ ಇತ್ತು ಅದು ತಮಗೆ ಗೊತ್ತಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: 17 ಟನ್‌ಗಿಂತ ಜಾಸ್ತಿ ಲೋಡ್ ಹಾಕಿದವರನ್ನು ಹಿಡಿದುಕೊಂಡು ದಂಡ ಹಾಕುವುದನ್ನು ನಮಗೆ ಬಿಟ್ಟುಬಿಡಿ; ನಿಮ್ಮ 30 ಕೋಟಿ ರೂ. ಬರುವ ಕಡೆ ನಾವು ನೂರು ಕೋಟಿ ರೂ. ವರಮಾನವನ್ನು ಎನ್‌ಶೂರ್ ಮಾಡುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಆರ್‌ಟಿಓಗಳೆಲ್ಲ ಹೇಳುವುದು ನೋಡಿದರೆ, ಸಾರ್ ನಮ್ಮದೊಂದೇ ಅಲ್ಲ ಸಾರ್ ಸರ್ಕಾರದಲ್ಲೂ ಎಲ್ಲರಿಗೆ ಕೊಡಬೇಕಾಗುತ್ತದೆಂದು ಹೇಳುತ್ತಾರೆ, ಮಾನ್ಯ ಖರ್ಗೆಯವರೇ ಇದೇ ಮಾತನ್ನು ಹೇಳುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಹೇಳುವವರು ನಮಗೂ ಹಾಗೇ ಹೇಳುತ್ತಾರೆ, ಅಲ್ಲಿ ಲೋಕಲ್ ಎಂಎಲ್‌ಎ ರವರು ಹೀಗೆ ಮಾಡುತ್ತಾರೆಂದು ನಾವು ಹೇಳಬೇಕಾ? ಸುಮ್ಮನೆ ನೀವು ಆ ರೀತಿಯಾಗಿ ಹೇಳಿದರೆ ನಾನೂ ಹೇಳಬೇಕಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನೋ, ನೋ, ಇದು ಎಲ್ಲಾ ಚರ್ಚೆಯಾಗಲಿ. ಇದು ಚರ್ಚೆಯಾಗಬೇಕೆಂದು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ: ಇದಕ್ಕೊಂದು ತನಿಖೆಯಾಗಲಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಸರ್ಕಾರ ಇದರಲ್ಲಿ ನೇರವಾಗಿ ಭಾಗಿಯಾಗಿದೆ ಎಂದು ನಾವು ಹೇಳುತ್ತೇವೆ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಖರ್ಗೆಯವರು ಬೇಜಾರು ಮಾಡಿಕೊಳ್ಳಬೇಡಿ. ಇದು ವಸ್ತುಸ್ಥಿತಿ ಸಾರ್, ಬೇಕಾದರೆ ಈ ಬಗ್ಗೆ ತನಿಖೆಯಾಗಲಿ. ಪ್ರತಿ ದಿವಸ ಬೆಳಿಗ್ಗೆ ಇದೇ ಮಾತು ಹೇಳುತ್ತಾರೆ. ನಮ್ಮ ಊರುಗಳಲ್ಲಿ ಲಾರಿಗಳು ಸಂಚಾರ ಮಾಡುತ್ತವೆ, ಅದನ್ನು ಹೇಳಬಾರದು.

ಶ್ರೀ ಜೆ.ಸಿ. ಮಾಧುಸ್ವಾಮಿ: ಇದಕ್ಕೆ ತನಿಖೆ ಮಾಡಿಸಿ.

ಅಧ್ಯಕ್ಷರು: ಆರಗ ಜ್ಞಾನೇಂದ್ರರವರೆ, ಈಗ ಲಂಚಮಯವಾಗಿದೆ ಎನ್ನುವುದು ಎಲ್ಲರಿಗೂ ಗೊತ್ತಿರುವುದು. ಆದುದರಿಂದ, ಸುಮ್ಮನೆ ಇದು ಎಲ್ಲಾ ಏಕೆ ಮಾತನಾಡುತ್ತೀರಿ? ಸ್ಪೆಸಿಫಿಕ್ ಆಗಿ ಇದ್ದರೆ ಹೇಳಿ . . ಆಯಿತು ಬಿಡಿ . .

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅಲ್ಲಿ ನಡೆಯುತ್ತಿರುವ ಹಗಲು ದರೋಡೆ ನೋಡಿದರೆ ಗಾಬರಿಯಾಗುತ್ತದೆ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ: ಅಲ್ಲಿ ಇದರಿಂದಾಗಿ ಎಷ್ಟು ಕೋಟಿ ರೂಪಾಯಿಗಳ ಸೇತುವೆಗಳು ಹಾಳಾಗುತ್ತಿವೆ. ಎಷ್ಟು ಕೋಟಿ ರೂಪಾಯಿಗಳ ರಸ್ತೆ ಹಾಳಾಗುತ್ತಿವೆ. ಯಾರೂ ಹೇಳುವವರು ಕೇಳುವವರು ಇಲ್ಲವೆ?

ಅಧ್ಯಕ್ಷರು: ಅವರು ಮಾತನಾಡಲಿ ಬಿಡಿ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ: ಆರ್‌ಟಿಓ ರವರನ್ನು ಕರೆದರೂ ಬರುವುದಿಲ್ಲ. ದಿನಾ 60 ಟನ್ ಹಾಕಿಕೊಂಡು ಲಾರಿಗಳು ಹೋಗುತ್ತಿವೆ . .

ಶ್ರೀ ಜೆ.ಸಿ.ಮಾಧುಸ್ವಾಮಿ: ಇದಕ್ಕೆ ತನಿಖೆಯಾಗಲೇಬೇಕು . . ಚಿಕ್ಕನಾಯಕನಹಳ್ಳಿಯಿಂದ ಹಿಡಿದು ಮಂಗಳೂರುವರೆಗೆ ಇರುವ ಎಲ್ಲಾ ಎಂಎಲ್‌ಎಗಳ ತನಿಖೆಯಾಗಲಿ, ಸರ್ಕಾರದ್ದೂ ಒಂದು ತನಿಖೆಯಾಗಲಿ.

ಅಧ್ಯಕ್ಷರು: ಭ್ರಷ್ಟಾಚಾರ ದಿನೇ ದಿನೇ ಜಾಸ್ತಿಯಾಗುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ ಇದರ ಬಗ್ಗೆ ಸ್ಪೆಸಿಫಿಕ್ ಆಗಿ ತಾವು ಹೇಳಬೇಕಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಖರ್ಗೆಯವರಲ್ಲಿ ನಾನು ವಿನಂತಿಸಿ ಕೊಳ್ಳುತ್ತೇನೆ. ತಾವು ದಯವಿಟ್ಟು ಇದರಲ್ಲಿ ಏನೇನು ಇದೆ ಎಂದು ತನಿಖೆ ಮಾಡಿಸಿ. ಏಕೆಂದರೆ, ಮಾನ್ಯ ಅಧ್ಯಕ್ಷರೆ, ಒಂದೇ ಒಂದು ನಿಮಿಷ . . ನನ್ನ ಕ್ಷೇತ್ರದಲ್ಲಿ ಬೇಲಿಕೇರಿ ಇದೆ, ಪೋರ್ಟ್ ಇದೆ, ಆ ಪೋರ್ಟ್‌ನಿಂದ ನಾವು ವಿದೇಶಕ್ಕೆ ರಫ್ತು ಮಾಡುವುದು. ಕನ್ನಡ ಶಾಲೆಯ ಪಕ್ಕದಲ್ಲಿ ಇವರು ರಫ್ತು ಮಾಡುವ ವಸ್ತುಗಳನ್ನು ತಂದು ರಾಶಿ ಹಾಕುತ್ತಾರೆ, ಅಲ್ಲಿ ಮಕ್ಕಳು 1 ರಿಂದ 7ನೇ ತರಗತಿಯಲ್ಲಿರುವವರು, ಆ ಧೂಳಿನಲ್ಲಿ

ಇರುವುದಕ್ಕೆ ಆಗುವುದಿಲ್ಲ. ನಾವು ಪಲ್ಯೂಷನ್ ಡಿಪಾರ್ಟ್‌ಮೆಂಟ್‌ನಿಂದ ಹಿಡಿದು ಎಲ್ಲಾ ಇಲಾಖೆಗಳು ಇವೆ, ನಾನು ಮಾನ್ಯ ಖರ್ಗೆಯವರ ಜೊತೆ ವೈಯುಕ್ತಿಕವಾಗಿ ಒಂದು ಸಲ ಹೋಗಿ ವಿನಂತಿಸಿಕೊಂಡೆ ಸಾರ್, ಇದನ್ನು ನಿಯಂತ್ರಿಸದೇ ಹೋದರೆ ಬಹಳ ದೊಡ್ಡ ಅನಾಹುತ ಕಾದಿದೆ ಎಂದು ಹೇಳಿದೆ. ಅದಕ್ಕೆ ಅವರು ಈಗತಾನೇ ಹೇಳಿದ ಹಾಗೆ ಹೇಳಿದರು, ಉಳಿದ ಎಲ್ಲಾ ಇಲಾಖೆಗಳ ಜೊತೆ ಸೇರಿ ಮುಖ್ಯಮಂತ್ರಿಗಳು ಒಂದು ಸಭೆ ಮಾಡಬೇಕೆಂದು ಹೇಳಿದರು, ಆದರೆ ಮುಖ್ಯಮಂತ್ರಿಗಳಿಂದ ಹಿಡಿದು ಅವರ ಮೇಲಿಂದ ಹಿಡಿದು ಅರೋಪ ಇದೆ, ಇಡೀ ಸರ್ಕಾರವೇ ಭಾಗಿಯಾಗಿದೆ ಎನ್ನುವಂಥ ಆರೋಪ ಇದೆ. ಅಲ್ಲಿ ನಡೆಯುತ್ತಿರುವಂಥದ್ದು ನೋಡಿದರೆ ನಮಗೆ ಸರ್ಕಾರ ಇದೆಯೇ ಎಂದು ಅನ್ನಿಸುತ್ತದೆ. ನಾವೇನು ಆಡಳಿತವನ್ನು ನಡೆಸುತ್ತಿದ್ದೇವೆಯೋ ಅಥವಾ ದರೋಡೆ ಮಾಡಲಿಕ್ಕೆ ಯಾರಿಗಾದರೂ ಬಿಟ್ಟಿದ್ದೇವೆಯೋ ಅಂತ.

ಶ್ರೀ ಕೆ. ಗೋಪಾಲ ಪೂಜಾರಿ: ನಾನು ಈ ಹಿಂದೆಯೂ ಈ ವಿಚಾರವನ್ನು ಹೇಳಿದ್ದೆ. ಬಹಳಷ್ಟು ಇದರ ಬಗ್ಗೆ ಹೋರಾಟ ನಡೆಯಿತು. ನಂತರ ಈಗ ಯಾವ ವ್ಯವಸ್ಥೆಗೆ ಬಂದಿದೆ ಎಂದರೆ, ಅಲ್ಲಿ ಕಾನೂನನ್ನು ಕೈಗೆತ್ತಿಕೊಂಡಿದ್ದಾರೆ. ಕೆಲವು ಸಂಘಟನೆಗಳು ಕಾನೂನನ್ನು ಕೈಗೆತ್ತಿಕೊಂಡು ಈಗ ಹಫ್ತಾ ಪ್ರಾರಂಭವಾಗಿದೆ. ಪೋಲೀಸ್ ಇಲಾಖೆಯನ್ನು ಕೇಳಿದರೆ, ಹಫ್ತಾ ಪ್ರಾರಂಭವಾಗಿರುವುದನ್ನು ಅವರು ಒಪ್ಪಿದ್ದಾರೆ, ಎಸ್‌ಪಿಯವರು ಒಪ್ಪಿದ್ದಾರೆ. ಅದರ ಬಗ್ಗೆ ನಾವು ಏನಾದರೂ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳುತ್ತಾರೆ. ಇಂಥ ಸಂಘಟನೆಗಳನ್ನು ಪೋಲೀಸ್ ಇಲಾಖೆ ಹದ್ದುಬಸ್ತಿನಲ್ಲಿಟ್ಟುಕೊಳ್ಳಲಿಕ್ಕೆ ಇವತ್ತು ಆಗಲಿಲ್ಲ. ಹಫ್ತಾವನ್ನು ಶುರುಮಾಡಿ ಸಿರೂರು ಚೆಕ್ ಪೋಸ್ಟ್‌ನಲ್ಲಿ ಈ ರೀತಿ ಲೋಡ್ ಎಕ್ಸ್‌ಟ್ರಾ ಹಾಕಿ ಲಾರಿಯಲ್ಲಿ ತರುತ್ತಿದ್ದಾರೆ. .

ಶ್ರೀ ಆರಗ ಜ್ಞಾನೇಂದ್ರ: ಅವರು ಯಾರಿಗೆ ಬೇಕಾದರೂ ಕೊಡುತ್ತಾರೆ. ಚಿಕ್ಕಮಗಳೂರು ಡಿಸಿ ಅದನ್ನು ಬ್ಯಾನ್ ಮಾಡಿದರು, ಆದರೂ ಕೂಡ ಇವತ್ತು ಹೋಗುತ್ತಿವೆ. ಯಾರೂ ಆ್ಯಕ್ಷನ್ ತೆಗೆದುಕೊಳ್ಳುವಂಥ ಪರಿಸ್ಥಿತಿಯಲ್ಲಿ ಇಲ್ಲ; ಎಸ್‌ಪಿಗೆ ಕೇಳಿದರೆ ಡಿಸಿಗೆ ಹೇಳುತ್ತಿದ್ದಾರೆ, ಡಿಸಿಗೆ ಕೇಳಿದರೆ, ನೋಡಿ ಸಾರ್ ಇದು ಮೇಲಿನಿಂದ ಕೆಳಗಿನವರೆಗೆ ಇದೆ; ನಾವು ಯಾರೂ ಕೈ ಹಾಕುವ ಪರಿಸ್ಥಿತಿಯಲ್ಲಿಲ್ಲ ಅದು ಆಗುವುದಿಲ್ಲವೆಂದು ಹೇಳುತ್ತಾರೆ. ನನ್ನ ಕಾರನ್ನು ಅಡ್ಡ ಇಟ್ಟು 20–25 ಲಾರಿಗಳನ್ನು ತಡೆದು ಆರ್‌ಟಿಓಗೆ ಫೋನು ಮಾಡಿದರೆ ನಿಮ್ಮ ಆರ್‌ಟಿಓ ಅವರು ಬರುವುದಿಲ್ಲ ನಮಗೆ ಮೇಲುಗಡೆಯಿಂದ ಇನ್‌ಸ್ಟ್ರಕ್ಷನ್ ಇದೆ ಸಾರ್, ನಾವು ಬರುವುದಿಲ್ಲವೆಂದು ಹೇಳುತ್ತಿದ್ದಾರೆ. ದೇವಸ್ಥಾನ ಕಟ್ಟುವವರೂ ಹಫ್ತಾ ವಸೂಲಿ ಮಾಡುತ್ತಿದ್ದಾರೆ, ಎಲ್ಲರೂ ಹಫ್ತಾ ವಸೂಲಿ ಮಾಡುತ್ತಿದ್ದಾರೆ.

ಶ್ರೀ ಕೆ. ಗೋಪಾಲ ಪೂಜಾರಿ: ಎರಡು ತಿಂಗಳ ಹಿಂದೆ ಎರಡು ಗುಂಪುಗಳಲ್ಲಿ, ಒಂದು ಗುಂಪಿಗೆ ಹಫ್ತಾ ಶುರುವಾದ ನಂತರ, ಆ ಸಂಘಟನೆ ಮತ್ತೊಂದು ಗುಂಪಿಗೆ ಸಿಗಲಿಲ್ಲ ಎನ್ನುವ ರೀತಿಯಲ್ಲಿ ಮತ್ತೆ ಲಾರಿಯನ್ನು ನಿಲ್ಲಿಸಲಿಕ್ಕೆ ಹೋದರು. ಪೋಲೀಸ್ ಇಲಾಖೆ ಹೋಗಿ ಅವರನ್ನು ಹಿಡಿದು ಕೇಸ್ ಹಾಕಿದರು. ಅಂದರೆ, ಇಂಥ ಸಂಘಟನೆಗಳು ಇಂಥ ಲಾರಿಗಳನ್ನು ತಡೆದು ಕಾನೂನು ಕೈಗೆತ್ತಿಕೊಂಡು ಹಫ್ತಾ ತೆಗೆದುಕೊಳ್ಳುವುದು ಪ್ರಾರಂಭ ಮಾಡಿದ್ದಾರೆ, ಇವತ್ತು ನಮ್ಮ ಜಿಲ್ಲೆಯಲ್ಲಿ ರಾಜರೋಷವಾಗಿ ಇದು ನಡೆಯುತ್ತಿದೆ, ಜಿಲ್ಲಾಧಿಕಾರಿಗಳ ಗಮನಕ್ಕೂ ತಂದಿದ್ದೇನೆ, ಇದುವರೆವಿಗೂ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ.

ಅಧ್ಯಕ್ಷರು: ಗೋಪಾಲ ಪೂಜಾರಿಯವರೆ, ಎಲ್ಲರೂ ಹಫ್ತಾ ತೆಗೆದುಕೊಳ್ಳುತ್ತಾರೆ ನಾವ್ಯಾಕೆ ತೆಗೆದುಕೊಳ್ಳಬಾರದೆಂದು ಅವರಿಗೆ ಅನ್ನಿಸಿರಬೇಕು. . .

ಶ್ರೀ ಎಸ್.ಎಲ್. ಧರ್ಮೇಗೌಡ: ಈಗಲಾದರೂ ನಾವು ಹಾಗೂ ಮಾನ್ಯ ಮಾಧುಸ್ವಾಮಿಯವರು ಪ್ರಸ್ತಾಪ ಮಾಡಿದ ಮೇಲಾದರೂ, ಮಾನ್ಯ ಆರಗ ಜ್ಞಾನೇಂದ್ರ ಅವರು ಹೇಳಿದ ಹಾಗೆ, ಚಿಕ್ಕಮಗಳೂರು ಜಿಲ್ಲಾ ಪಂಚಾಯಿತಿ ಸಭೆಯಲ್ಲಿ ಸರ್ವಾನುಮತದ ಒಂದು ನಿರ್ಣಯ ತೆಗೆದುಕೊಳ್ಳಲಾಯಿತು. ಆರ್‌ಟಿಓ ಆಫೀಸ್‌ನವರು ಬಂದ್ ಮಾಡಬೇಕೆಂದು ಹೇಳಿ ಆರ್‌ಟಿಓ ಆಫೀಸರ್ ಇದ್ದರೂ ಬಂದ್ ಮಾಡಲಿಲ್ಲ. ಕೊನೆಗೆ ಜಿಲ್ಲಾ ಉಸ್ತುವಾರಿ ಸಚಿವರ ಸಮಕ್ಷಮದಲ್ಲಿ ಮೀಟಿಂಗ್ ಕರೆದರು, ಜಿಲ್ಲಾ ಪಂಚಾಯತ್‌ನ ಸಭಾಂಗಣದಲ್ಲಿ ಎಂಎಲ್‌ಎ ಗಳೆಲ್ಲಾ ಸೇರಿಕೊಂಡು ಮೀಟಿಂಗ್ ಮಾಡಿದೆವು. ಆರ್‌ಟಿಓ ಆಫೀಸ್‌ಗೆ ಹೇಳಿದರು, ಆದರೂ ಸಹ ಚಿಕ್ಕಮಗಳೂರಿನಲ್ಲಿ ಓವರ್‌ಲೋಡ್ ಹಾಕಿ ನಡೆಯುವುದನ್ನು ಬಂದ್ ಮಾಡಲಿಕ್ಕೆ ಆಗಿಲ್ಲ. ಇದು ಲಘುವಾದಂಥ ವಿಚಾರ ಅಲ್ಲ, ಈಗಲಾದರೂ ಈ ಸದನದ ಒಳಗಡೆ ಈ ವಿಚಾರ ಪ್ರಸ್ತಾಪವಾದ ಮೇಲಾದರೂ ಅದನ್ನು ಬಂದ್ ಮಾಡುವ ವ್ಯವಸ್ಥೆ ಮಾಡಿ. ಸುಮ್ಮನೆ ಅನಾವಶ್ಯಕವಾಗಿ ಮಾತನಾಡಿದರೆ ಪ್ರಯೋಜನವಾಗುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಇದಕ್ಕೆ ಒಂದು ನಿಗ್ರಹ ಆಗಲೇಬೇಕು. ಸಾರ್, ಇವತ್ತು ಕಾನೂನಿನ ಪ್ರಕಾರ ಯಾರಿಗೆ ಮೈನ್ಸ್ ಮಾಡಲಿಕ್ಕೆ ತಾವು ಲೀಸ್ ಕೊಟ್ಟಿದ್ದೀರಿ, ಅವರು ಸ್ಪಾಟ್‌ನಲ್ಲಿ ಇರಬೇಕು, ಮೈನಿಂಗ್ ಲೀಸ್‌ನ್ನು ಆಪರೇಟ್ ಮಾಡಬೇಕು, ಏಜೆಂಟರುಗಳನ್ನು ಬಿಡುವುದಕ್ಕೆ ಅವಕಾಶವಿಲ್ಲ, ಬಿಡಬಾರದು. ಎರಡನೆಯದು ಕಂಪ್ಯಾಷನೇಟ್ ಫಾರೆಸ್ಟ್ ಅನ್ನು ರೈಸ್ ಮಾಡಬೇಕಾಗಿತ್ತು. ಒಂದೇ ಒಂದು ಗಿಡವನ್ನು ಇಡೀ ರಾಜ್ಯದಲ್ಲಿ ಒಬ್ಬರೂ ಹಾಕಿಲ್ಲ. ಈ ರಾಜ್ಯದಲ್ಲಿ ಒಂದೇ ಒಂದು ಗಿಡವನ್ನು ಮೈನ್ಸ್ ಲೀಸ್ ಮಾಡಿಕೊಂಡವರು ಈವರೆಗೆ ಬೆಳೆದಿಲ್ಲ. ಮೈನ್ಸ್ ಲೀಸ್ ಕೊಡಬೇಕಾದರೆ ಕಂಡೀಷನ್ ಹಾಕುತ್ತೇವೆ, ಇಷ್ಟು ಎಕರೆ ನೀವು ಕಂಪ್ಯಾಷನೇಟ್ ಅಫಾರೆಸ್ಟೇಷನ್ ಮಾಡಲೇಬೇಕು. ಇದಕ್ಕೆ ಪರಿಹಾರವಾಗಿ ನೀವು ಅಲ್ಲಿ ಫಾರೆಸ್ಟ್ ಬೆಳೆದುಕೊಡಬೇಕೆಂದು ಹೇಳುತ್ತೇವೆ. ಆದರೆ ಇದು ಆಗಲಿಲ್ಲ, ಇನ್‌ಫ್ರಾಸ್ಟ್ರಕ್ಚರ್‌ನ್ನು ನೀವೇ ಕ್ರಿಯೇಟ್ ಮಾಡಿಕೊಳ್ಳಬೇಕೆಂದು ಕಂಡೀಷನ್ ಹಾಕುತ್ತೇವೆ, ಒಬ್ಬರೂ ಒಂದು ರೋಡ್ ಮಾಡಿಲ್ಲ. ಒಬ್ಬರೂ ಆ ಏರಿಯಾದಲ್ಲಿ ಆಪರೇಷನ್ ಮಾಡಲಿಕ್ಕೆ ಅಥವಾ ಎಮರ್ಜೆನ್ಸಿ ಇದ್ದಾಗ ಸರ್ಜರಿ ಅಟೆಂಡ್ ಮಾಡಲಿಕ್ಕೆ ಡಾಕ್ಟರ್‌ನ್ನು ಇಟ್ಟುಕೊಂಡಿಲ್ಲ. ಲಕ್ಷಾಂತರ ಜನ ಇವತ್ತು ಮೈನ್ಸ್‌ನಲ್ಲಿ ಕೆಲಸ ಮಾಡುತ್ತಾರೆ. ಬಹಳ ಪಿಟಿ ಎಂದರೆ, ಲೇಬರ್ ಮಿನಿಸ್ಟರ್ ನಾವು ಮಾತನಾಡುತ್ತಿದ್ದೆವು. ಇಂಡಿಯಾ ಸರ್ಕಾರ ಇವತ್ತು ಅವರಿಗೆ ನಿಮ್ಮಲ್ಲಿ ಚೈಲ್ಡ್ ಲೇಬರ್ ಇದೆ ಎಂದು ಪತ್ರ ಬರೆಯುವಂಥ ಸ್ಥಿತಿ ಬಂದಿದೆ. ಚೈಲ್ಡ್ ಲೇಬರ್ ಇದೆ ಏನಾದರೂ ಆದರೆ ಅವರಿಗೇನು ಮಾಡುತ್ತೇವೆ.

ಶ್ರೀ ತನ್ವೀರ್ ಸೇಟ್: ವಿಚಾರ ಪ್ರಸ್ತಾಪವಾಗಿರುವುದರಿಂದ, ಗಣಿಗಾರಿಕೆಗಳಲ್ಲಿ ಬಾಲ ಕಾರ್ಮಿಕರು ಕೆಲಸ ಮಾಡುತ್ತಿರುವುದಾಗಿ ಒಂದು ಸರ್ಕಾರೇತರ ಸಂಘ ಸಂಸ್ಥೆ ಒಂದು ವರದಿಯನ್ನು ಮಾಡಿ, ಕೇಂದ್ರ ಸರ್ಕಾರದ ಪ್ಲಾನಿಂಗ್ ಕಮಿಷನ್ ಹಾಗೂ ನಮ್ಮ ಕಾರ್ಮಿಕ ಇಲಾಖೆಯನ್ನು ರಾಜ್ಯ ಸರ್ಕಾರಕ್ಕೆ ಬಂದಿರುವುದು ನಿಜ. ಆ ಕಾರಣಕ್ಕಾಗಿ ನಾನು ಇವತ್ತು ಇಡೀ ನಮ್ಮ ಕರ್ನಾಟಕ ರಾಜ್ಯದಲ್ಲಿ ಬಾಲ ಕಾರ್ಮಿಕರ ಪದ್ಧತಿಯನ್ನು ನಿರ್ಮೂಲನೆ ಮಾಡುವಂಥ ಕ್ರಿಯಾಯೋಜನೆಯನ್ನು ರೂಪಿಸಿದ್ದೇವೆ. ಅದರ ಆಧಾರದ ಮೇಲೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಇದರ ಜವಾಬ್ದಾರಿಯನ್ನು

ಕೊಟ್ಟಿದ್ದೇವೆ. ವಿಶೇಷವಾಗಿ ಬಾಗಲಕೋಟೆ ಹಾಗೂ ಬಳ್ಳಾರಿಯಲ್ಲಿ ಗಣಿಗಾರಿಕೆಗಳಲ್ಲಿ ಸುಮಾರು ಎರಡು ಲಕ್ಷಕ್ಕಿಂತ ಹೆಚ್ಚಿನ ಮಕ್ಕಳು ಬಾಲ ಕಾರ್ಮಿಕರಾಗಿರುವುದರ ಬಗ್ಗೆ ಅಧ್ಯಯನ ಮಾಡಿ ಅವರೊಂದು ವರದಿಯನ್ನು ಸಲ್ಲಿಸಿದ್ದಾರೆ. ಆ ವರದಿಯ ಆಧಾರದ ಮೇಲೆ ಕಾರ್ಮಿಕ ಇಲಾಖೆ, ಶಿಕ್ಷಣ ಇಲಾಖೆ, ನಮ್ಮ ಗಣಿಗಾರಿಕೆ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಇವರೆಲ್ಲರೂ ಸೇರಿ ಸಮೀಕ್ಷೆ ಮಾಡುವಂತೆ ಈಗಾಗಲೇ ನಾವು ಒಂದು ಆದೇಶವನ್ನು ಮಾಡಿದ್ದೇವೆ. ಬಂದ ಕೂಡಲೇ ನಾವು ಅದನ್ನು ಮಾಡೋಣ . . .

ಶ್ರೀ ಜೆ.ಸಿ. ಮಾಧುಸ್ವಾಮಿ: ತಾವು ಆಮೇಲೆ ಹೇಳಿ ಮೈನ್ಸ್ ಏನು ನಡೆಯುತ್ತದೆ ಸಚಿವರು ಒಪ್ಪಿದ್ದಾರೆ.

ಶ್ರೀ ಬಸವರಾಜ್ ರಾಯರೆಡ್ಡಿ: ತಾವು ಹೇಳುತ್ತಿರುವುದು ಮೇಜರ್ ಮಿನರಲ್ಸ್‌ಗೋ, ಮೈನರ್ ಮಿನರಲ್ಸ್‌ಗೋ ಸ್ಟೇಟ್ ಪರ್ಮಿಷನ್ ಕೊಟ್ಟಿರುವುದು? ಈಗ ಮೇಜರ್ ಮಿನರಲ್ಸ್‌ಗೆ ಸ್ಟೇಟ್‌ಗೆ ಅಧಿಕಾರ ಇಲ್ಲ, ಬರೀ ಎನ್‌ಓಸಿ ಕೊಡುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ನೋ ನೋ, ನಾನು ಹೇಳುತ್ತಿರುವುದು ಎನ್‌ಓಸಿ ಕೊಡುತ್ತದೆ ಎಂಬುದು ಗೊತ್ತು, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಸವರಾಜ್ ರಾಯರೆಡ್ಡಿ: ನಾನು ಏಕೆ ಹೇಳುತ್ತೇನೆಂದರೆ, ನೀವು ಚಿಕ್ಕನಾಯಕನಹಳ್ಳಿ ಮತ್ತು ಬೇರೆ ಕಡೆ ಏನು ಹೇಳುತ್ತೀರಿ ಇದೆಲ್ಲಾ ಮೇಜರ್ ಮಿನರಲ್ಸ್;

ಶ್ರೀ ಜೆ.ಸಿ. ಮಾಧುಸ್ವಾಮಿ: ಇಲ್ಲಾ ಸ್ವಾಮಿ ಚಿಕ್ಕನಾಯಕನಹಳ್ಳಿಯಲ್ಲಿ ಎಲ್ಲಾ ಇದೆ.

ಶ್ರೀ ಬಸವರಾಜ್ ರಾಯರೆಡ್ಡಿ: ಬರೀ ಮೈನ್ಸ್ ಎಂದರೆ ಯಾವ ಮೈನ್ಸ್ ಹೇಳಿ?

ಶ್ರೀ ಜೆ.ಸಿ. ಮಾಧುಸ್ವಾಮಿ: ರಾಯರೆಡ್ಡಿಯವರೆ, ದಯಮಾಡಿ ಕುಳಿತುಕೊಳ್ಳಿ. Don't try to mislead me please.

ಶ್ರೀ ಬಸವರಾಜ್ ರಾಯರೆಡ್ಡಿ: ನಾನು ಏಕೆ ಹೇಳುತ್ತೇನೆಂದರೆ, ಮೇಜರ್ ಮಿನರಲ್ಸ್ ಆದರೆ ಗೌರ್ನಮೆಂಟ್ ಆಫ್ ಇಂಡಿಯಾದಿಂದ . . . . .

ಶ್ರೀ ಜೆ.ಸಿ. ಮಾಧುಸ್ವಾಮಿ: ನನಗೆ ಗೊತ್ತು ರೀ, ನಾನು ಹತ್ತು ಸಲ ಹೇಳಿದ್ದೇನೆ. ನಾವು ರೆಕಮೆಂಡ್ ಮಾಡುತ್ತಿದ್ದೇವೆ, ಎನ್‌ಓಸಿ ಕೊಡುತ್ತಿದ್ದೇವೆ, ಕೇಂದ್ರ ಸರ್ಕಾರ ಲೀಸ್ ಕೊಟ್ಟಿದೆ. ಆ ಲೀಸ್‌ನಲ್ಲಿ ಏನೇನು ಕಂಡೀಷನ್ ಇದೆ, ಆ ಕನ್‌ಸೆಷನ್ ಆ್ಯಕ್ಟ್‌ನಲ್ಲಿ ಏನು ಇದೆ ಎಂದು ಹೇಳುವುದಕ್ಕೆ ನಾನು ನಿಂತಿದ್ದೇನೆ. ಕಂಪ್ಯಾಷನೇಟ್ ಫಾರೆಸ್ಟ್ ರೈಸ್ ಮಾಡಬೇಕು, ಮಾಡಿಲ್ಲ, ಈ ಸರ್ಕಾರವನ್ನು ನಾನು ಇನ್‌ಸಿಸ್ಟ್ ಮಾಡುತ್ತಿದ್ದೇನೆ, ಕೆಲಸವನ್ನು ಮಾಡಿಸಬೇಕು. ಎರಡನೆಯದು ಇನ್‌ಫ್ರಾಸ್ಟ್ರಕ್ಚರ್ ಎಲ್ಲೂ ಕ್ರಿಯೇಟ್ ಮಾಡಲಿಲ್ಲ. ಲೇಬರ್ ವೆಲ್‌ಫೇರ್ ಎಲ್ಲೂ ಕ್ರಿಯೇಟ್ ಆಗಿಲ್ಲ. ಮೂರನೆಯದು ಡಂಪ್ ಮಾಡುತ್ತಿರುವುದು; ಎಲ್ಲಿಲ್ಲಿ ಬೇಕೋ ಅಲ್ಲಿ ಡಂಪ್ ಮಾಡುತ್ತಿದ್ದಾರೆ. The entire environment is spoiled. ಎಲ್ಲಿ ಏನು ಅವರು ಕೇಳುವುದಿಲ್ಲ. ಮುಂದೆ ಆರ್‌ಟಿಓ ಇದೆ ಎಂದರೆ ಎಲ್ಲಿ ಲಾರಿ ನಿಂತಿರುತ್ತದೆಯೋ ಅಲ್ಲಿಯೇ ಸುರಿದು ಹೋಗಿಬಿಡುತ್ತಾರೆ. ಇದರ ಜೊತೆಗೆ ನಮ್ಮ ಹುಡುಗರು ಕೆವಲರು ಶುರುವಾಗಿದ್ದಾರೆ, ಲಾರಿಯಲ್ಲಿ ಹಿಂದುಗಡೆ ಹತ್ತಿಕೊಂಡು ಬಿಡುತ್ತಾರೆ, ಅವರಿಗೆ ಬೇಕಾದ ಕಡೆ 2–3 ಟನ್ ಕೆಳಗೆ ಎಳೆದು ಬಿಡುತ್ತಾರೆ. ಅದನ್ನೆಲ್ಲಾ ಪೂಲ್ ಮಾಡಿ ಇನ್ನೊಂದು ಲೋಡ್ ಕೊಡುತ್ತಾರೆ, ಮಾರುತ್ತಾರೆ, ಇದರ ಜೊತೆಗೆ ಪ್ರೈವೇಟ್ ಲ್ಯಾಂಡ್ ಮೈನ್ಸ್ ಪಕ್ಕದಲ್ಲಿ

ಇರುತ್ತದೆ, ಇವನು ರಾತ್ರಿ ತೆಗೆದು ಹಾಕಿ ಹೋದರೆ ಬೆಳಗಾಗುವುದರೊಳಗೆ ಅವನು ಅವನ ಲ್ಯಾಂಡ್‌ನೊಳಗೆ ಹಾಕಿಕೊಂಡಿರುತ್ತಾನೆ. 500, 600 ರೂಪಾಯಿ ಕೊಡಿ ಎಂದು ವ್ಯವಹಾರ ಶುರು ಮಾಡುತ್ತಾರೆ. ಈ ಹಂತಕ್ಕೆ ಈ ದಂದೆ ನಿಂತಿದೆ. ಇದು ಎಲ್ಲರಿಗೂ ಗೊತ್ತು, ನಾನೇನೂ ಬಹಳ ಬೆಳಕು ಚೆಲ್ಲುತ್ತಿದ್ದೇನೆ ಎನ್ನುವ ಹುಮ್ಮಿನಲ್ಲಿ ಮಾತನಾಡುತ್ತಿಲ್ಲ. Every one knows this.

ಶ್ರೀ ಆರಗ ಜ್ಞಾನೇಂದ್ರ: ನಾನು ನಮ್ಮ ಡಿಸಿಯವರು ರಸ್ತೆಯಲ್ಲಿ ಕಾರಿನಲ್ಲಿ ಹೋಗುತ್ತಿದ್ದೆವು, ಮಾನ್ಯ ಖರ್ಗೆಯವರ ಗಮನಕ್ಕೆ ಈ ವಿಷಯವನ್ನು ತರುತ್ತೇನೆ. ನಾನು ಡಿಸಿಯವರಿಗೆ ಹೇಳಿದೆ, ನೋಡಿ ಸಾರ್ ಮೈನ್ಸ್ ಲಾರಿ ಬರುತ್ತಿದೆ 40 ಟನ್ ಇದೆ. ಇದು ಹೋಗಲಿಕ್ಕೆ ಇಲ್ಲಿ ಅನುಮತಿ ಇದೆಯೆ ಎಂದು ಕೇಳಿದೆ, ಆಗ ಡಿಸಿಯವರು ಡ್ರೈವರ್‌ಗೆ ಆ ಲಾರಿ ನಿಲ್ಲಿಸು ಎಂದು ಹೇಳಿದರು, ಆಗ ಲಾರಿ ನಿಲ್ಲಿಸಿ ಆ ಡ್ರೈವರ್ ಓಡಿ ಬಂದ, ಡಿಸಿಯವರು ಇಳಿದು ಆ ಡ್ರೈವರ್ ಹತ್ತಿರ ಹೋದರು, ರಪ್ ಎಂದು ಮೈನ್ಸ್ ಲಾರಿಯ ಡ್ರೈವರ್ ನಮ್ಮ ಡಿಸಿ ಗೆ 500 ರೂಪಾಯಿನ ನೋಟು ಕೊಟ್ಟುಬಿಟ್ಟ. ಏಕೆಂದರೆ, ಅವನಿಗೆ ಅವರ ಓನರ್ ಹೇಳಿದನಂತೆ, ಯಾರು ಸಿಕ್ಕರೂ 500 ರ ನೋಟು ಕೊಡು ಎಂದು ಹೇಳಿದ್ದಾನಂತೆ. 500, 500 ರೂಪಾಯಿಗಳ ನೋಟು ಅವನ ಜೇಬಿನಲ್ಲಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ದೇವಂಗಿ ಹತ್ತಿರ ನನ್ನ ಮತಕ್ಷೇತ್ರದಲ್ಲಿ ಎಸ್‌ಪಿ, ಡಿಸಿ, ಅಡಿಷನಲ್ ಎಸ್‌ಪಿ, ಇಷ್ಟೂ ಜನ ನಾವು ಚೀಫ್ ಮಿನಿಸ್ಟರ್ ಬರುತ್ತಾರೆಂದು ನಾವು ಎಲ್ಲಾ ಸ್ಥಳ ನೋಡಲಿಕ್ಕೆ ಕುಪ್ಪಳ್ಳಿಗೆ ಹೋಗುತ್ತಿದ್ದೆವು, ಆಗ ಇದು ನಡೆದ ಘಟನೆ, ಇದಕ್ಕೇನು ಹೇಳುವುದು ನೀವೇ ಹೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಈ ಸರ್ಕಾರಕ್ಕೆ ನಿಜವಾಗಿ ವಿಲ್‌ಪವರ್ ಏನಾದರೂ ಇದ್ದರೆ, ದಯಮಾಡಿ ಇದನ್ನು ರೆಗ್ಯುಲೇಟ್ ಮಾಡಬೇಕು.

ಶ್ರೀ ಎಸ್.ಎಲ್. ಧರ್ಮೇಗೌಡ: ಈಗಾಗಲೇ ಮಾನ್ಯ ಆರಗ ಜ್ಞಾನೇಂದ್ರರವರು ಹೇಳಿರತಕ್ಕಂಥ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ಕೇಳುವುದೇನೆಂದರೆ, ಅಲ್ಲಿ ಲಾರಿ ನಿಲ್ಲಿಸಿದರೆ? ಆ ಲಾರಿಯ ಡ್ರೈವರ್ ಮೇಲೆ ಕ್ರಮ ತೆಗೆದುಕೊಂಡರೆ? ಮತ್ತೆ ಆ ಲಾರಿಯನ್ನು ಸೀಜ್ ಮಾಡಲಾಯಿತೆ?

ಶ್ರೀ ಆರಗ ಜ್ಞಾನೇಂದ್ರ: ಆ ಲಾರಿಯನ್ನು ನಿಲ್ಲಿಸಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಇವತ್ತಿನದಿವಸ ಓವರ್ ಲೋಡ್ ಆಗುತ್ತಿದೆ, ಇದನ್ನು ಕಡ್ಡಾಯವಾಗಿ ನಿಲ್ಲಿಸಬೇಕು. ನಾನು ಈಗಾಗಲೇ ಎಲ್ಲಾ ಕಡೆ ಹೇಳಿದ್ದೇವೆ. ಅದೇನೆಂದರೆ, ರಾತ್ರಿ ಸಮಯದಲ್ಲಿ ಅಂದರೆ 6 ಗಂಟೆಯ ನಂತರ ಮೈನ್ಸ್ ಮಾಡಬೇಡಿ, ರಾತ್ರಿ ಸಮಯದಲ್ಲಿ ಬ್ಲಾಸ್ಟ್ ಮಾಡಬೇಡಿ, ಮತ್ತು ಬೆಳಿಗ್ಗೆ ಸಮಯದಲ್ಲಿ ಶಾಲೆಗಳ ಹತ್ತಿರ ಇರತಕ್ಕಂಥ ಮೈನ್ಸ್‌ನಲ್ಲಿ ಬ್ಲಾಸ್ಟ್ ಮಾಡಬೇಡಿ ಎಂದು. ಒಂದು ವೇಳೆ ಮಾಡಲೇಬೇಕಾದರೆ ಅಂತಹ ಕಡೆ ಕಂಟ್ರೋಲ್ಡ್ ಬ್ಲಾಸ್ಟ್ ಮಾಡಿ ಎಂದು ಹೇಳಿದ್ದೇವೆ. ಆದರೆ, ಇದನ್ನು ಯಾರೂ ಕೇಳುತ್ತಿಲ್ಲ. ಎರಡು ವರ್ಷಗಳ ಹಿಂದೆ ಚಿಕ್ಕನಾಯಕನಹಳ್ಳಿಯಲ್ಲಿ 12 ಜನ ಸತ್ತು ಹೋಗಿದ್ದಾರೆ. ಒಂದು ಸಣ್ಣ ಜೆಲ್ಲಿ ಕಲ್ಲಿಗೋಸ್ಕರ ಬಂಡೆಯನ್ನು ಬ್ಲಾಸ್ಟ್ ಮಾಡಿಕೊಳ್ಳುವಾಗ ಇಷ್ಟು ಜನ ಅಲ್ಲಿ ಸತ್ತಿದ್ದಾರೆ. ಆದರೆ, ಹೆಚ್ಚು ಕಡಿಮೆಯಾದರೆ ಇದರಿಂದ ಎಷ್ಟು ಜನ ಸಾಯುತ್ತಾರೆಯೋ ಗೊತ್ತಿಲ್ಲ. ಈ ಒಂದು ಸ್ಥಿತಿಯಲ್ಲಿ ಸರ್ಕಾರ ನಡೆಯುತ್ತಿದೆ. ಇದನ್ನು ಬಿಟ್ಟು ಇನ್ನು ಮುಂದಕ್ಕೆ ಬಂದು ಫಾರೆಸ್ಟ್ ಬಗ್ಗೆ ಹೇಳುವುದಾದರೆ, ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿರವರನ್ನು ಭೇಟಿ ಮಾಡಿ ಅವರಿಗೆ ವೈಯಕ್ತಿಕವಾಗಿ ಒಂದು ಮಾತನ್ನು ಹೇಳಿದೆ.

ಅದೇನೆಂದರೆ, ಇದರಿಂದ ನಿಮಗೂ ಒಳ್ಳೆಯ ಹೆಸರು ಬರುವುದಿಲ್ಲ ಮತ್ತೆ ನಮಗೂ ಕೂಡ ಒಳ್ಳೆಯ ಹೆಸರು ಬರುವುದಿಲ್ಲ ಮತ್ತೆ ನಿಮ್ಮ ಇಲಾಖೆಗೆ ಕೂಡ ಒಳ್ಳೆಯ ಹೆಸರು ಬಂದಿಲ್ಲವೆಂದು ಹೇಳಿದೆ. ಇವತ್ತಿನದಿವಸ ಫಾರೆಸ್ಟ್‌ನವರಿಗೆ ಬೇರೆ ಉದ್ಯೋಗ ಏನೂ ಇಲ್ಲ. ಅಂದರೆ, ರಾತ್ರಿ ಹೊತ್ತು ಲಾರಿಗಳನ್ನು ಕಾಯುವುದನ್ನು ಬಿಟ್ಟರೆ ಇವರಿಗೆ ಬೇರೆ ಉದ್ಯೋಗ ಇಲ್ಲ. ಇವತ್ತಿನದಿವಸ ಫಾರೆಸ್ಟ್ ಇಲಾಖೆಯ ಜೀಪ್ ಡ್ರೈವರ್ ಹತ್ತಿರ ಮೊಬೈಲ್ ಇದೆ. ಇದನ್ನು ಮೈನ್ಸ್‌ರವರು ಕೊಟ್ಟಿರುತ್ತಾರೆ. ಇದನ್ನು ಇಲಾಖೆಯವರು ಕೊಟಿಲ್ಲ. ಈ ಸಂದರ್ಭದಲ್ಲಿ ನಿಜವಾದ ಒಂದು ಮಾತನ್ನು ಹೇಳುತ್ತೇನೆ. ಅದೇನೆಂದರೆ, ಸಾಹೇಬರು ಈಗ ಮೈನ್ಸ್‌ಗೆ ಬರುತ್ತಾರೆ ಇನ್ನೇನು ಅವರು ಹೊರಡುತ್ತಾರೆಂದು ಆ ಜೀಪ್‌ನ ಡ್ರೈವರ್ ಮೊಬೈಲ್ ಮೂಲಕ ಮೈನ್ಸ್‌ರವರಿಗೆ ತಿಳಿಸುತ್ತಾನೆ. ಇವತ್ತಿನದಿವಸ ಅವರ ನೆಟ್‌ವರ್ಕ್ ಎಷ್ಟು ಚೆನ್ನಾಗಿದೆ ಎಂದರೆ, ಅವರೆಲ್ಲರೂ ಮದ್ರಾಸ್, ಪೂನಾ ಮತ್ತು ಗೋವಾದಲ್ಲಿ ಕುಳಿತುಕೊಂಡು ನಮ್ಮನ್ನೆಲ್ಲಾ ಆಳುತ್ತಿದ್ದಾರೆ. ಈ ಮಧ್ಯೆ ನಮ್ಮ ಸರ್ಕಾರ ಒಂದು ನಿರ್ಧಾರ ತೆಗೆದುಕೊಂಡಿದೆ. ಅದೇನೆಂದರೆ, ಡಕಾಯಿತಿ ಮತ್ತು ನಕ್ಸಲೈಟ್ಸ್ ಕರ್ನಾಟಕದಲ್ಲಿ ಕಡಿಮೆ ಆಗಬೇಕಾದರೆ ಅಲ್ಲಿ ರಾತ್ರಿ-ಹಗಲು ಚಟುವಟಿಕೆ ಇರಬೇಕೆಂದರೆ ಮೈನಿಂಗ್ ಆಪರೇಷನ್ ಮಾಡುವುದು ಸೂಕ್ತ ಎಂದು ನಿರ್ಧಾರ ತೆಗೆದುಕೊಂಡಿದ್ದಾರೆ. ಇದು ನಿಜವಾಗಿಯೂ ಕೂಡ ಬಹಳ ದುರ್ದೈವದ ಸಂಗತಿ. ಈ ರಾಷ್ಟ್ರದ ಸಂಪತ್ತನ್ನು ಉಳಿಸಿ ಎಂದು ನಾವು ಹೇಳಿದರೆ, ಅಲ್ಲಿ ರಾತ್ರಿ ಹೊತ್ತು ಚಟುವಟಿಕೆ ಇದ್ದರೆ ನಕ್ಸಲೈಟ್ಸ್ ಚಟುವಟಿಕೆ ಕಡಿಮೆಯಾಗುತ್ತೆಂದು ಹೇಳುತ್ತಾರೆ. ವೀರಪ್ಪನ್ ಎಂಬ ಪುಣ್ಯಾತ್ಮ ಹುತಾತ್ಮನಾಗಿ ಇವತ್ತು ಸತ್ತು ಹೋಗಿದ್ದಾನೆ. ಕನಿಷ್ಠ ಆತ ಯಾವುದೇ ಒಂದು ಪಾಪವನ್ನು ಮಾಡಿರಲಿಲ್ಲ. ಇವತ್ತಿನದಿವಸ ಅಲ್ಲಿ ಅಷ್ಟು ಮೈನ್ಸ್ ಉಳಿಸುವಂಥ ಪುಣ್ಯದ ಕೆಲಸವನ್ನು ಆತ ಮಾಡಿದ್ದಾನೆ. ಆತನ ಭಯಕ್ಕೋಸ್ಕರ ಅಲ್ಲಿ ಕದ್ದು ಹೊಡೆಯುತ್ತಿದ್ದ ಕ್ವಾರಿ ನಿಂತಿತ್ತು. ಅವನ ಭಯಕ್ಕೆ ಅಲ್ಲಿ ನಿಮ್ಮ ಗ್ರಾನೈಟ್ ಬಿಸಿನೆಸ್ ನಿಂತಿತ್ತು. ಈಗ ವೀರಪ್ಪನ್ ಸತ್ತು ಹೋಗಿದ್ದರಿಂದ ಅದೂ ಕೂಡ ಜನರಲೈಜ್ ಆಗಿಬಿಟ್ಟಿದೆ. ಈಗ ಯಾರು ಬೇಕಾದರೂ ಸಾರಾಸಗಟಾಗಿ ತೆಗೆದುಕೊಂಡು ಹೋಗಬಹುದಾಗಿದೆ. ಈಗ ನಾವೇ ಒಂದು ತೀರ್ಮಾನ ತೆಗೆದುಕೊಂಡುಬಿಟ್ಟಿದ್ದೇವೆ. ಅದೇನೆಂದರೆ, ಇದನ್ನು ಅಲ್ಲಿ ಪೋಲೀಸ್‌ನವರನ್ನು ಕಾಯುವುದಕ್ಕೆ ಹಾಕುವುದು ಬೇಡ, ಅಲ್ಲಿರತಕ್ಕಂಥ ಕಳ್ಳರನ್ನು ಕಳ್ಳರೇ ಕಾಯ್ದರೆ ಚೆನ್ನಾಗಿರುತ್ತದೆ. ಆದ್ದರಿಂದ, ನಾವೇಕೆ ರಿಸ್ಕ್ ತೆಗೆದುಕೊಳ್ಳಬೇಕು. ಏಕೆಂದರೆ, ಅವರವರಿಗೆ ಗೊತ್ತಿರುತ್ತದೆ ಎಂದು ಮಾಡತಕ್ಕಂಥದ್ದು ಸರ್ಕಾರದ ಒಂದು ನೀತಿಯೇ ನಕ್ಸಲೈಟ್ಸ್ ಆಕ್ಟಿವಿಟಿಯನ್ನು ಕಂಟ್ರೋಲ್ ಮಾಡುವುದಕ್ಕೆ ಮೈನಿಂಗ್ ಆಪರೇಷನ್ಸ್‌ನ್ನು ಜಾಸ್ತಿ ಮಾಡುತ್ತೇವೆಂದು ಈ ಸರ್ಕಾರ ಭಾಷಣ ಮಾಡಿಬಿಟ್ಟರೆ ಈ ರಾಜ್ಯದ ಮೇಲೆ ಪ್ರೀತಿ ಇಟ್ಟುಕೊಂಡಿರುವವರ ಗತಿ ಏನಾಗಬೇಕು?

ಶ್ರೀ ವಾಟಾಳ್ ನಾಗರಾಜ್: ಹಾಗಾದರೆ, ಅಲ್ಲಿರತಕ್ಕಂಥ ಪೋಲೀಸ್‌ನವರನ್ನು ತೆಗೆದು ಗಣಿ ತೆಗೆಯುವವರನ್ನೇ ಅಲ್ಲಿಟ್ಟುಬಿಡಿ. ಅಲ್ಲಿ ಯಾವ ಪೋಲೀಸ್‌ನವರು ಬೇಡ ಮತ್ತು ಎಸ್‌ಟಿಎಫ್ ನವರೂ ಕೂಡ ಬೇಡ. ಒಬ್ಬರನ್ನೂ ಅಲ್ಲಿಗೆ ಹಾಕುವುದು ಬೇಡ. ಗಣಿಯನ್ನು ನೀವು ಎಷ್ಟು ಬೇಕಾದರೂ ಲೂಟಿ ಮಾಡುತ್ತಿರಿ, ಅಲ್ಲಿಗೆ ನಕ್ಸಲೈಟ್ಸ್ ಯಾರೂ ಬರುವುದಿಲ್ಲವೆಂದು ಹೇಳತಕ್ಕಂಥ ಈ ಒಂದು ಸೂತ್ರ ಪ್ರಪಂಚದ ಇತಿಹಾಸದಲ್ಲಿಯೇ ಎಲ್ಲಿಯೂ ಕೂಡ ಇಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಇದಕ್ಕೊಂದು ಎಂ.ಎಂ.ಎಲ್. ಎನ್ನತಕ್ಕಂಥ ಒಂದು ಕಂಪನಿ ಇತ್ತು. ಇವತ್ತಿನದಿವಸ ಆ ಕಂಪನಿ ಏನಾಯಿತು? ನಷ್ಟದಲ್ಲಿದ್ದಾಗ 40 ಅಥವಾ 60 ರೂಪಾಯಿಗೆ ಒಂದು ಟನ್ ಮೈನ್ಸ್ ಸಿಗುವಾಗ ಇದನ್ನು ಎಂಎಂಎಲ್ ಆಪರೇಟ್ ಮಾಡುತ್ತಿತ್ತು. ಸಾರಾಯಿ ಕುಡಿಯುವವರನ್ನು ಪಾನ ನಿಗಮಕ್ಕೆ ಹೋಗಿ ಎಂದು ಹೇಳುವ ಹಾಗೆ ಮೈನ್ಸ್ ಹೋಲ್‌ಸೇಲ್ ಮಾಡತಕ್ಕಂಥವರೆಲ್ಲರೂ ಎಂ.ಎಂ.ಎಲ್. ಮೂಲಕ ಮಾಡಿ ಎಂದು ತಾವೇಕೆ ಆದೇಶ ಕೊಡುವುದಿಲ್ಲ? Any shipment through MML ಎಂದು ಮಾಡಿ. ಈ ರೀತಿ ಮಾಡಿದಾಗ ಸರ್ಕಾರಕ್ಕೆ ಎಷ್ಟು ದುಡ್ಡು ಬರುತ್ತದೆ ಎಂಬುದನ್ನು ತಾವು ನೋಡಿ. ಮೈನ್ಸ್‌ಗೆ ಕೊಟ್ಟು ಇದಕ್ಕೊಂದು ರೇಟ್ ಫಿಕ್ಸ್ ಮಾಡಿ, ಶಿಫ್‌ಮೆಂಟ್‌ನ್ನು ಎಂ.ಎಂ.ಎಲ್. ಮೂಲಕ ಕೊಡಬೇಕೆಂದು ಒಂದು ಆದೇಶ ಮಾಡಿ, ಅಥವಾ ಎಂ.ಎಸ್.ಐ.ಎಲ್. ಮೂಲಕ ಕೊಡಬೇಕೆಂದು ಮಾಡಿ. ಇದನ್ನು ತಾವು ಏಕೆ ಮಾಡುತ್ತಿಲ್ಲ? ಇವತ್ತಿನದಿವಸ ಖಾಸಗಿಯವರು ಮಂಗಳೂರು ಪೋರ್ಟ್‌ಗೆ ಹೋಗಿ ಡಂಪ್ ಮಾಡುವುದಕ್ಕಾಗಿ ಏತಕ್ಕೆ ಬಿಡುತ್ತಿದ್ದೀರಿ? Make it an agency. ನಿಮ್ಮ ಹತ್ತಿರ ಮೈನ್ಸ್ ಇದ್ದರೆ, please give it to our MML or please give it to MSIL.

ಎಂ.ಎಸ್.ಐ.ಎಲ್. ಮೂಲಕವೇ ಎಕ್ಸ್‌ಪೋರ್ಟ್ ಆಗಬೇಕೆಂದು ಹೇಳಿ. ಚೀನಾ ದೇಶದಲ್ಲಿ 2007ರಲ್ಲಿ ಮತ್ತೆ ಮೈನ್ಸ್ ಏನಾದರೂ ಪ್ರಾರಂಭವಾಗಿ, ಇಲ್ಲಿ ಏನಾದರೂ ಡಿಮಾಂಡ್ ನಿಂತು ಹೋದರೆ, ನಿಮ್ಮನ್ನು ಇಲ್ಲಿ ಕೇಳುವವರು ದಿಕ್ಕಿರುವುದಿಲ್ಲ. ಇದನ್ನು ಮತ್ತೆ ಎಂ.ಎಂ.ಎಲ್.ನವರೇ ಕೊಳ್ಳಬೇಕಾಗುತ್ತದೆ. ಹಿಂದೆ ಎಂ.ಎಂ.ಎಲ್.ರವರು ಸುಮಾರು 10 ಲಕ್ಷ ಮೆಟ್ರಿಕ್ ಟನ್‌ನ್ನು 60, 65 ರೂಪಾಯಿಗೆ ಮಾರಾಟ ಮಾಡಿದ್ದಾರೆ. ಏಕೆಂದರೆ, ಅವತ್ತಿನ ದಿವಸ ಇದನ್ನು ಕೇಳುವವರು ಇರಲಿಲ್ಲ. ಆದರೆ, ಇವತ್ತಿನ ದಿವಸ ಆ ಎಂ.ಎಂ.ಎಲ್. ಸಂಸ್ಥೆಯನ್ನು ಬಾಗಿಲು ಹಾಕಿಸಿದ್ದೀರಿ. ಇವತ್ತು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ್ನು . . . . . It is not Sales? ಏತಕ್ಕಾಗಿ ಇದನ್ನು ಏಜೆನ್ಸಿ ಮಾಡುತ್ತಿಲ್ಲ? ಲಿಕ್ಕರ್ ಮಾರುವುದಕ್ಕೆ, ಸಾರಾಯಿ ಮಾರುವುದಕ್ಕೆ ಪಾನನಿಗಮ ಮಾಡಬೇಕೆಂದು ಆಲೋಚನೆ ಬರುತ್ತದೆ. ಮೈನ್ಸ್ ಮಾರುವುದಕ್ಕೆ ನಮ್ಮ ಹತ್ತಿರ ಇರತಕ್ಕಂಥ ಒಂದು ಏಜೆನ್ಸಿಯನ್ನು ಬಳಸಿಕೊಳ್ಳುವುದಕ್ಕೆ ಆಗುತ್ತಿರಲಿಲ್ಲವೇ? ಇದನ್ನು ಕರ್ಬ್ ಮಾಡುವುದಕ್ಕೆ ಆಗುತ್ತಿರಲಿಲ್ಲವೆ? ಇವತ್ತು ಏನು ಎಗ್ಸಾಬಿಟೆಂಟ್ ಪ್ರಾಫಿಟ್ ಬರುತ್ತಿದೆ, ಅಂದರೆ, ಇದು ಯಾರಿಗಾದರೂ ಬರಲಿ. ಆದರೆ, ಅವರ ಆಸ್ತಿಪಾಸ್ತಿ ಬಗ್ಗೆ ಏನಾದರೂ ಅಕೌಂಟೆಬಲ್ ಮಾಡಿದ್ದೀರಾ? ಇಷ್ಟೆಲ್ಲಾ ಮೈನ್ಸ್ ಮಾಡುವವರು are they covered under Income Tax? Are they covered under Sales Tax? ಯಾವ ಕಾಯ್ದೆ ಕೆಳಗಡೆ ಅವರು ನಿಮಗೆ ಅಕೌಂಟೆಬಲ್ ಆಗಿದ್ದಾರೆ? ಇವತ್ತಿನ ದಿವಸ ಎಷ್ಟೆಷ್ಟು ಕೋಟಿ ರೂಪಾಯಿಗಳನ್ನು ದುಡಿದು ಅವರು ಯಾವ ಟ್ಯಾಕ್ಸ್‌ನ್ನು ಇವತ್ತು ಕಟ್ಟುತ್ತಿದ್ದಾರೆ? ಮತ್ತೆ ಇನ್ನೊಂದು ವಿಷಯ ಏನೆಂದರೆ ಇವತ್ತು ಅನೇಕ ಲೋಕಲ್ ಸಂಸ್ಥೆಗಳಿಂದ ಮೈನ್ಸ್ ಮಾಡಲಾಗುತ್ತಿದೆ. ಹೀಗೆ ಮೈನ್ಸ್ ಮಾಡುವುದರಿಂದ ನಮ್ಮ ರಸ್ತೆಗಳು ಮತ್ತು ಅಲ್ಲಿ ಪರಿಸರ ಹಾಳಾಗುತ್ತಿದೆ. ಮೈನ್ಸ್‌ನಿಂದ ಆ ತಾಲ್ಲೂಕಿಗೆ ಬೆನಿಫಿಟ್ ಆಗಬೇಕಲ್ಲವೆ? ಒಂದು ಟನ್‌ಗೆ 5 ಅಥವಾ 10 ರೂಪಾಯಿ ಲೆವಿ ಸೆಸ್ ಹಾಕಿ. ಈ ಒಂದು ಹಣದಿಂದ ಗ್ರಾಮಪಂಚಾಯತ್, ಜಿಲ್ಲಾಪಂಚಾಯತ್ ಅಥವಾ ಮುನಿಸಿಪಾಲಿಟಿ ಅಥವಾ ತಾಲ್ಲೂಕಿನ ಅಭಿವೃದ್ಧಿಗೆ ಬಳಸಿಕೊಳ್ಳುವಂಥ ಒಂದು ಸ್ಥಿತಿಯನ್ನು ನಿರ್ಮಾಣ ಮಾಡಬೇಕಲ್ಲವೆ? ಇಷ್ಟೆಲ್ಲಾ ಲೂಟಿ ಮಾಡುತ್ತಿದ್ದೀರಿ, ಆದ್ದರಿಂದ, ಆ ತಾಲ್ಲೂಕು ಅಭಿವೃದ್ಧಿಗೆ

ಇಷ್ಟು ಮಟ್ಟಿಗಾದರೂ ಕಾಂಟ್ರಿಬ್ಯೂಟ್ ಮಾಡಬೇಕೆಂದು ಅವರನ್ನು ಕರೆದು ಹೇಳಬೇಕೋ ಅಥವಾ ಬೇಡವೋ? ಇದನ್ನು ಮಾಡದೆ, ಆತ ಕೊಡತಕ್ಕಂಥದ್ದೆಲ್ಲಾ ಬೆಂಗಳೂರಿನಲ್ಲಿ ಇರಲಿ, ದೋಚತಕ್ಕಂಥದ್ದೆಲ್ಲಾ ಹಳ್ಳಿಗಳಲ್ಲಿ ಇರಲಿ ಎನ್ನತಕ್ಕಂಥ ನಿರ್ಧಾರ ತೆಗೆದುಕೊಂಡು ಇವತ್ತಿನದಿವಸ ಮೈನ್ಸ್‌ನ್ನು ಏನು ಮಾಡುತ್ತಿದ್ದೀರಿ, ಇದನ್ನು ಯಾವುದೇ ಘನತೆ ತರತಕ್ಕಂಥ ಸರ್ಕಾರ ಮಾಡತಕ್ಕಂಥ ಕೆಲಸವಲ್ಲ. ಆದ್ದರಿಂದ, ನಿಮ್ಮ ಬೇಡಿಕೆಗೆ ನಮ್ಮ ಓಟು ಬೇಕಿಲ್ಲ. ಆ ದುಡ್ಡಿನಲ್ಲಿಯೇ ಬೇಡಿಕೆಯೆಲ್ಲವನ್ನೂ ಪಾಸ್ ಮಾಡಿಕೊಳ್ಳಬಹುದಾಗಿತ್ತು. ಇವತ್ತಿನದಿವಸ ಅಷ್ಟು ದುಡ್ಡು ಮಂಗಳೂರು ಪೋರ್ಟ್‌ನಲ್ಲಿ ಹೋಗುತ್ತಿದೆ. ಇದನ್ನು ನಾನು ವಿರೋಧ ಮಾಡುತ್ತಿದ್ದೇನೆ. ಈ ಸರ್ಕಾರಕ್ಕೆ ಗ್ರಾಮೀಣ ಪ್ರದೇಶದಲ್ಲಿ ಅಂದರೆ ಮೈನ್ಸ್ ನಡೆಯುವ ಕಡೆ ಒಳ್ಳೆಯ ಹೆಸರು ಇದೆ ಎಂದು ತಾವು ತಿಳಿದುಕೊಳ್ಳಬಾರದು. ನಾವೊಂದು ಓ.ಎನ್.ಜಿ.ಸಿ. ಪ್ರಾಜೆಕ್ಟ್‌ನ್ನು ಕ್ಲಿಯರ್ ಮಾಡಿದ್ದೇವೆಂದು ನಮ್ಮ ಎದುರಿಗೆ ತಾವು ಹೇಳಬಹುದು. ಆದರೆ, ಇವತ್ತಿನ ದಿವಸ ಓ.ಎನ್.ಜಿ.ಸಿ. ಪ್ರಾಜೆಕ್ಟ್‌ನ್ನು ಕ್ಲಿಯರ್ ಮಾಡುವುದು ಎಷ್ಟು ಶ್ರೇಷ್ಠವೋ, ಅದೇರೀತಿಯಾಗಿ ನಮ್ಮ ಸಂಪತ್ತನ್ನು ಉಳಿಸತಕ್ಕಂಥದ್ದು ಅಷ್ಟೇ ಶ್ರೇಷ್ಠ. ಇಂಡಸ್ಟ್ರಿ ಸ್ಟಾರ್ಟ್ ಮಾಡಿ ಎಂದು ನಾನು ಹತ್ತು ಸಲ ಕೇಳಿದ್ದೇನೆ. When you know ಅಲ್ಲಿ ಒಳ್ಳೆಯ ಸೋರ್ಸ್ ಇದೆ, ಮತ್ತೆ ನಿಮಗೆ ಓರ್ ಇದೆ, ಅದರಲ್ಲಿ ಫೈನ್‌ನ್ನು ಬೇರೆ ಕಡೆಗೆ ಕಳುಹಿಸಿಬಿಡಿ, ಇದರಲ್ಲಿ ಕಳಪೆ ಇರತಕ್ಕಂಥದ್ದನ್ನು ಒಂದು ಸ್ಪಾಂಜ್ ಐರನ್ ಪ್ಲಾಂಟ್ ಮಾಡುವುದಕ್ಕೆ ಕೊಡಿ, pellets ಮಾಡುವುದಕ್ಕೆ ನಮಗೆ ಕೊಡಿ. ಏನಾದರೂ ಮಾಡಿ ಅಲ್ಲಿ 500 ಅಥವಾ 1000 ಜನರಿಗೆ ಉದ್ಯೋಗ ಕೊಡತಕ್ಕಂಥ ಸ್ಥಿತಿಯನ್ನು ನಿರ್ಮಾಣ ಮಾಡಿ ಎಂದರೆ ಇದನ್ನು ಮಾಡುವಂಥದ್ದೇ ಇಲ್ಲ. ಜೆಸಿಬಿ, ಹಿಟಾಚಿ ತಂದು ಮೈನ್ಸ್ ಮಾಡಿಕೊಂಡು ಹೋದರು. ಅದನ್ನು ನಾವು ನಿಂತುಕೊಂಡು ನೋಡುವುದಷ್ಟೆ. ಮಾನ್ಯ ಖರ್ಗೆಯವರೆ, ನಿಮ್ಮ ಎಕ್ಸ್‌ಪ್ರೆಸ್ ಬಸ್ ನಮ್ಮ ಊರ ಮುಂದೆ ಹೋಗುತ್ತದೆ, ಆಗ ಬಸ್ ಎಷ್ಟು ಚೆನ್ನಾಗಿದೆ ಎಂದು ನಾವು ನೋಡುವುದಷ್ಟೆ. ಬಸ್‌ಗೆ ಹತ್ತುವುದಿಲ್ಲ, ಇಳಿಯುವುದಿಲ್ಲ. ಇವತ್ತಿನದಿವಸ ಮೈನ್ಸ್ ಪರಿಸ್ಥಿತಿ ಕೂಡ ಇದೇ ರೀತಿಯಾಗಿದೆ. ಅಂದರೆ, ಮೈನ್ಸ್ ಲಾರಿಗಳು ಎಷ್ಟು ಚೆನ್ನಾಗಿವೆ ಮತ್ತೆ ಲಾರಿಗಳು ಹೇಗೆ ಓಡುತ್ತವೆ ಎನ್ನತಕ್ಕಂಥದ್ದನ್ನು ನೋಡುವಂಥ ಪರಿಸ್ಥಿತಿ ಬಂದಿದೆ. ಇವತ್ತಿನದಿವಸ ಪ್ರತಿ ದಿವಸ ಚಿಕ್ಕನಾಯಕನಹಳ್ಳಿಯಲ್ಲಿ 600 ರಿಂದ 1200 ಟ್ರಕ್‌ಗಳು ಓಡಾಡುತ್ತಿವೆ. ಇದರಿಂದ ಒಂದು ರೂಪಾಯಿ ವರಮಾನವನ್ನು ಜನರೇಟ್ ಮಾಡುವುದಕ್ಕೆ ಸಮರ್ಥರಾಗಿಲ್ಲ. ಆದ್ದರಿಂದ, ನಿಮ್ಮಂಥವರು ಸರ್ಕಾರದಲ್ಲಿರುವುದಕ್ಕೆ ಅನ್‌ಫಿಟ್ ಎಂದು ಈ ಮೂಲಕ ಹೇಳುತ್ತಿದ್ದೇನೆ. ಏಕೆಂದರೆ, ನಮಗೆ ಬರಬೇಕಾಗಿರತಕ್ಕಂಥ ರೆವಿನ್ಯೂವನ್ನು ಕೊಳ್ಳೆಹೊಡೆಯುವುದಕ್ಕೆ ಬಿಟ್ಟು ನಮ್ಮ ಡಿಮಾಂಡ್ಸ್‌ನ್ನು ಇಲ್ಲಿ ಪಾಸ್ ಮಾಡಿಕೊಡಿ ಎಂದು ಕೇಳತಕ್ಕಂಥದ್ದು ಯಾವ ಲೆಕ್ಕಾಚಾರ? ಅಲ್ಲಿ ಹೋಗುತ್ತಿರುವ ದುಡ್ಡನ್ನು ಉಳಿಸಿ ನಮ್ಮ ಸೋಷಿಯಲ್ ವೆಲ್‌ಫೇರ್ ಆಕ್ಟಿವಿಟೀಸ್‌ರವರ ಕೈಗೆ ಕೊಡಿ. ಇದನ್ನು ಮಾಡಬೇಕೆಂದು ಹೇಳುತ್ತಾ, ನಾನು ಮಾತನಾಡುವುದಕ್ಕೆ ತಾವು ಸಮಯವನ್ನು ನಿರ್ಬಂಧ ಮಾಡಿರುವುದರಿಂದ ಇನ್ನು ಒಂದೆರಡು ಮಾತುಗಳನ್ನು ಆಡಳಿತದ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನದಿವಸ ಈ ರಾಜ್ಯದ ಜನರಲ್ ಅಡ್ಮಿನಿಸ್ಟ್ರೇಷನ್ ನಿಜವಾಗಿಯೂ ಕೂಡ ಅತಂತ್ರ ಸ್ಥಿತಿಗೆ ಬಂದು ತಲುಪಿಬಿಟ್ಟಿದೆ. ಸಮ್ಮಿಶ್ರ ಸರ್ಕಾರ ಬಂದಾಗ ಆಡಳಿತ ಹಾಳಾಗುವುದು ಸರ್ವೆ ಸಾಮಾನ್ಯ. ಈ ಸಮ್ಮಿಶ್ರ ಸರ್ಕಾರದಲ್ಲಿ ಅದು ನೆಲಕಚ್ಚಿದೆ, ಮತ್ತೆ ಮೇಲಕ್ಕೆ ಏಳಲಾರದ ಸ್ಥಿತಿಗೆ ಬಂದಿದೆ. ಆಡಳಿತದ ಚುಕ್ಕಾಣಿಯ ಮೇಲೆ ಸನ್ಮಾನ್ಯ ವೀರೇಂದ್ರಪಾಟೀಲ್‌ರವರ ಕಾಲದಲ್ಲಿ ಮತ್ತು ಸನ್ಮಾನ್ಯ

ರಾಜಶೇಖರ್‌ಮೂರ್ತಿಯವರ ಕಾಲದಲ್ಲಿದ್ದಂಥ ಡಿಸಿಪ್ಲಿನ್ ಅನ್ನು ವಾಪಸ್ಸು ತರಬೇಕಾದರೆ ಕನಿಷ್ಠ ಇನ್ನು 20 ವರ್ಷ ಇಲ್ಲಿಂದ ಮುಂದಕ್ಕೆ ಸತತವಾಗಿ ನೂರಕ್ಕೆ ನೂರು ಡಿಸಿಪ್ಲೀನ್ ಅಡ್ಮಿನಿಸ್ಟ್ರೇಷನ್ ಕೊಡುವಂಥವರು ಬೇಕಾದರೆ ಮುಂದಿನ 20 ವರ್ಷಗಳ ನಂತರ ಇದನ್ನು ಏನಾದರೂ ಟ್ರ್ಯಾಕ್ ಮೇಲೆ ತರಬಹುದು. ಇವತ್ತಿನದಿವಸ ಪೊಲೀಸ್ ಅಡ್ಮಿನಿಸ್ಟ್ರೇಷನ್‌ನಿಂದ ಹಿಡಿದು ಡಿಪಿಎಆರ್ ವರೆಗೆ ಆಡಳಿತವೇ ಇಲ್ಲ. ಏನೋ ನಡೆಯುತ್ತಿದೆ, ನಡೆದುಕೊಂಡು ಹೋಗುತ್ತಿದೆ, ಮತ್ತೆ ನಮ್ಮ ಸಣ್ಣ ಪುಟ್ಟ ಕೆಲಸಗಳನ್ನು ಮಂತ್ರಿಗಳು ಮಾಡಿಕೊಡುತ್ತಿದ್ದಾರೆ, ನಾವು ತಿರುಗಾಡಿಕೊಂಡು ಹೋಗುತ್ತಿದ್ದೇವೆ ಎಂಬುದನ್ನು ಬಿಟ್ಟರೆ ಇವತ್ತಿನದಿವಸ ಆಡಳಿತ ಕರ್ನಾಟಕದಲ್ಲಿ ಉಳಿದಿದೆ ಎಂದು ನಾವು ಭಾವಿಸಬಾರದು. ಇವತ್ತು ಯಾವುದೇ ಇಲಾಖೆಯಲ್ಲಿ ಅಡ್ಮಿನಿಸ್ಟ್ರೇಷನ್ ಇಲ್ಲ. ಇದನ್ನು ನಿನ್ನೆ ದಿವಸ ಮಾನ್ಯ ರಮೇಶ್‌ಕುಮಾರ್‌ರವರು ಇಲ್ಲಿ ಕುಳಿತುಕೊಂಡು ಹೇಳುತ್ತಿದ್ದರು. ಯಾವ ಇಲಾಖೆಯಲ್ಲಿದೆ? ಇವತ್ತಿನದಿವಸ ಎಲ್ಲಿಯೂ ಕೂಡ ಇಲ್ಲ. ಡಿ.ಪಿ.ಎ.ಆರ್.ನವರು ಅದು ಮಾಡುತ್ತೇವೆ, ಇದು ಮಾಡುತ್ತೇವೆಂದು ಪುಸ್ತಕದಲ್ಲಿ ಬಹಳ ಚೆನ್ನಾಗಿ ಬರೆದಿದ್ದಾರೆ. ಆದರೆ, ಅವರು ಏನು ಮಾಡುತ್ತಿದ್ದಾರೆ? ಅವತ್ತು ನಾನೊಂದು ಪ್ರಶ್ನೆಯನ್ನು ಕೇಳಿದ್ದೆ. ಅದೇನೆಂದರೆ, ಈ ರಾಜ್ಯದಲ್ಲಿ ಎಷ್ಟು ಜನ ತಹಶೀಲ್ದಾರ್ ಹುದ್ದೆಗಳು ಖಾಲಿ ಇವೆ? ಇಷ್ಟು ಜನ ಶಿರಸ್ತೇದಾರರು ಖಾಲಿ ಇದ್ದಾರೆ? ಮತ್ತೆ ಎಷ್ಟು ಜನ ಶೇಖ್‌ದಾರರು ಖಾಲಿ ಇದ್ದಾರೆ, ಮತ್ತೆ ಎಷ್ಟು ಜನ ವಿಲೇಜ್ ಅಕೌಂಟೆಂಟ್‌ಗಳು ಖಾಲಿ ಇದ್ದಾರೆ ಎಂದು ಮತ್ತು ಇವರನ್ನು ಏಕೆ ನೇಮಕಾತಿ ಮಾಡಿಲ್ಲ ಎಂದು ಕೇಳಿದರೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಇವತ್ತು 27ರಲ್ಲಿ 23 ಜನ ಚೀಫ್ ಇಂಜಿನಿಯರ್ಸ್ ಪೋಸ್ಟ್‌ಗಳು ಖಾಲಿ ಇವೆ, ಇವುಗಳನ್ನು ಏಕೆ ತುಂಬಿಲ್ಲವೆಂದು ಮಾನ್ಯ ರೇವಣ್ಣನವರಿಗೆ ಕೇಳಿದ್ದಕ್ಕೆ, ತುಂಬುವುದಿಲ್ಲ ಎಂದು ಹೇಳುತ್ತಾರೆ. ಕಳೆದ ನಾಲ್ಕು ತಿಂಗಳಿಂದ 40 ಜನ ಸರ್ಕಲ್ ಇನ್ಸ್‌ಪೆಕ್ಟರ್‌ರವರು ಪೋಸ್ಟಿಂಗ್‌ಗೋಸ್ಕರ ಕಾಯುತ್ತಿದ್ದಾರೆ. ಮತ್ತೆ ಸುಮಾರು 13 ರಿಂದ 15 ಜನ ಡಿವೈಎಸ್‌ಪಿಗಳು ಪೋಸ್ಟಿಂಗ್ಸ್‌ಗೋಸ್ಕರ ಕಾಯುತ್ತಿದ್ದಾರೆ. ಒಂದು ಕಡೆ ಐಎಎಸ್ ನವರು. ಆಡಳಿತ ಸುಧಾರಣಾ ಆಯೋಗ ಮಾಡಿ ಅದಕ್ಕೆ ಮಾನ್ಯ ಹಾರ್ನಾಳ್ಳಿ ರಾಮಸ್ವಾಮಿಯವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿತ್ತು. ಯಾವ್ಯಾವ ಕಡೆ ಹುದ್ದೆಗಳನ್ನು ಕಡಿಮೆ ಮಾಡಿಕೊಂಡು ಬರಬೇಕೆಂದು ಅವರು ಶಿಫಾರಸ್ಸು ಮಾಡಿದ್ದಾರೆ. ಅಂದರೆ, ಇದರ ಅರ್ಥ ಐಎಎಸ್ ಕೇಡರ್ ಹುದ್ದೆಗಳನ್ನು ಜಾಸ್ತಿ ಮಾಡಿಕೊಂಡು ಬನ್ನಿ ಅಂತಾನಾ? ಮಾನ್ಯ ರೇವಣ್ಣನವರ ಇಲಾಖೆಯಾದ ಕೆಪಿಟಿಸಿಎಲ್ ನಲ್ಲಿ ಒಂದು ಐಎಎಸ್ ಪೋಸ್ಟ್ ಇತ್ತು. ಆದರೆ ಈಗ 5 ಆಗಿದೆ. ಇದು ಏಕೆ ಎಂದರೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಮತ್ತೆ ಒಂದೊಂದು ಜಿಲ್ಲೆಗೆ ಒಬ್ಬರು ಐಎಎಸ್ ಅಧಿಕಾರಿಗಳು ಇದ್ದರು. ಆದರೆ, ಈಗ ಇಬ್ಬರು ಆಗಿದ್ದಾರೆ. ಇದರಲ್ಲಿ ಒಂದು ಡಿ.ಸಿ. ಮತ್ತೊಂದು ಸಿ.ಇ.ಓ. ಐಎಎಸ್ ಹುದ್ದೆಗಳಾಗಿವೆ. ಇದು ಕಡಿಮೆ ಆಗುತ್ತಿಲ್ಲ. ಇವರದ್ದು ಜಾಸ್ತಿ ಆಗುತ್ತಾ ಹೋಗುತ್ತಿದೆ. ಆದರೆ ಲೋಯರ್ ಕೇಡರ್ ಕಡಿಮೆಯಾಗುತ್ತಾ ಹೋಗುತ್ತಿದೆ. ಇವತ್ತಿನದಿವಸ ಕೆಲಸ ಮಾಡುವವರು ಇಲ್ಲ, ಕೇವಲ ಆದೇಶ ಮಾಡುವವರು ಜಾಸ್ತಿಯಾಗಿದ್ದಾರೆ. ಇದರಿಂದಾಗಿ ಆದೇಶಕ್ಕೆ ಮೂರು ಕವಡೆ ಕಿಮ್ಮತ್ತು ಇಲ್ಲದ ಹಾಗೆ ಆಗಿದೆ. ತಾವು ನನಗೆ ಏನಾದರೂ ಆದೇಶ ಕೊಟ್ಟರೆ ಸುಮಾರು 1 ಸಾವಿರ ಸರ್ಕಾರಿ ಆದೇಶಗಳು ಇಂಪ್ಲಿಮೆಂಟ್ ಆಗದೆ ಹಾಗೆಯೇ ಉಳಿದಿರತಕ್ಕಂಥದ್ದನ್ನು ತಮ್ಮ ಟೇಬಲ್ ಮುಂದೆ ತಂದು ಇಡುತ್ತೇನೆ. ಸೆಕ್ರೆಟರಿಯೇಟ್‌ನಲ್ಲಿ ಕುಳಿತುಕೊಂಡು ಒಂದು ಆರ್ಡರ್ ಮಾಡಿ followed by a Government Order or Court Order ಎಂದು ಹೇಳಿರುತ್ತಾರೆ. ಆದರೆ, ಕೆಳಗಡೆ

ಇದು ಇಂಪ್ಲಿಮೆಂಟ್ ಆಗುವುದೇ ಇಲ್ಲ. ಯಾವುದೇ ಆದೇಶ ಇಂಪ್ಲಿಮೆಂಟ್ ಆಗುತ್ತಿಲ್ಲ, ನಾನು ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರಿಗೆ ಒಂದು ಕಾಗದವನ್ನು ಕೊಟ್ಟಿದ್ದೆ, ಯಾರಿಗೋ ಒಬ್ಬರಿಗೆ ಗ್ರಾನೈಟ್ ಕೊಡಬೇಕಾಗಿದೆ ಅಂದರೂ ಅವರು ಕೊಡಲಿಲ್ಲ, ಅವರು ಕೋರ್ಟಿಗೆ ಹಾಕಿದ್ದಾರೆ, ಕೋರ್ಟ್ ಆದೇಶವಾಗಿದೆ. ದುಡ್ಡನ್ನಾದರೂ ಹಿಂದಕ್ಕೆ ಕೊಡಿ ಎಂದಾಗ ದುಡ್ಡು ಕೊಡಲಿಲ್ಲ. ನಿಮ್ಮ ಸೆಕ್ರೆಟರಿಗೆ ಗೌರ್‍ನಮೆಂಟ್ ಆದೇಶವಾಗಿದೆ ಅವರಿಗೆ ದುಡ್ಡು ಕೊಡಿಸಿ ಎಂದರೆ ಅವರಿಗೆ ಬರೆದು ಕಳುಹಿಸಿದರು ಇವರು, ಕೊಡುವುದಕ್ಕಾಗುವುದಿಲ್ಲ. ಯಾರೋ ಕೋರ್ಟಿಗೆ ಹೋಗಿದ್ದಾರೆ, ಅದಕ್ಕಾಗಿ ನಾವು ಅವರಿಗೆ ಕೊಡುವುದಕ್ಕಾಗುವುದಿಲ್ಲ ಎಂದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ(ಅರಣ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು ಮೀಟಿಂಗ್ ಕರೆದು ತೀರ್ಮಾನ ಮಾಡುತ್ತೇನೆಂದು ಆಗ ನಿಮಗೆ ಹೇಳಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಏಕೆ ಮಾಡಬೇಕು ಮೀಟಿಂಗ್? ನೋ ನೋ, ನಾನು ನಿಮ್ಮ ಸ್ಥಾನದಲ್ಲಿ ಮಂತ್ರಿಯಾಗಿದ್ದಿದ್ದರೆ ಅವರನ್ನು ಸಸ್ಪೆಂಡ್ ಮಾಡುತ್ತಿದ್ದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಇಮ್ಮೀಡಿಯೇಟ್ ಆಗಿ ಆಗಲೇ ನಾನು ಅವರನ್ನು ಕರೆದು ಕೇಳಿದ್ದೇನೆ. ನಿಮಗೆ ಪತ್ರವನ್ನು ಬರೆದಿದ್ದೇನೆ.

SRI J.C. MADHUSWAMY: When your Department's Secretary has taken a decision to pay back his money . . .

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಕೋರ್ಟಿಗೆ ಕೇಸ್ ಹಾಕಿರುವುದರಿಂದ ಅದು ಅಲ್ಲಿ ನಡೆಯುತ್ತಿರುವುದರಿಂದ ಅದಕ್ಕೆ ನಾನು ಮೀಟಿಂಗ್ ಕರೆದು ಡಿಸ್‌ಕಸ್ ಮಾಡಿ ಇಮ್ಮೀಡಿಯೇಟ್ ಸೆಟ್ಲಮೆಂಟ್ ಮಾಡುತ್ತೇನೆ ಎಂದು ಹೇಳಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ನಾನು ಕೇಳುವುದು ನೀವು ಮೀಟಿಂಗ್ ಏಕೆ ಮಾಡುತ್ತೀರಿ? ನಿಮ್ಮ ಸರ್ಕಾರಿ ಜಿ.ಓ. ಇಷ್ಯೂ ಆಗಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಬಹಳ ಜನ ಕೋರ್ಟಿಗೆ ಹಾಕಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ನೋ ನೋ ನನಗೆ ಅದು ಬೇಕಾಗಿಲ್ಲ; when a Government Order is issued, ಇವರಿಗೆ ಹಣ ಹಿಂದಕ್ಕೆ ಕೊಡಿ ಎಂದಾಗ ಮೀಟಿಂಗ್ ಏಕೆ ಮಾಡುತ್ತೀರಿ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಅವರಿಗೆ ದುಡ್ಡು ಕೊಟ್ಟು ಅದು ಎಷ್ಟು ಮಾಲು ಇದೆ ಅದನ್ನು ಮಾರಿದರೂ ದುಡ್ಡು ಜಾಸ್ತಿ ಬರುತ್ತದೆಂದು ಅದನ್ನೂ ಕೂಡ ನಾನು ಹೇಳಿದ್ದೇನೆ. ಅದಕ್ಕಾಗಿ ನಾನು ಅವರಿಗೆ ಈ ಮಾತನ್ನು ಹೇಳಿದ್ದೇನೆ. ಅದನ್ನು ಏಕೆ ಪೆಂಡಿಂಗ್ ಹಾಕಿದ್ದೇನೆಂದು ನಾನು ಹೇಳಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ತಮ್ಮದೊಂದು ಸರ್ಕಾರ, ಈ ಎಲ್ಲಾ ವಿವೇಚನೆಯನ್ನು ಈ ಎಲ್ಲಾ ಚರ್ಚೆಗಳನ್ನು ಜಿ.ಓ. ಇಷ್ಯೂ ಆಗುವುದಕ್ಕೆ ಮುಂದೆ ತಾವು ಮಾಡಿಕೊಳ್ಳಬೇಕು. ನೀವು ಚರ್ಚೆ ಮಾಡಬೇಡಿ ಎಂದು ನಾನು ಕೇಳುವುದಿಲ್ಲ ಸರ್. It is your department. You have to run the department. When once a Government Order is issued 3 years, 4 years ಆದರೂ ಕೂಡ ಇಂಪ್ಲಿಮೆಂಟಾಗುವುದಿಲ್ಲ. ಡಾ: ವೈ. ನಾಗಪ್ಪನವರ ಇಲಾಖೆಯಲ್ಲಿ

ಮೈಸೂರು ಲ್ಯಾಂಪ್ಸ್‌ನವರು ಮತ್ತು ಕರ್ನಾಟಕ ಟೆಲಿಕಾಂ ಲಿಮಿಟೆಡ್‌ನವರು ಏನಿದ್ದಾರೆ ಇವರಿಗೆ ಸಂಬಂಧಪಟ್ಟ ಹಾಗೆ 1993ರಲ್ಲಿಯೇ ಒಂದು ಡಿಸಿಷನ್ ಆಗಿದೆ. ಅಲ್ಲಿ 6 ಜನ ಇಲ್ಲಿ 11 ಜನ, ಎಸ್‌ಸಿ:ಎಸ್‌ಟಿ ಕಾರ್ಪೊರೇಶನ್‌ದಲ್ಲಿ ಡೆಪ್ಯುಟೇಶನ್‌ದಲ್ಲಿ ಕೆಲಸ ಮಾಡುವವರನ್ನು ಖಾಯಂ ಮಾಡಿಬಿಟ್ಟು ಅವರ ಸೇವೆಯನ್ನು ಅಲ್ಲಿ ತೆಗೆದುಕೊಳ್ಳಿ ಎಂದು ಹೇಳಿ 1993ರಲ್ಲಿ ಒಂದು ಆದೇಶವಾಗಿದೆ. ಉದಾಹರಣೆಗೆ ಹೇಳುತ್ತೇನೆ, ಅದು ಇವತ್ತಿನವರೆಗೂ ಮಾನ್ಯ ನಾಗಪ್ಪನವರೇ ಇಂಪ್ಲಿಮೆಂಟ್ ಆಗಿಲ್ಲ. ನಿಮ್ಮ ಎಸ್‌ಸಿ:ಎಸ್‌ಟಿ ಕಾರ್ಪೊರೇಶನ್‌ದಲ್ಲಿ ಮೈಸೂರ್ ಲ್ಯಾಂಪ್ಸ್‌ನಿಂದ ಡೆಪ್ಯುಟೇಷನ್ ಬಂದು ಅದನ್ನು ಮುಚ್ಚುವ ಕೆಳಗಡೆ ಏನು ಆದೇಶವಾಯಿತು, they have to be absorbed in the department. ಎಂದು ಇವತ್ತಿನವರೆಗೂ ಆಗಿಲ್ಲ. Since 10 years, 14 years ಏನು ಆಗಬೇಕು ಅವರ ಸರ್ವೀಸ್. ಅವರು ರಿಟೈರ್ಡ್ ಆದಮೇಲೆ ಎಲ್ಲಿಗೆ ಹೋಗಬೇಕು? ನಿಮ್ಮ ಸರ್ಕಾರಿ ಆದೇಶಗಳನ್ನು ತಿಪ್ಪೆಗೆ ಎಸೆಯಿರಿ. ಇದು ಸರ್ಕಾರ ಏನ್ರಿ? ಜಿ.ಒ.ಗಳನ್ನು ಮಾಡಿ ಡಿಸಿಷನ್ ತೆಗೆದುಕೊಂಡು 12–13 ವರ್ಷ ಇಂಪ್ಲಿಮೆಂಟ್ ಮಾಡುವುದಿಲ್ಲವೆಂದರೆ, ಇದಕ್ಕೆ ಏನೂ ಅರ್ಥವಿಲ್ಲವೆ? ಅವರು ದಿವಸ ತಿರುಗಾಡುತ್ತಾರೆ, ನಮ್ಮದು ಎಸ್‌ಸಿ:ಎಸ್‌ಟಿ ಕಾರ್ಪೊರೇಶನ್‌ದಲ್ಲಿ ಅಬ್ಸಾರ್ಬ್ ಆಗ ಬೇಕಾಗಿತ್ತು ಆಗುತ್ತಿಲ್ಲ ಎಂದು Sri Cheluvaraya Swamy, Hon'ble District Minister of Mandya, ತಮ್ಮ ಜಿಲ್ಲೆಯಲ್ಲಿ ರೈತರ ಸಭೆ ಕರೆಯುತ್ತಾರೆ, ಒಂದು ಟನ್ ಕಬ್ಬಿಗೆ 1100 ರೂ.ಗಳನ್ನು ಕೊಡುತ್ತೇವೆಂದು ಡಿಕ್ಲೇರ್ ಮಾಡುತ್ತಾರೆ, ಉಸ್ತುವಾರಿ ಸಚಿವರು ಹೋಗಿ ಡಿಕ್ಲೇರ್ ಮಾಡುವುದು. ಇಲ್ಲಿ 960 ರೂ.ಗಳನ್ನು ಕೊಡುತ್ತೇವೆ ಎಂದು ಆದೇಶ ಮಾಡುವುದು. ಇದು ಏನು ನಮಗೆ ಅರ್ಥವಾಗುತ್ತದೆಯೇ? 1100 ರೂ.ಗಳನ್ನು ಕೊಡುತ್ತೇವೆಂದು ಡಿಕ್ಲೇರ್ ಮಾಡುವುದಕ್ಕೆ ಇವರು ಯಾರು? ಮಾಡಿದ ಮೇಲೆ ಅದನ್ನು ಉಳಿಸಿಕೊಳ್ಳದಿದ್ದರೆ ಇದು ಸರ್ಕಾರವೆ? ಒಬ್ಬ ನಿಮ್ಮ ಮಂತ್ರಿ ಹೋಗಿ ಅಲ್ಲಿ ಕುಳಿತುಕೊಂಡು ಒಂದು ಟನ್ ಶುಗರ್‌ಕೇನ್‌ಗೆ 1100 ರೂ.ಗಳನ್ನು ಕೊಡುತ್ತೇವೆಂದು ಅನ್ನುವುದು ನೆಗೋಷಿಯೇಶನ್ ಮಾಡುವುದು ಸಭೆಯಲ್ಲಿ ಪ್ರೊಸೀಡಿಂಗ್ಸ್ ಮಾಡಿ ಇಲ್ಲಿ ಬಂದು 960 ರೂ.ಗೆ ಸರ್ಕಾರದ ಆದೇಶ ಮಾಡುವುದು. ಹಾಗಾದರೆ ಇದು ಯಾರಿಗೆ ಗೌರವ ತರುತ್ತದೆ ಹೇಳಿ ಸರ್? ನೀವು ಸರ್ಕಾರವನ್ನು ಏಕೆ ನಡೆಸುತ್ತಿದ್ದೀರಿ ಹೇಳಿ; ಏನಾದರೂ, ಸುಮ್ಮನೆ ಚಟಕ್ಕೆ ತಿರುಗಾಡಿಕೊಂಡು ನಡೆಸುವುದಾದರೆ ನಮಗೆ ಶ್ರಮ ಬೇಡ, ನಾವು ಸುಮ್ಮನೆ ಇದ್ದು ಬಿಡುತ್ತೇವೆ, ನಮ್ಮನ್ನೂ ಅಲ್ಲಿ ಇಲ್ಲಿಗೆ ಕರೆದುಕೊಂಡು ತಿರುಗಾಡಿ ಎಂದು, ಚೈನಾಕ್ಕೆ ಕರೆದುಕೊಂಡು ಹೋಗಿ, ಕಾಶ್ಮೀರಕ್ಕೆ ಕರೆದುಕೊಂಡು ಹೋಗಿ ಎಂದು ಮಾನ್ಯ ಅಧ್ಯಕ್ಷರಿಗೆ ಹೇಗೆ ಗೋಗರೆಯುತ್ತೇವೆ, ಹಾಗೆಯೇ ನಿಮ್ಮ ಮಂತ್ರಿಗಳಿಗೂ ಗೋಗರೆದು ಬಿಡುತ್ತೇವೆ ಬನ್ನಿ ಎಲ್ಲರೂ ಕಾರಿನಲ್ಲಿ ತಿರುಗಾಡಿಕೊಂಡು ಇರೋಣ. ಏನೋ ಒಂದೆರಡು ತಿಂಗಳು ಚುನಾವಣೆಯಲ್ಲಿ ಕಷ್ಟ ಪಟ್ಟಿದ್ದೇವೆ ಒಂದ್ನಾಲ್ಕು ವರ್ಷ ರೀಲ್ಯಾಕ್ಸ್ ಮಾಡೋಣ ಎಂದು, This is not the way, a Government has to be run. ಇದು ಸರ್ಕಾರ ನಡೆಸುತ್ತಿರುವ ರೀತಿ ಅಲ್ಲ. ನೀವು ಟೈಮ್ ಕೊಟ್ಟರೆ ಹೈಕೋರ್ಟ್ ಡಿಸಿಷನ್ಸ್ ಅನ್ನು ನಾನು ಓದಿ ಹೇಳುತ್ತೇನೆ, ಅದನ್ನು ನನ್ನ ಹತ್ತಿರ ಇಟ್ಟುಕೊಂಡಿದ್ದೇನೆ. ನೀವು ಸುಮಾರು 30 ಸಾವಿರ ಡಿಸಿಷನ್‌ಗಳನ್ನು ಇಗ್ನೋರ್ ಮಾಡಿದ್ದೀರಿ. ಒಬ್ಬ ಲಾ ಸೆಕ್ರೆಟರಿ ಇವತ್ತು ಒಬ್ಬ ನಿಮ್ಮ ಅಡ್ವೋಕೇಟ್ ಜನರಲ್ ಇನ್ ಟೈಮ್ ಹೋಗಿ ಬಿಟ್ಟು ಕೋರ್ಟ್ ಮುಂದೆ ಅಫಿಡೆವಿಟ್ ಹಾಕುತ್ತಿಲ್ಲ. ಹಾಕುವ ಅಫಿಡೆವಿಟ್ ಕೂಡ ಏನು ಹಾಕುತ್ತಿದ್ದೇನೆಂದು ನೋಡಿ ಹಾಕುತ್ತಿಲ್ಲ; Is it in the interest of

the Government or not ಎಂಬ ವಿವೇಚನೆ ಇಲ್ಲ. Most ineffecient legal practice we are engaging in the State. ನಮಗೆ ನೋವಾಗುತ್ತದೆ. ನಾವೆಲ್ಲಾ ಸಣ್ಣ ಮಟ್ಟ ಲಾಯರ್‌ಗಿರಿ ಮಾಡಿ ಬಂದವರು. ಸಣ್ಣ ಸಣ್ಣ ಅಫಿಡೆವಿಟ್‌ನಲ್ಲಿ ಕೂಡ ಕೇಸ್ ಕಳೆದುಕೊಳ್ಳುತ್ತಿದ್ದೇವೆ; Because of the absence. ಸುಮಾರು ಕೇಸ್‌ಗಳನ್ನು ಈ ರಾಜ್ಯ ಸರ್ಕಾರ ಕಳೆದುಕೊಳ್ಳುತ್ತಿದೆ. ಏತಕ್ಕೆ ನೀವು ಕೇಸ್ ನಡೆಸುತ್ತೀರಿ? ಏನ್ರಿ ನಿಮ್ಮ ಲಾ ಸೆಕ್ರೆಟರಿಗೆ ಕೆಲಸ ಗೊತ್ತಿಲ್ಲ. ಮೊನ್ನೆ ನಾನು ನಿಮಗೆ ಹೇಳಿದೆ, ಜಿಲ್ಲಾ ಪರಿಷತ್ ಕಾಯಿದೆಯಲ್ಲಿ ಅಲ್ಲಿ ಅಡ್ಮಿನಿಸ್ಟ್ರೇಟರ್‌ನ್ನು ಹಾಕುವುದಕ್ಕೆ ಬರುವುದಿಲ್ಲವೆಂದು ನಾನು ಹೇಳಿರುವುದನ್ನು ಕೇಳಿದೆ, ಏನು ಮಾಡುತ್ತಾರೆ ನಿಮ್ಮ ಲಾ ಸೆಕ್ರೆಟರಿ? I am not here to accuse any Minister. Is it not the job of a Secretary? ಸಂಬಳ ಕೊಟ್ಟು ಇಲ್ಲಿ ಲಾ ಸೆಕ್ರೆಟರಿಯನ್ನು ಇಟ್ಟಿಲ್ಲವೆ? ನಿಮಗೆ ಪ್ರಾವಿಷನ್ ಇಲ್ಲವೆಂದು ಕೋರ್ಟ್ ಮುಂದೆ ಒಂದು ಅಫಿಡೆವಿಟ್ ಏನಾದರೂ ಹಾಕುತ್ತೀರಾ? ಒಂದು ಐಎ ಹಾಕಿದ್ದೀರಾ ಕೋರ್ಟ್ ಮುಂದೆ? ಏನು ಮಾಡಬೇಕು ಸರ್, ಮೂರು ತಿಂಗಳು ಎಲೆಕ್ಷನ್ ಮುಂದಕ್ಕೆ ಹಾಕಿದ್ದೀರಿ, We are not supposed to continue the body or we are not supposed to put an administrator on that ಎಂದು ಏನಾದರೂ ಒಂದು ಐಎ ಹಾಕಿದ್ದಾರಾ ಕೇಳಿ ಸರ್ ಇವರು. Did you ask the Court? ಏನು ಮಾಡಬೇಕೆಂದು ಕೋರ್ಟ್ ಕೇಳಿದ್ದರೆ, ನಾವಿಲ್ಲಿ ಚರ್ಚೆ ಮಾಡಬೇಕಾಗಿತ್ತಾ ಸರ್? ಇಷ್ಟೊಂದು ವಿವೇಚನಾರಹಿತವಾಗಿ ನಡೆಯುತ್ತಿರುವಂಥ ಸರ್ಕಾರ ಇಂಡಿಯಾ ದೇಶದಲ್ಲಿ ಇನ್ನೊಂದು ಇದೆ ಎಂದು ನಾನು ಭಾವಿಸುವುದಿಲ್ಲ.

ಶ್ರೀ ಜಿ.ವಿ. ಶ್ರೀ ರಾಮರೆಡ್ಡಿ: ಮಾನ್ಯ ಮಾಧುಸ್ವಾಮಿಯವರೆ, ಅಫಿಡೆವಿಟ್ ಏಕೆ ಹಾಕಲಿಲ್ಲವೆಂದರೆ ಅವರೇ ಬೇಕು ಎಂದು ಹಾಕಲಿಲ್ಲ. ಏಕೆಂದರೆ ಅವರು ಸ್ಟೇ ತೆಗೆದುಕೊಂಡು ಬರಲಿ ಎನ್ನುವ ಉದ್ದೇಶದಿಂದ; ಸುಮ್ಮನೆ ಹೆಸರಿಗೆ ಕಣ್ಣು ಒರೆಸುವುದಕ್ಕೆ ಕಾನೂನು ಇದೆ ಎಂದು ತೋರಿಸಲಿಕ್ಕೆ ಅಡ್ಮಿನಿಸ್ಟ್ರೇಟರ್‌ನ್ನು ಹಾಕಿದೇವೆಂದು ಹೇಳಿದರು, ಕೋರ್ಟಿನಲ್ಲಿ ಕೇಸ್ ಹಾಕಿದರೆ ಅಫಿಡೆವಿಟ್ ಹಾಕಲಿಲ್ಲ. ಏಕೆಂದರೆ ಅದಕ್ಕೆ ಸರ್ಕಾರವೇ ಶಾಮೀಲು.

ಶ್ರೀ ಜೆ.ಸಿ. ಮಾಧುಸ್ವಾಮಿ: ಇನ್ನು ಪೊಲೀಸ್ ಆಡಳಿತ ಹೇಗೆ ನಡೆಯುತ್ತದೆ ಸರ್.

ಅಧ್ಯಕ್ಷರು: ಈಗ ದಯಮಾಡಿ ಮುಗಿಸಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಅದು ಹೇಗೆ ಮುಗಿಸುವುದಕ್ಕಾಗುತ್ತದೆ? ನಾವು ಶುರು ಮಾಡಿ ಅಲ್ಲಿಗೆ ಬಂದಿದ್ದೇವೆ ನೀವು ಮುಗಿಸಿ ಮುಗಿಸಿ ಎಂದರೆ ನಾನು ಮಾತೇ ಆಡುವುದಿಲ್ಲ.

ಅಧ್ಯಕ್ಷರು: ಏಕೆಂದರೆ ಇನ್ನೂ ಮಾತನಾಡುವವರು ಬಹಳ ಜನ ಇದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಬೇಗ ಮುಗಿಸಿಬಿಡುತ್ತೇನೆ ಸರ್. ವೀರಪ್ಪನ್ ಹಿಡಿಯುವ ಕಾರ್ಯತಂಡಕ್ಕೆ ನಾವು ಇವತ್ತು ಸೈಟ್ ಕೊಡುತ್ತೇವೆ, ಪ್ರಶಸ್ತಿ ಕೊಡುತ್ತೇವೆ ಎಂದು ಅನೌನ್ಸ್ ಮಾಡಿದೆವು. Sir, difference between Tamilnadu and Karnataka, ನೋಡಿ. 18ನೇ ತಾರೀಖು ಏನು ವೀರಪ್ಪನ್ ಸತ್ತ, ಅವನನ್ನು ನಮ್ಮವರು ಹೊಡೆದರೋ ಅಥವಾ ಅವರು ಹೊಡೆದರೋ ನಾನು ಆ ಚರ್ಚೆಗೆ ಹೋಗುವುದಿಲ್ಲ. ನನ್ನ ಕಾನ್‌ಶನ್ಸ್ ಹೋಗುವುದಕ್ಕೆ ಒಪ್ಪುವುದಿಲ್ಲ. ಏಕೆಂದರೆ ತಮಿಳುನಾಡು ಪೊಲೀಸ್‌ನವರ ಎಫ್‌ಐಆರ್ ನಲ್ಲಿ ನಮ್ಮ ಪೊಲೀಸ್‌ನವರ ಹೆಸರು ಇಲ್ಲ. ಅವರು ಕುಳಿತುಕೊಂಡು ಮಾತನಾಡುವಾಗ ನಮ್ಮವರು ಯಾರನ್ನೂ ಕರೆದು ಸ್ವಾಗತ ಮಾಡಿ

ಶ್ರೀಮತಿ ಜಯಲಲಿತಾರವರು ಹಾರ ಹಾಕಲಿಲ್ಲ. ನಾವೆಲ್ಲಾ ತಮಿಳುನಾಡಿನವರನ್ನು ಕರೆದು ಏನು ನೀನು ಹೀರೋ ಬಾ ಎಂದು ಕರೆದು ಕರ್ನಾಟಕದಲ್ಲಿ ಹಾರ ಹಾಕಿದೆವು. ಹಾಕಿ ಸಂತೋಷ: ಸರ್, ನೀವು ಅವರಿಗೆ ಅವಾರ್ಡ್ ಕೊಡುತ್ತೇವೆಂದು ಹೇಳಿದಿರಿ, ಕ್ಯಾಷ್ ಕೊಡುತ್ತೇವೆಂದು ಹೇಳಿದಿರಿ, ಸೈಟ್ ಕೊಡುತ್ತೇವೆಂದು ಹೇಳಿದಿರಿ. ಈ ತಿಂಗಳವರೆಗೂ ಕೊಡಲಿಲ್ಲ. ನಮ್ಮ ತುಮಕೂರಿನಲ್ಲಿ ಭಾರಿ ದೊಡ್ಡ ಉತ್ಸವ ಮಾನ್ಯ ವಾಟಾಳ್‌ರವರೇ, ಅಂಥ ಉತ್ಸವ ಶ್ರೀ ಸಿದ್ದಗಂಗಾ ಸ್ವಾಮಿಗಳಿಗೂ ಆಗಿರಲಿಲ್ಲ. ಜ್ಯೋತಿ ಪ್ರಕಾಶ್ ಮಿರ್ಜಿಯವರಿಗೆ ಅಷ್ಟೊಂದು ದೊಡ್ಡ ರಿಷಪ್ಸ್‌ನ್ ಆಯಿತು. ವೀರಪ್ಪನ್‌ನ್ನು ಕೊಂದು ಬಂದರು ಎಂದು ಜ್ಯೋತಿಪ್ರಕಾಶ್ ಮಿರ್ಜಿ ಹತ್ತಿರ, ದಿವಸ ಪೊಲೀಸ್‌ನವರು, ಸರ್ ನಮ್ಮ ದುಡ್ಡು ಬರಲಿಲ್ಲ, ಸೈಟ್ ಬರಲಿಲ್ಲ, ಇನ್‌ಕ್ರಿಮೆಂಟ್ ಬರಲಿಲ್ಲ, ಪ್ರಮೋಷನ್ ಬರಲಿಲ್ಲ ಎಂದು ಕೇಳುತ್ತಿದ್ದರಿಂದ Fed up four months, ಆಫೀಸಿಗೆ ಹೋಗುವುದನ್ನು ಬಿಟ್ಟರು ಜ್ಯೋತಿಪ್ರಕಾಶ್ ಮಿರ್ಜಿ. ಜ್ಯೋತಿಪ್ರಕಾಶ್ ಮಿರ್ಜಿಗೆ ಪೋಸ್ಟಿಂಗ್ಸ್ ಕೊಡದಂತೆ ಇಟ್ಟರು ಈ ಸರ್ಕಾರದವರು. This is the reward an STF officer got from this Government. This is the reward. ಯಾವನಾದರೂ ಒಬ್ಬ ಅಧಿಕಾರಿ ನಿಯತ್ತಾಗಿ ಇಲ್ಲಿ ಕೆಲಸ ಮಾಡುತ್ತಾನೆಂದರೆ, ಅವನಿಗೆ ಈ ಸರ್ಕಾರದಲ್ಲಿ ಪೋಸ್ಟಿಂಗ್ಸ್ ಇಲ್ಲ. ಏಕೆ? What for? Why is he punished? ಹೆಂಡತಿ ಮಕ್ಕಳು ಮನೆಯನ್ನು ಎಲ್ಲಾ ಬಿಟ್ಟು ಹೋಗಿ ಮಹದೇಶ್ವರ ಬೆಟ್ಟದಲ್ಲಿ ಬಿದ್ದು ನರಳಿ ಬಂದರು ಎಂದು ಇವತ್ತು ಅವರಿಗೆ ಈ ರಿವಾರ್ಡ್ ಕೊಡುತ್ತೀರಾ? ವೀರಪ್ಪನ್ ಬಗ್ಗೆ ಇಂಡಿಯಾ ಟುಡೇದವರು ಒಂದು ಬುಕ್‌ನ್ನು ರಿಲೀಸ್ ಮಾಡಿದರು, ಅವನು ಒಂದು ಮಾತನ್ನು ಹೇಳಿದ್ದನು. I have kept one bullet reserved on which I have written. ತಮಿಳಿನಲ್ಲಿ ಅವನು ಹೇಳುತ್ತಾನೆ, ಕಾಗದವನ್ನು ಸುತ್ತಿ ಬಿಟ್ಟು ವೀರಪ್ಪನ್ ಬಿದರಿ ಎಂದು ಬರೆದು ಇಟ್ಟಿದ್ದನು. ನಿಜವಾಗಿ ಸರ್. I will get you that copy. ನಾನು ನಿಮಗೆ ಪುಸ್ತಕ ತಂದುಕೊಡುತ್ತೇನೆ. ನನ್ನ ಜೀವನದ ಕೊನೆಯ ಒಂದು ಆಸೆ ಅವನು ಶಂಕರ್ ಬಿದರಿಯನ್ನು ಕೊಂದು ಸಾಯಬೇಕು ಎಂದು What is the reward Shankar Bidari and his men get to day? What is the reward? ಶ್ರೀನಿವಾಸ್‌ನ ಫ್ಯಾಮಿಲಿಗೆ What is the reward? ಅವತ್ತು 65 ರಿಂದ 100 ಜನ ಇದ್ದಂಥ ಗ್ಯಾಂಗ್‌ನ್ನು 4 ಜನರಿಗೆ ಇಳಿಸಿದ್ದರು, ಅವರು ಅವತ್ತು ರಿವಾರ್ಡ್ ತೆಗೆದುಕೊಳ್ಳಬಹುದಿತ್ತು.

ಶ್ರೀ ಆರ್. ಅಶೋಕ: ಮಾನ್ಯ ಅಧ್ಯಕ್ಷರೆ, ಈ ಎಸ್‌ಟಿಎಫ್ ಬಗ್ಗೆ ನಾವು ಪ್ರತಿ ದಿವಸ ಪತ್ರಿಕೆಯಲ್ಲಿ ನೋಡುತ್ತಿರುತ್ತೇವೆ. ಹೆಂಡತಿ ಮಕ್ಕಳನ್ನು ಬಿಟ್ಟು ಎರಡು–ಮೂರು ವರ್ಷ ಆ ಕಾಡಿನಲ್ಲಿ ಆ ವೀರಪ್ಪನ್ ಹಿಡಿಯುವುದಕ್ಕೋಸ್ಕರ ಪೊಲೀಸ್ ಪೇದೆಗಳು ಊಟ ಇಲ್ಲದೆ ಸತ್ತಿದ್ದಾರೆ. ಅಂತಹ ಜನಕ್ಕೆ ತಮಿಳುನಾಡು ಸರ್ಕಾರ ಇವತ್ತು ಅವರಿಗೆ ದೊಡ್ಡ ಸನ್ಮಾನ ಮಾಡಿ ತಮಿಳುನಾಡು ಸರ್ಕಾರದ ಮುಖ್ಯಮಂತ್ರಿಗಳು ಏನು ಮಾತು ಕೊಟ್ಟಿದ್ದರು, ಅದನ್ನು ತಮಿಳುನಾಡು ಸರ್ಕಾರ ನಡೆಸಿಕೊಟ್ಟಿದೆ. ಕೂಡಲೇ ನಮ್ಮ ಮಂತ್ರಿಗಳು ಸ್ಟೇಟ್‌ಮೆಂಟ್ ಕೊಟ್ಟರು. ತಮಿಳುನಾಡು ಮುಖ್ಯಮಂತ್ರಿಗಳು ಕೊಟ್ಟಿದ್ದಾರೆಂದು ನಮ್ಮ ಮುಖ್ಯಮಂತ್ರಿಗಳು ಕೊಟ್ಟು ಬಿಟ್ಟರು. ಆದರೆ ಇದುವರೆಗೂ ಪ್ರಾಣ ಕಳೆದುಕೊಂಡಂಥ ಎಸ್‌ಟಿಎಫ್‌ನವರ ಕುಟುಂಬ ವರ್ಗದವರಿಗೆ ಇದುವರೆಗೂ ಕೊಡಬೇಕಾದ ಹಣ ವೀರಪ್ಪನ್ ಹಿಡಿದರೆ 50 ಕೋಟಿ ರೂ.ಗಳನ್ನು ಕೊಡುತ್ತೇವೆಂದು ಹೇಳಿದ್ದರಲ್ಲಾ ಇದುವರೆಗೂ ಕೊಡುವುದಕ್ಕೆ ಮೀನಾಮೇಷ ಎಣಿಸುತ್ತಿದ್ದಾರೆ. ಕೊಡುವುದಕ್ಕೆ ವ್ಯವಸ್ಥೆಯನ್ನೇ ಮಾಡಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, 75 ಪೊಲೀಸ್ ಅಧಿಕಾರಿಗಳಿಗೆ, ಕರ್ನಾಟಕ ಸರ್ಕಾರ 16.68 ಕೋಟಿ ರೂ.ಗಳ ನಗದು ಬಹುಮಾನ ಕೊಡಬೇಕಾಗಿತ್ತು. ಅವರಿಗೆ ಎಲಿಜಿಬಿಲಿಟಿ ಇದ್ದದ್ದು 4.10 ಕೋಟಿ ರೂ.ಗಳು ಮಾತ್ರ. ನೀವು ಬಹಳ ದೊಡ್ಡಸ್ತಿಕೆಯಲ್ಲಿ ಹೇಳಿದ್ದು 50 ಕೋಟಿ ರೂ.ಗಳನ್ನು ಕೊಡುತ್ತೇವೆ. suo-moto Chief Minister on his own made a statement, ನಾನು ಪೊಲೀಸ್‌ನವರಿಗೆ 50 ಕೋಟಿ ರೂ.ಗಳನ್ನು ಕೊಡುತ್ತೇನೆ. ಸೇರಬೇಕಾದದ್ದು ಯಾರ್‍ಯಾರಿಗೆ ಸರ್? 18–10–2004 ರಲ್ಲಿ ಅವರಿಗೆ ಹೊಡೆದದ್ದು ನೆಕ್ಸ್ಟ್ ಡೇ ತಮಿಳುನಾಡಿನವರು ಕೊಟ್ಟರು. 150 ಕ್ಕಿಂತ ಜಾಸ್ತಿ ಇದ್ದಂಥ ತಂಡವನ್ನು 4 ಕ್ಕೆ ಇಳಿಸಿದವರಿಗೆ 13–4–1993ರ ಸರ್ಕಾರಿ ಆದೇಶದ ಪ್ರಕಾರ ನಗದು ಬಹುಮಾನ. ನಿಮ್ಮ ಆದೇಶದ ಸಂಖ್ಯೆ: ಹೆಚ್‌ಡಿ–97:ಪಿಒಪಿ–93: ದಿನಾಂಕ 13–4–93ರ ಪ್ರಕಾರ ನಗದು ಬಹುಮಾನ ನೀಡಲು ಮಂಜೂರಾತಿ ಇದ್ದರೂ ಸಹಿತ, ಯಾವುದೇ ನಗದು ಬಹುಮಾನವನ್ನು ಉಲ್ಲೇಖ–1 ರಲ್ಲಿ ನಮೂದಿಸಿರುವ ಆದೇಶದ ಪ್ರಕಾರ ಮಂಜೂರು ಮಾಡಿರುವುದಿಲ್ಲ. ನೀವು 1993ರಲ್ಲಿ ಗೌರ್ನಮೆಂಟ್ ಆರ್ಡರನ್ನು ಮಾಡಿ ನಿಮಗೆಲ್ಲರಿಗೂ ಕ್ಯಾಷ್ ಅವಾರ್ಡ್ ಕೊಡುತ್ತೇವೆಂದು ಹೇಳಿ ಇವತ್ತಿನವರೆವಿಗೂ ಕೊಟ್ಟಿರುವುದಿಲ್ಲ. ಏತಕ್ಕಾಗಿ ಕೊಟ್ಟಿಲ್ಲ? ಇದರಲ್ಲಿ ಅನೇಕ ಜನರು ನಿವೃತ್ತರಾಗಿದ್ದಾರೆ, ಇದರಲ್ಲಿ ಅನೇಕ ಜನರು ಮನೆಗೆ ಹೋಗಿದ್ದಾರೆ. ಇದರಲ್ಲಿ ಅನೇಕ ಜನರು ಏತಕ್ಕಾಗಿ ಈ ಕೆಲಸಕ್ಕೆ ಬಂದೆವು ಎಂದು ನೊಂದುಕೊಂಡು ಮನೆಯಲ್ಲಿ ಕುಳಿತಿದ್ದಾರೆ. ಇದಕ್ಕೆ ಸರ್ಕಾರ ಎಂದು ಕರೆಯುತ್ತಾರೆಯೆ? Then why did you go for a government order? ಒಂದು ನಿಮಿಷ ಸಾರ್, ಏತಕ್ಕಾಗಿ ನೀವು ಸರ್ಕಾರಿ ಆದೇಶಗಳನ್ನು ಮಾಡುತ್ತೀರಿ? ಸರ್ಕಾರಿ ಆದೇಶಕ್ಕೇನಾದರೂ ಕಿಮ್ಮತ್ತು ಇದೆಯೇ? ಇದನ್ನು ಯಾರಾದರೂ ಸರ್ಕಾರ ಎಂದು ಕರೆಯುತ್ತಾರಾ? ನೀವು ದಿನಾಂಕ: 13–3–1993ರಿಂದ ದಿನಾಂಕ: 24–1–1998ರವರೆಗೆ, ದಿನಾಂಕ: 1–1–2000ದಿಂದ 2001ರವರೆಗೆ ಯಾರು ಯಾರು ಕಾರ್ಯಾಚರಣೆಯಲ್ಲಿದ್ದರು, ಅವರೆಲ್ಲರಿಗೂ ನೀವು ಏನು ಕೊಟ್ಟಿದ್ದೀರಿ? ಏತಕ್ಕಾಗಿ ಕೊಡಲಿಲ್ಲ? ನಾನು ಇದರ ಬಗ್ಗೆ ಕೇಳುತ್ತೇನೆ, ನಿಮಗೆ ಏನು ತೊಂದರೆಯಾಗಿತ್ತು? ಏತಕ್ಕಾಗಿ ಕೊಡಲಿಲ್ಲ? ಏತಕ್ಕಾಗಿ ಈ ರೀತಿಯ ಅನ್ಯಾಯಗಳನ್ನು ಮಾಡುತ್ತಿದ್ದೀರಿ ಎಂಬುದರ ಬಗ್ಗೆ ಹೇಳಬೇಕಲ್ಲಾ. ನಾಳೆ ನಿಮಗೆ ಯಾರಾದರೂ ರಿಸ್ಕ್ ತೆಗೆದುಕೊಂಡ ನಕ್ಸಲೈಟ್ ನಿರ್ಮೂಲನ ಮಾಡುವ ಬಗ್ಗೆ ಎಸ್‌ಟಿಎಫ್‌ಗೆ ಹೋಗಿ ಎಂದು ಹೇಳಿದರೆ ಯಾರಾದರೂ ಹೋಗಲು ತಯಾರಾಗುತ್ತಾರಾ? ಈ ಕಡೆ ನಾವು ಮತ್ತು ಮಾನ್ಯ ವಾಟಾಳ್ ನಾಗರಾಜ್‌ರವರು ಅವರಿಗೆ 24 ಗಂಟೆಗಳ ಕಾಲ ಏತಕ್ಕಾಗಿ ಕೆಲಸ ಮಾಡಿಸುತ್ತೀರಿ ಎಂದು ಹೇಳುತ್ತೇವೆ, ಇನ್ನೊಂದು ಕಡೆ ಎಸ್‌ಟಿಎಫ್‌ಗೆ ಹೋಗಿ ಎಂದು ಕೇಳುತ್ತೇವೆ; ಅಲ್ಲಿಗೆ ಹೋಗಿ ಸತ್ತರೂ ಕೂಡ ನಮ್ಮ ಮನೆಯವರಿಗೆ ರಕ್ಷಣೆ ಇಲ್ಲದಂಥ ಸ್ಥಿತಿಯನ್ನು ನಾವು ನಿರ್ಮಾಣ ಮಾಡಿದಾಗ ಅಲ್ಲಿಗೆ ಯಾರು ಹೋಗುತ್ತಾರೆ? ಇದು ಗೌರ್ನಮೆಂಟ್ ನಡೆಸುವ ರೀತಿಯಲ್ಲ; ಇದರ ಬಗ್ಗೆ ನೀವು ತಕ್ಷಣ ಕ್ರಮ ಜರುಗಿಸಬೇಕು. ಯಾರು ನಿಜವಾಗಿ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ, ನಾನು ಇಲ್ಲಿ ಶಂಕರ್‌ಬಿದರಿಯವರ ಟೀಂಗೆ, ಇಲ್ಲಿ ಯಾರ್‍ಯಾರು ಕೆಲಸವನ್ನು ಮಾಡಿದ್ದಾರೆ, ಅವರಿಗೆ 1993ರ ಆರ್ಡರ್ ಪ್ರಕಾರ ಯಾರ್‍ಯಾರಿಗೆ ಅರ್ಹತೆ ಇದೆಯೋ ಅವರಿಗೆ ಈ ಗೌರ್ನಮೆಂಟ್ ತಕ್ಷಣ ಹಣವನ್ನು ಬಿಡುಗಡೆ ಮಾಡಬೇಕು, ಸೈಟನ್ನು ಬಿಡುಗಡೆ ಮಾಡಬೇಕು, ಅವರಿಗೆ ಏನೇನು ಪ್ರಮೋಷನ್‌ಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ, ದಯಮಾಡಿ ಕೊಡಬೇಕು, ಯಾರು ಅಧಿಕಾರಿಗಳು ಅಲ್ಲಿಗೆ ಹೋಗಿ

ಈ ರೀತಿ ರಾಜ್ಯಕ್ಕೋಸ್ಕರ ಅಜ್ಞಾತವಾಸವನ್ನು ಮಾಡಿಕೊಂಡು ಬಂದಿದ್ದಾರೆ, ಅವರನ್ನು ಗೌರವಯುತವಾಗಿ ನಡೆಸಿಕೊಳ್ಳುವುದನ್ನಾದರೂ ಕೂಡ ಮಾಡಬೇಕು. ಇದು ಜಾತಿ ಅದು, ಇದು ಎಂದು ಆಗಬಾರದು, ಯಾರನ್ನೋ ಫನಿಷ್ ಮಾಡಬೇಕು, ಇನ್ಯಾವುದೋ ಜಾತಿಯವನನ್ನು ಇಲ್ಲಿಯೇ ಇಡಬೇಕು ಇನ್ಯಾವುದೋ ಜಾತಿಯವನನ್ನು ಅಲ್ಲಿಯೇ ಇಡಬೇಕು ಎಂದು ಮಾಡಿದರೆ ಇದು ಮಠವಾಗುತ್ತದೆ, ಇದು ಸರ್ಕಾರವಾಗುವುದಿಲ್ಲ. If every decision is on caste, what will be the fate of this House, Government? ಒಬ್ಬರು ಕೆಲಸ ಮಾಡುವುದಕ್ಕೆ ಇನ್ನೊಬ್ಬರು ಮಜಾ ಮಾಡುವುದಕ್ಕೆ, ಅವಾರ್ಡ್ ತೆಗೆದುಕೊಳ್ಳುವುದಕ್ಕೆ ಒಬ್ಬರು ಇದು ಆಗಿದೆ.

ಅಧ್ಯಕ್ಷರು: ಆಯಿತು, ಮಿಸ್ಟರ್ ಮಾಧುಸ್ವಾಮಿಯವರೆ, . . .

ಶ್ರೀ ಜೆ.ಸಿ. ಮಾಧುಸ್ವಾಮಿ: ಇಲ್ಲ ಅಧ್ಯಕ್ಷರೆ, ಇನ್ನು 10 ನಿಮಿಷದಲ್ಲಿ ಮುಗಿಸುತ್ತೇನೆ. ಬೆಂಗಳೂರಿನಲ್ಲಿ ಪೊಲೀಸ್‌ನವರ ಆಡಳಿತ ನಿಜವಾಗಿಯೂ ಅಸ್ತವ್ಯಸ್ತವಾಗಿದೆ. ಬೆಂಗಳೂರಿನಲ್ಲಿ ನಾನು ಮತ್ತು ಸನ್ಮಾನ್ಯ ದಿಗ್ವಿಜಯ ಸಿಂಗ್‌ರವರು ಮತ್ತು ನಮ್ಮ ಪಾರ್ಟಿಯ ಅಧ್ಯಕ್ಷರು ಜಾರ್ಜ್ ಫರ್ನಾಂಡಿಸ್‌ರವರನ್ನು ಅರೆಸ್ಟ್ ಮಾಡಿದ ದಿವಸ ಪ್ರೊಸೆಷನ್ ಹೋಗಬೇಕಾಗಿತ್ತು. ಅವರ ಮೇಲೆ ಕೇಸ್ ಹಾಕಿದ ದಿವಸ, ನಾವೆಲ್ಲರೂ ಗೌರ್ನರ್‌ಗೆ ಮನಿವಿಯನ್ನು ಕೊಡುವುದಕ್ಕೆ ಹೋಗಬೇಕಾಗಿತ್ತು. ಆನರೆಬಲ್ ಗೌರ್ನರ್ 25 ಜನರು ಬಂದು ನನ್ನನ್ನು ನೋಡಿ ಎಂದು ಹೇಳಿ ನಮಗೆ ಅವಕಾಶವನ್ನು ಕೊಟ್ಟಿದ್ದರು. ನಾವು 25 ಜನರು ಹೋಗಿ ನೋಡುವುದಕ್ಕೆ ಹೋದರೆ ಗಾಂಧಿಸ್ಕ್ವೇರ್ ಹತ್ತಿರ ನಿಂತುಕೊಂಡು ಭಾಷಣ ಮಾಡುವಾಗ ನಮಗೆ ಹೇಳುವುದಿಲ್ಲ, ಅಲ್ಲಿಂದ ನಾವು ನಡೆದುಕೊಂಡು ಇನ್ನೊಂದು ಸರ್ಕಲ್‌ವರೆಗೆ ಬರುವಾಗಲೂ ಕೂಡ ಹೇಳುವುದಿಲ್ಲ. ಮುಂದೆ ದಿಢೀರ್ ಎಂದು ಬಂದು ಎಲ್ಲರನ್ನೂ ಹಿಡಿದುಕೊಂಡು ವ್ಯಾನ್‌ಗೆ ತುಂಬುತ್ತಾರೆ. ಏಕೆ? ಗೊತ್ತಿಲ್ಲ ಎಂದು ಹೇಳುತ್ತಾರೆ, ಅರೆ ನಿಮ್ಮ ಎಸ್‌ಪಿ ಮತ್ತು ಡಿಸಿಪಿಯವರು ಪರ್ಮಿಟ್ ಮಾಡಿದ್ದಾರೆ. ಇದನ್ನು ತೆಗೆದುಕೊಳ್ಳಪ್ಪಾ ಎಂದು ಹೇಳಿದರೆ ಅವರು ನಮಗೆ ಹೇಳಿಲ್ಲ ರೀ, ನಾವು ಇಷ್ಟು ಹೊತ್ತಿನವರೆಗೂ ಅಲ್ಲಿ ನಿಂತುಕೊಂಡು ಭಾಷಣ ಮಾಡುತ್ತಿದ್ದೆವಲ್ಲ, ಅಲ್ಲಿಯೇ ಏತಕ್ಕಾಗಿ ನಮ್ಮನ್ನು ಕೇಳಲಿಲ್ಲ ಎಂದು ಹೇಳಿದರೆ ನನಗೆ ಗೊತ್ತಿಲ್ಲ, ನೀವು ವ್ಯಾನ್‌ಗೆ ಹತ್ತಬೇಕು, ಎಂದು ಹೇಳುತ್ತಾರೆ ಇದು ಸತ್ಯವಾಗಿ ನಡೆದಿದೆ ಸಾರ್. ನಾವು ಇದನ್ನೆಲ್ಲವನ್ನೂ ಹೇಳುವುದಕ್ಕೆ ಹೊರಟಿಲ್ಲ. ನೀವು ವ್ಯಾನ್‌ಗೆ ಹತ್ತಬೇಕು. ಅರೆ ನಾವು ಗೌರ್ನರ್‌ನ್ನು ನೋಡಬೇಕು, ನಮ್ಮ 25 ಜನರನ್ನು ಗೌರ್ನರ್‌ರವರು ಕರೆದಿದ್ದಾರೆ ತೆಗೆದುಕೊಳ್ಳಿ ಎಂದು ಹೇಳಿದರೆ, ನಮಗೇನೂ ಹೇಳಬೇಡಿ, Demonstrations are banned. ನಾವು ಡಿಸಿಪಿಯವರನ್ನು ಕೇಳಿ ಗೌರ್ನರ್ ಕೇಳಿ ಗೌರ್ನರ್‌ರವರಿಂದ ಕಾಲವನ್ನು ನಿಗದಿಮಾಡಿಸಿಕೊಂಡು ಅವತ್ತು ಅಲ್ಲಿಗೆ ಹೋಗುವುದಕ್ಕೆ ಆಗಲಿಲ್ಲ. It is a pity. ಒಬ್ಬ ಸೆಂಟ್ರಲ್ ಮಿನಿಸ್ಟರ್ ದಿಗ್ವಿಜಯಸಿಂಗ್ ರ್‍ಯಾನ್ ಅವೇ, ಪೊಲೀಸ್ ಕೇಸ್‌ಗೆ ಸಿಕ್ಕಿಕೊಳ್ಳಬೇಕಾಗುತ್ತದೆಂದು, ಈ ರಾಜ್ಯದಿಂದ ಓಡಿಹೋದರಲ್ಲಾ ಸಾರ್. ಇದೊಂದು ಸರ್ಕಾರನಾ ಸಾರ್; ನೀಚರು; ಹಾಗಾದರೆ ಯಾರೂ ಅಪೋಜಿಷನ್‌ನಲ್ಲಿ ಇರುವಹಾಗಿಲ್ಲವೇ? ಯಾರೂ ಪ್ರೊಟೆಸ್ಟ್ ಮಾಡುವ ಹಾಗಿಲ್ಲವೇ? ಯಾರೂ ಕೂಡ ಡೆಮಾನ್‌ಸ್ಟ್ರೇಷನ್ ಮಾಡುವ ಹಾಗಿಲ್ಲವೇ? ಏನು ಇವರ ತೆವಲಿಗೆ ಇಲ್ಲಿ ಪೊಲೀಸ್‌ನವರನ್ನು ಇಟ್ಟುಕೊಂಡಿದ್ದಾರೆಯೇ? Police is serving their individual interest, not the State interest. ಈ ಬೆಂಗಳೂರು ಸಿಟಿಯೊಳಗಡೆ ನಿಮಗೆ ಯಾರ್‍ಯಾರ ಮೇಲೆ ಸಿಟ್ಟು ಇದೆ, ಅವರು ಬಲಾಢ್ಯರನ್ನು ಇಟ್ಟುಕೊಳ್ಳಬೇಕಾಗಿಲ್ಲ,

ಗೂಂಡಾಗಳನ್ನು ಇಟ್ಟುಕೊಳ್ಳಬೇಕಾಗಿಲ್ಲ, ಪೋಲೀಸ್‌ನವರನ್ನು ಇಟ್ಟುಕೊಂಡು ಆಡಳಿತವನ್ನು ಮಾಡುವುದು. Paid goondas are in police. ನಾನು ಎಲ್ಲರಿಗೂ ಹೇಳುವುದಿಲ್ಲ. ಈ ರಾಜ್ಯದ ಆಡಳಿತ ಎಲ್ಲಿಗೆ ಬಂದಿದೆ; ಮೊನ್ನೆ ನಮ್ಮ ರಾಷ್ಟ್ರೀಯ ಸ್ಕೆಕ್ರೆಟರಿ ಶ್ರೀಪತಿರಾವ್‌ರವರು ಯಾವುದೋ ಒಂದು ಕನ್‌ವೆನ್‌ಷನ್ ಹಾಲ್‌ನ್ನು ಬಾಡಿಗೆಗೆ ತೆಗೆದುಕೊಳ್ಳುವುದಕ್ಕೆ ಹೋದರೆ ಎದುರುಗಡೆ ಹೋಟೆಲ್‌ನ್ನು ಮುಚ್ಚಿ ಎಂದು ಇನ್ಸ್‌ಪೆಕ್ಟರ್ ಬರುತ್ತಾನೆ. ಹೋಟೆಲ್ ಮುಚ್ಚಿ ಎಂದು ಕೇಳಿದಾಗ ಇವನು ಎದುರುಗಡೆ ಇದ್ದರೆ ದುಡ್ಡನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ಜಾಗ ಖಾಲಿ ಮಾಡಿಹೋಗುತ್ತಾನೆ. ಏತಕ್ಕಾಗಿ ನಾವು ಖಾಲಿ ಮಾಡಬೇಕೆಂದು ಹೇಳಿದರೆ ಒದ್ದು ಒಳಗೆ ಹಾಕುತ್ತಾನೆ. ಯಾರನ್ನು ನೀವು ಒಳಗೆ ಹಾಕುತ್ತೀರಿ, ಹೇಗೇಗೆ ನಡೆಸಿಕೊಳ್ಳಬೇಕು, ಇದರಲ್ಲಿ ಏನಾದರೂ ನಿಯಮ ಇದೆಯಾ? ನನಗೆ ಮಾತನಾಡುವುದಕ್ಕೆ ತಾವು ಸ್ವಲ್ಪ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು: ಬಹಳ ಹೊತ್ತಾಯಿತು ತಾವು ದಯಮಾಡಿ ಮುಗಿಸಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಇವೆಲ್ಲವನ್ನೂ ನಾವು ಹೇಳಲೇಬೇಕಾಗಿರುವ ವಿಷಯ ಹೇಳಲೇಬೇಕಾಗಿದೆ.

ಅಧ್ಯಕ್ಷರು: ಆದರೆ ಬೇರೆಯವರು ಮಾತನಾಡಬೇಕಾಗಿದೆ. ದಯಮಾಡಿ ತಾವು ಮುಗಿಸಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಶ್ರೀಪತಿರಾವ್‌ರವರನ್ನು ಹೇಗೆ ಒಳಗಡೆ ತೆಗೆದುಕೊಂಡು ಹೋದರು ಎಂಬುದು ಗೊತ್ತಿಲ್ಲ. ಒಬ್ಬ ಪೊಲೀಸ್ ಎಫ್‌ಐಆರ್ ಹಾಕುತ್ತಾನೆ, ಅವನ ಜೊತೆಯಲ್ಲಿ ಕಾರಿನೊಳಗಡೆ 3 ಜನ ಫ್ರೆಂಡ್ಸ್ ಕುಡಿದು ಕುಳಿತಿದ್ದರು, ಹಾಗಾಗಿ ನಾನು ಅವರನ್ನು ಅರೆಸ್ಟ್ ಮಾಡಬೇಕಾಗಿ ಬಂತು ಎಂದು. Was it a nuisance? Is a complaint lodged against nuisance? ಇಲ್ಲ, ಇನ್ನೊಬ್ಬ ಹೇಳುತ್ತಾನೆ. ಅವನು ಆಚೆ ನಿಂತುಕೊಂಡಿದ್ದ; ನಾನು ಹೋಗು ಎಂದು ಹೇಳಿದರೂ ಕೂಡ ಹೋಗಲಿಲ್ಲ, ನಾನೇನು ಮಾಡಿದ್ದೇನೆಂದು ತಕರಾರು ಮಾಡಿದ ಒಳಗೆ ಕರೆದುಕೊಂಡು ಹೋದೆವು. ಅವರನ್ನು ಕರೆದುಕೊಂಡು ಹೋಗಲಿ, ಅವರು ಪೊಲೀಸ್‌ನವರನ್ನು ಕೇಳುತ್ತಾರೆ, ನಾನು ನಮ್ಮ ಮನೆಗೆ ಅಥವಾ ನಿಮ್ಮ ಡಿಎಸ್‌ಪಿ ಅಶೋಕರವರಿಗೆ ಫೋನ್ ಮಾಡುವುದಕ್ಕೆ ಅವಕಾಶವನ್ನು ಕೊಡಪ್ಪಾ ಎಂದು ಕೇಳಿದರೆ ಪೊಲೀಸ್‌ನವರು ಫೋನ್‌ನ್ನು ಮುಟ್ಟಕೂಡದು ಎಂದು ರಾತ್ರಿ 11–00 ಮತ್ತು 12–00 ಗಂಟೆಯಲ್ಲಿ ಹೇಳುತ್ತಾರೆ. ಆಚೆಗೆ ಹೋಗಿ ಮೊಬೈಲ್‌ನಲ್ಲಿ ಫೋನ್ ಮಾಡುತ್ತೇವೆಂದು ಹೇಳಿದರೆ ಅವರನ್ನು ಚೆನ್ನಾಗಿ ಹೊಡೆದು ಲಾಕಪ್‌ಗೆ ಹಾಕಿ ಸಲಾಕೆಯನ್ನು ಕಟ್ಟುತ್ತಾರೆ, ಸರ್ಕಲ್ ಇನ್ಸ್‌ಪೆಕ್ಟರ್ ಹೇಳುತ್ತಾನೆ, ಇವರು ಯಾರೋ ದೊಡ್ಡ ಅಧಿಕಾರಿ ಎಂದು ಸುಮ್ಮನಿದ್ದೆ, ಇವರ ಜೇಬಿನಿಂದ ಒಂದು ಕಾರ್ಡನ್ನು ತೆಗೆದುಕೊಂಡೆ ಜನತಾದಳದ ಕಾರ್ಯಕರ್ತ ಎಂದು ಇತ್ತು, ಅದಕ್ಕಾಗಿ ಇವನ ಮೇಲೆ ಆ್ಯಕ್ಷನ್ ತೆಗೆದುಕೊಂಡೆ ಎಂದು ಹೇಳುತ್ತಾನೆ. ನೆಕ್ಸ್ಟ್ ಡೇ ಅವನು ನನ್ನನ್ನು ಡಾಕ್ಟರ್ ಹತ್ತಿರ ಕರೆದುಕೊಂಡು ಹೋಗಿ ಎಂದು ಬೇಡುತ್ತಾನೆ, ನಾನು ಕುಡಿದಿಲ್ಲ, ನನ್ನನ್ನು ಏನಾದರೂ ಮಾಡಿ ಹಾಸ್‌ಪಿಟಲೈಸ್ ಮಾಡಿ ಎಂದು ಹೇಳುತ್ತಾನೆ. ಇವರು ಅವನನ್ನು ಮಾಡುವುದಿಲ್ಲ. ಏತಕ್ಕಾಗಿ ಮಾಡುವುದಿಲ್ಲ. ಅವರು ಇವನಿಗೆ ಮೈಗೆ ಊತ ಬರುವ ಹಾಗೆ ಹೊಡೆದಿದ್ದಾರೆ. ನಿಮಗೆ ಬೇಕಾದರೆ ಫೋಟೋವನ್ನು ಕಳುಹಿಸಿಕೊಡುತ್ತೇನೆ. ಒಬ್ಬ ರಾಷ್ಟ್ರೀಯ ಪಕ್ಷದ ಕಾರ್ಯಕರ್ತನಿಗೆ ಸ್ಕ್ರೆಟರಿಗೆ ಮೈಗೆ ಊತ ಬರುವಹಾಗೆ ಹೊಡೆಯುತ್ತಾರೆ. ಏತಕಾಗಿ ಹೊಡೆದರು ಎಂದು ನಾನು ನಿಮಗೆ ಹೇಳುತ್ತೇನೆ. ರಾತ್ರಿ 10–30 ಮತ್ತು 11–00 ಗಂಟೆಯಲ್ಲಿ ಪೊಲೀಸ್‌ನವರು ಹೋಟೆಲ್‌ಗಳನ್ನು

ಕ್ಲೋಸ್ ಮಾಡುವಂತಹ ಹೆಸರಿನಲ್ಲಿ ದಂಧೆ ಮಾಡುತ್ತಿದ್ದಾರೆ. ಹೋಟೆಲ್ ಮಾಲೀಕರವರ ಹತ್ತಿರ ಪೊಲೀಸ್‌ನವರು ರೋಲ್‌ಕಾಲ್ ಮಾಡುತ್ತಿದ್ದಾರೆಂದು ಅವರು ಹಿಂದಿನ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣರವರಿಗೆ ಮನವಿಯನ್ನು ಕೊಟ್ಟಿದ್ದರು. ನಾನು ತಮಗೆ ಕಾಪಿಯನ್ನು ಕೊಡುತ್ತೇನೆ. ಅವರು ಮನವಿಯನ್ನು ಕೊಟ್ಟಾಗ ನಮ್ಮ ಗಾಂಧಿನಗರದಲ್ಲಿ ಒಂದು ಹೋಟೆಲ್‌ನವರು ಹೋಗಿ ಕೋರ್ಟಿಗೆ ಹಾಕಿದರು. ನೀವು ಯಾರು 11–00 ಗಂಟೆಗೆ ಕ್ಲೋಸ್ ಮಾಡಿ ಎಂದು ಹೇಳುವುದಕ್ಕೆ? ಆ ಹೋಟೆಲ್‌ನ್ನು ಒಂದು ಗಂಟೆಯವರೆವಿಗೂ ನಡೆಸುವುದಕ್ಕೆ ಹೈಕೋರ್ಟ್ ಅವಕಾಶವನ್ನು ಕೊಟ್ಟಿತ್ತು. I think it is Sukhasagar. ಅವರು ಕೋರ್ಟಿಗೆ ಹೋದರು. ಅದೊಂದನ್ನು ಕೋರ್ಟಿನಲ್ಲಿ ರಾಜಿ ಮಾಡಿಕೊಂಡರು. ಎಲ್ಲ ಅರ್ಜಿಯನ್ನು ತೆಗೆದುಕೊಂಡು ಬಿಡು ನೀನು ಒಬ್ಬ ಹೋಟೆಲ್‌ನ್ನು ನಡೆಸು, ಎಂದು ಬೇರೆಯವರೆಲ್ಲರಿಗೂ ಹೊಡೆಯುತ್ತಾರೆ. ಇದರ ಬಗ್ಗೆ ನಾನು ಇವತ್ತು ಕೇಳುತ್ತೇನೆ. ನಿಮ್ಮದು ಒಂದು ಇನ್‌ಫೋಸಿಸ್ ಸಿಟಿ ವಿಡಿಯಾ ಸಿಟಿ, ಎಲೆಕ್ಟ್ರಾನಿಕ್ ಸಿಟಿ, ಇಡೀ ಏಷ್ಯಾದಲ್ಲಿಯೇ ವಿಶ್ವದಲ್ಲಿ ಮುಂದಿರುವ ಸಿಟಿ. What is wrong? ಒಂದು ಹೋಟೆಲ್ ರಾತ್ರಿ ಹೊತ್ತು ತೆಗೆದುಕೊಂಡಿದ್ದು ಕಾಫಿ ಮತ್ತು ಟೀಯನ್ನು ಕೊಟ್ಟರೆ ಏನು ತಪ್ಪು? ರಾತ್ರಿ ಎಲ್ಲಾ ಬಸ್ಸುಗಳನ್ನು ಓಡಿಸುತ್ತೀರಿ, ರಾತ್ರಿಯೆಲ್ಲಾ ಇಂಟರ್‌ನ್ಯಾಷನಲ್ ಏರ್‌ಕ್ರಾಫ್ಟ್ ಬರುತ್ತದೆ, ರಾತ್ರಿ ಎಲ್ಲಾ ಕಾಲ್ ಸೆಂಟರ್ ಇರುತ್ತದೆ, ಮಾನ್ಯ ಸದಸ್ಯರಾದ ಶ್ರೀ ಅಶೋಕ್‌ರವರು ರಾತ್ರಿಯೆಲ್ಲಾ ಲೈವ್‌ಬ್ಯಾಂಡ್ ನಡೆಸುತ್ತಿದ್ದೀರಿ. ನಮಗೆ ಗೊತ್ತಿಲ್ಲ ನಾವು ಹಳ್ಳಿಯವರು ನಮಗೆ ಆ ಭಾಷೆ ಗೊತ್ತಿಲ್ಲ. ರಾತ್ರಿ ಎಲ್ಲಾ ಮೂವ್‌ಮೆಂಟ್ ಇರುತ್ತದೆ, ಸಿಟಿ ಮೂವ್‌ಮೆಂಟ್, ಬಸ್‌ಗಳು ಮೂವ್ ಆಗುತ್ತಿರುತ್ತದೆ, ಆಟೋಗಳು ಮೂವ್ ಆಗುತ್ತಿರುತ್ತದೆ, ಟ್ರೈನ್‌ಗಳು ಬರುತ್ತಿರುತ್ತವೆ, ದುರಂತವೆಂದರೆ, ಮೆಜಾರಿಟಿ ಆಫ್ ದಿ ಟ್ರಕ್ಸ್ ತಮಿಳುನಾಡು ಕಡೆಗೆ ಪಾಸಾಗುವಂತಹ ಮೆಜಾರಿಟಿ ಆಫ್ ದಿ ಟ್ರಕ್ಸ್ ನಿಮ್ಮ ಬೆಂಗಳೂರು ಸಿಟಿಯನ್ನು ರಾತ್ರಿ ಎಂಟ್ರಿ ಆಗುತ್ತದೆ. ಅವನು ಬೆಳಿಗ್ಗೆ ಹೊತ್ತು ಹೋದರೆ ಬೆಂಗಳೂರು ದಾಟುವುದಕ್ಕಾಗುವುದಿಲ್ಲ ಅಂತ. ಇವೆಲ್ಲವೂ ಮೂವ್‌ಮೆಂಟ್ ಇದ್ದಾಗ ದುಡ್ಡಿಗೋಸ್ಕರ ಹೋಟೆಲ್‌ನವರನ್ನು ಬೆತ್ತದಲ್ಲಿ ಹೊಡೆದು, ದಿವಸವೆಲ್ಲಾ ಪೊಲೀಸ್‌ನವರು ರೋಲ್‌ಕಾಲ್ ಮಾಡುತ್ತಾ ಇದ್ದರೆ ಪಾಪದವರು ಏನು ಮಾಡುವುದು ಸಾರ್? ರಾತ್ರಿ ಹೊತ್ತು ಕಾಫಿ–ಟೀ ಕೊಡುವ ಹೋಟೆಲ್ ತೆಗೆದಿದ್ದರೆ ಏನು ತಪ್ಪು ಸಾರ್? ಇದು ನಮಗೆ ಅರ್ಥವಾಗಲಿಲ್ಲ. ಈ ಕಾನೂನನ್ನು ಮಾಡಿದವರು ಯಾರು? Where is the law for that? ನಾನು ಈ ಅಸೆಂಬ್ಲಿಯಲ್ಲಿ ಡಿಮ್ಯಾಂಡ್ ಮಾಡುತ್ತಿದ್ದೇನೆ, ರಾತ್ರಿ 10 ರಿಂದ 11 ಗಂಟೆಯ ಮೇಲೆ ಬಾರ್‌ನ್ನು ನಡೆಸಬಾರದು ಎಂದು ಇದೆ. When licensing a bar, ಬಾರ್‌ನ್ನು ನಡೆಸಬಾರದು ಎಂದು ಕಾನೂನನ್ನು ಮಾಡಿದ್ದೀರಿ.

ಅಧ್ಯಕ್ಷರು: ಮಾಧುಸ್ವಾಮಿಯವರೆ, ನಿಲ್ಲಿಸಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಹೇಗೆ ನಿಲ್ಲಿಸಲಿಕ್ಕೆ ಆಗುತ್ತದೆ? ಅರ್ಧದಲ್ಲಿ ಮುಗಿಸುವುದಕ್ಕೆ ಆಗುತ್ತದೆಯೇ? ನೀವು ಯಾವ ಕಾರಣಕ್ಕೆ . . .

ಅಧ್ಯಕ್ಷರು: ಇನ್ನೂ ಬೇರೆ ಬೇರೆಯವರು ಬೇರೆ ಬೇರೆ ದಂಧೆಗಳ ಬಗ್ಗೆ ಮಾತನಾಡಬೇಕಾಗಿದೆ. ನೀವು ನಿಲ್ಲಿಸಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ನೋಡಿ ಅವರ ಕಥೆಯನ್ನು, ಸ್ಪೀಕರ್‌ರವರು ಹೇಳುತ್ತಿದ್ದಾರೆ. ಅವರು ಕೇಳಿರುವುದಿಲ್ಲ. ಏನು ಹೇಳುತ್ತಾರೆಂದು ಗೊತ್ತಾದರೆ ಅವರು ನಿಲ್ಲಿಸಿ ಎಂದು ಹೇಳುತ್ತಿದ್ದರೆ ಮಾನ್ಯ ರೇವಣ್ಣನವರೆ? ಸುಮ್ಮನೆ ಇವರು ಬರೀ ಟೈಮ್ ಒಂದನ್ನು ನೋಡುತ್ತಾರೆ. ಗಡಿಯಾರವನ್ನು ನೋಡುವುದು ನಿಲ್ಲಿಸಿ ಎಂದು ಹೇಳುವುದು, ಅದು ಆಗಬಾರದು. ಇದು ಬಹಳ ಸೀರಿಯಸ್ಸಾದ ಮ್ಯಾಟರ್ ಆಗಿದೆ, ಹೋಟೆಲ್‌ನವರಿಗೆ ನಿರ್ಬಂಧ ಮಾಡುವುದನ್ನು ತಪ್ಪಿಸಬೇಕು. ಶಾಪ್ಸ್ ಕೂಡ ತೆಗೆಯಬೇಕು, You are going to be an international city in future. ರಾತ್ರಿ ಹೊತ್ತು ಬಂದವರು ಏರ್‌ಕ್ರಾಫ್ಟ್‌ನವರು ಬಿಸಿನೆಸ್ ಮಾಡುವುದಕ್ಕೆ ಅವಕಾಶವಿರಬೇಕು. ಹೋಟೆಲ್‌ನಿಂದ ಇವತ್ತು ಏನು ಗೂಂಡಾಗಿರಿ, ಕಳ್ಳತನ, ಡಕಾಯಿತಿ ಇವತ್ತು ಬೆಂಗಳೂರಿನಲ್ಲಿ ಆಗುತ್ತಿಲ್ಲ. ಅದನ್ನು ತೆಗೆದಿದ್ದರೆ ಅರ್ಧ ಬ್ಯಾಡ್ ಎಲಿಮೆಂಟ್ಸ್ ಕಂಟ್ರೋಲ್ ಆಗುತ್ತದೆ. ಅಲ್ಲಿ ಜನಸಂದಣಿ ಇದ್ದರೆ, ಅದನ್ನು ಯಾರೂ ಮಾಡುವುದಕ್ಕಾಗುವುದಿಲ್ಲ. ಇಂತಹವನ್ನು ಮಾಡಿ, ಇವತ್ತು ನಾನು ಈ ಸರ್ಕಾರವನ್ನು ಕೇಳುತ್ತಿದ್ದೇನೆ. ಸರ್ಕಲ್ ಇನ್ಸ್‌ಪೆಕ್ಟರ್‌ರವರ ಇತಿಹಾಸವೇನು? ಯಾರನ್ನು ತಂದು ಸಿಟಿಯೊಳಗಡೆ ಹಾಕುತ್ತಿದ್ದೀರಿ? ಅವರನ್ನು ಹಾಕಬೇಕಾದರೆ ಅವರ ಸುಪೀರಿಯರ್ಸ್ ಬರೆಯುವ ಸಿ.ಆರ್.ಗಳನ್ನು ನೋಡುತ್ತಿದ್ದೀರಾ? ಈ ಸಬ್ ಇನ್ಸ್‌ಪೆಕ್ಟರ್ ಇಂತಹ ಜಾಗಕ್ಕೆ ಲಾಯಕ್ಕಾಗಿಲ್ಲ ಎಂದು ಡಿ.ಜಿ.ಯವರು ಹತ್ತಿರ ಕುಳಿತುಕೊಂಡು ಟ್ರಾನ್ಸ್‌ಫರ್ ಮಾಡಿಸುವಂತಹ ಸ್ಥಿತಿ; ಇಂತಿಂಥವರು ಇಂತಿಂತಹ ಅಯೋಗ್ಯ ಕೆಲಸಗಳನ್ನು ಮಾಡಿದ್ದಾರೆಂದು ಸಿ.ಆರ್.ಇದ್ದರೂ ಸಹ ಅವರನ್ನು ಕರೆದು ಒಳ್ಳೆಯ ಜಾಗಗಳನ್ನು ಕೊಡುವ ಸ್ಥಿತಿಯನ್ನು ಅಡ್ಮಿನಿಸ್ಟ್ರೇಷನ್‌ರವರು ತಂದಿಟ್ಟುಕೊಂಡರೆ ಹೇಗೆ? ಕ್ರಿಮಿನಲ್ಸ್‌ಗಳನ್ನು ಕಂಟ್ರೋಲ್ ಮಾಡುವುದಕ್ಕೆ ನಾವು ಪೋಲೀಸ್ ಟ್ರೈನಿಂಗ್‌ನ್ನು ಕೊಡುತ್ತೇವೆ; ಅದನ್ನು ಬಂದು ನಾಗರೀಕರ ಮೇಲೆ ಮಾಡುವುದಾ? ಮೈ ಮುರಿಯುವ ಹಾಗೆ ಹೊಡೆಯುವುದೇ? ಸಾರ್ ನೀವೇನಾದರೂ ಬಟ್ಟೆ ಬಿಚ್ಚಿಹಾಕಿಕೊಂಡು ರಾತ್ರಿ 11–30ರ ಸಮಯದಲ್ಲಿ ಬೆಂಗಳೂರಿನೊಳಗಡೆ ಹೋದರೆ ಸತ್ಯವಾಗಲೂ ನಿಮ್ಮನ್ನು ಹಿಡಿದು ಪೋಲೀಸ್ ಸ್ಟೇಷನ್‌ಗೆ ಹಾಕುತ್ತಾರೆ. ನಾವು ಯಾರಾದರೂ ಬರಬೇಕು ಇವರು ನಮ್ಮ ಸ್ಪೀಕರ್ ಕಣಪ್ಪಾ ಅವರು ಎಂದು ಹೇಳುವುದಕ್ಕೆ ನಾನು ನಿಜವಾಗಿಯೂ ಹೇಳುತ್ತಿದ್ದೇನೆ. ನಾನು ಕಬ್ಬನ್ ಪಾರ್ಕಿನಲ್ಲಿ ನಿಂತುಕೊಂಡು ಮಾತನಾಡುತ್ತಿದ್ದೇನೆ. ನಾನು ಎಂಎಲ್‌ಎ, ಕಣಪ್ಪಾ ಹಾಗೆಲ್ಲಾ ರೆಟ್ಟೆಗೆ ಕೈ ಹಾಕಬೇಡಪ್ಪಾ, ಎಂದು ಅವೆಲ್ಲಾ ನನಗೆ ಹೇಳಬೇಡ ಎಂದು ಹೇಳುತ್ತಾರೆ. ಬ್ಯಾಡ್ಜ್ ಹಾಕಿಕೊಳ್ಳಬೇಕು, ನೀವು ನಮ್ಮಗಳ ಕಾರಿಗೆ ಸ್ಟಿಕರ್ ಕೊಟ್ಟಿದ್ದೀರಲ್ಲಾ, ಆ ರೀತಿಯಾಗಿ ನಮ್ಮನಮ್ಮಗಳ ಹಣೆಯ ಮೇಲೆ ಅಂಟಿಸಿಕೊಳ್ಳುವುದಕ್ಕೆ ಸ್ಟಿಕರ್‌ನ್ನು ದಯವಿಟ್ಟು ಕೊಟ್ಟುಬಿಡಿ. ದೊಡ್ಡ ಕೃಪೆ ಮಾಡಿ ಹಣೆಯ ಮೇಲೆ ಬೆಳಕು ಬಿದ್ದರೆ ರಿಫ್ಲೆಕ್ಟ್ ಆಗುವಂತಹ ಒಂದೊಂದು ಸ್ಟಿಕರ್ ಕೊಟ್ಟರೆ ಎಂ.ಎಲ್.ಎ ಎಂದು ಏನಾದರೂ ಬಿಡುತ್ತಾರೆಯೇ ಏನೋ ನೋಡಬಹುದು. ಇಂತಹ ಸ್ಥಿತಿಯೇನಿದೆ ಇದು ನಿಜವಾಗಲೂ highly condemnable attitude of the Government ನೀವು ನಿಜವಾಗಲೂ ಸರ್ಕಾರವೆಂದು ಕರೆಸಿಕೊಳ್ಳುವ ಯೋಗ್ಯತೆಯನ್ನು ಉಳಿಸಿಕೊಂಡಿಲ್ಲ; ಸತ್ಯ, ನಮಗೂ ಸಹ ಇದು ಅನಿವಾರ್ಯವಾಗಿಬಿಟ್ಟಿದೆ, ಮತ್ತೆ ಚುನಾವಣೆಗೆ ಹೋಗಲಿಕ್ಕಾಗುವುದಿಲ್ಲ. ಜನಗಳ ಹತ್ತಿರ ಹೋಗಿ ಕೈಮುಗಿದರೆ ಮುಖಕ್ಕೆ ಉಗುಳುತ್ತಾರೆ, ನಿಮಗೇನೂ ಮಾಡಲಿಕ್ಕೆ ಕೆಲಸವಿಲ್ಲವೇ, ವರ್ಷೇವರ್ಷ ಚುನಾವಣೆ ಎಂದು ಬರುತ್ತೀರಿ ಎಂದು, ಕುಳಿತಿದ್ದೇವೆ ಅಷ್ಟೇ; ಬಿಟ್ಟರೆ ಬಹಳ ದೊಡ್ಡ ಸಾಧನೆ ಮಾಡುತ್ತಿದ್ದೇವೆ, ಬಹಳ ಪಾಪ್ಯುಲರ್ ಸರ್ಕಾರವನ್ನು ನಡೆಸುತ್ತಿದ್ದೇವೆಂದು ನೀವೇನಾದರೂ

ತಿಳಿದುಕೊಂಡರೆ ಅದು ನಿಜವಾಗಲೂ ದೊಡ್ಡ ತಪ್ಪು, ನೀವು ನೂರು ಚಿಲ್ಲರೆಯಿಂದ ಅರವತ್ತು ಚಿಲ್ಲರೆಗೆ ಇಳಿದವರ ಜೊತೆಗೆ ಸೇರಿಕೊಂಡಿದ್ದೀರಿ, ಬಾಯಿಗೆ ಬಂದ ಹಾಗೆ ಅವರನ್ನೆಲ್ಲಾ ಬೀದಿಯಲ್ಲಿ ಬಯ್ದಿದ್ದೀರಿ. ಇಲ್ಲಿ ಬಂದು ಸರ್ಕಾರ ಮಾಡುತ್ತಾ ಇಬ್ಬರು ಸಾರ್ವಜನಿಕವಾಗಿ ಕೃಶರಾಗುತ್ತಿದ್ದೀರಿ. ಅದರೊಂದಿಗೆ ನಿಮ್ಮ ಒಳಜಗಳಗಳೇನೂ ಕಡಿಮೆಯಾಗಿಲ್ಲ, ಪವರ್ ಜಗಳ ಕಡಿಮೆಯಾಗಿಲ್ಲ, ನೀವೆಲ್ಲಾ ಬಹಳ ಚೆನ್ನಾಗಿ ಇಲ್ಲಿ ಕುಳಿತುಕೊಂಡು ಮಾತನಾಡುತ್ತೀರಿ, ಶಿವಮೊಗ್ಗ, ಚಾಮರಾಜಪೇಟೆಗೆ ಹೋಗಿ ಪರಸ್ಪರ ಬಯ್ದಾಡುತ್ತೀರಿ, ಯಾರು ನಿಮ್ಮನ್ನು ಒಂದು ಸರ್ಕಾರ, ಕಲೆಕ್ಟೀವ್ ಡಿಸಿಷನ್, ಕ್ಯಾಬಿನೆಟ್ ಎಂದು ಕರೆಯಲಿಕ್ಕಾಗುತ್ತದೆ? ಕನಿಷ್ಠ ಸೌಜನ್ಯಕ್ಕೆ ಇಲ್ಲಿಂದ ಒಂದು ನಾಲ್ಕು ವರ್ಷವಾದರೂ ಚುನಾವಣೆಗಳನ್ನು ಇಬ್ಬರೂ ಒಂದಾಗಿ ಮಾಡಬೇಕಾಗುತ್ತದೆ. ನೀವು ಹೇಳಿ ಅಧ್ಯಕ್ಷರೆ,

ಅಧ್ಯಕ್ಷರು: ನಾವು ನಿಮ್ಮನ್ನು ಕುಳಿತುಕೊಳ್ಳಿ ಎಂದು ಹೇಳುತ್ತಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ನೀವು ಒಂದಾಗಿ ಅಲ್ಲಿ ಸರ್ಕಾರ ನಡೆಸಿದ ಮೇಲೆ ಪರಸ್ಪರ ಬಯ್ದಾಡುವುದನ್ನು ಬಿಡಬೇಕು. ಅಧ್ಯಕ್ಷರಾಗಿ ನೀವು ಅವರಿಗೆ ಇಲ್ಲಿ ನೀವೆಲ್ಲಾ ಒಂದಾಗಿದ್ದೀರಿ, ಕಲೆಕ್ಟಿವ್ ಡಿಸಿಷನ್, ಕ್ಯಾಬಿನೆಟ್‌ನಲ್ಲೆಲ್ಲಾ ಒಂದಾಗಿ ಕುಳಿತಿರುತ್ತೀರಿ, ಪಾಪ ಪುಣ್ಯಕ್ಕೆ ಇಬ್ಬರೂ ಭಾಗಸ್ಥರೇ, ಅಲ್ಲಿ ಬಯ್ದಾಡಬೇಡಿ ಎಂದು ನೀವು ಅವರಿಗೆ ಹೇಳಬೇಕೇ ಬೇಡವೇ? ಅಲ್ಲಿ ಹೋಗಿ ಬಯ್ದಾಡುವುದು, ಇಲ್ಲಿ ಬಂದು ಒಂದಾಗಿದ್ದೇವೆ ಎನ್ನುವುದು. ಇಲ್ಲಿ ಬಂದು ಒಂದಾಗಿದ್ದೇವೆ ಎನ್ನುವುದು ಅಲ್ಲಿ ಹೋಗಿ ಬಯ್ದಾಡುವುದು.

ಶ್ರೀ ಸಿ. ಚನ್ನಿಗಪ್ಪ(ರೇಷ್ಮೆ ಸಚಿವರು): ಮಾಧುಸ್ವಾಮಿಯವರು ನೀವು ಎಲ್ಲಾ ವಿಷಯಗಳನ್ನು ಚೆನ್ನಾಗಿ ಹೇಳುತ್ತೀರಿ, ಆದರೆ ನಾವು ಕಿತ್ತಾಡಿಕೊಂಡು ಸರ್ಕಾರವನ್ನು ಆಳುತ್ತಿಲ್ಲ, ಯಾವುದೇ ಮುಖ್ಯವಾದ ತೀರ್ಮಾನ ತೆಗೆದುಕೊಳ್ಳಬೇಕಾದರೂ ಮುಖ್ಯಮಂತ್ರಿಗಳ ಬಳಿ ಎಲ್ಲಾ ಸಚಿವರು ಸೇರಿ ತೆಗೆದುಕೊಳ್ಳುತ್ತಿದ್ದೇವೆ. ನೀವು ಏಕೆ ಆ ಮಾತನ್ನಾಡುತ್ತೀರಿ? ನಿಮ್ಮ ಪಾರ್ಟಿಯಂತೂ ಬರಲಿಕ್ಕೆ ಸಾಧ್ಯವಾಗುವುದಿಲ್ಲವಲ್ಲಾ.

ಶ್ರೀ ಜೆ.ಸಿ. ಮಾಧುಸ್ವಾಮಿ: ಒಂದು ಕೋರ್ಟ್ ಡಿಸಿಷನ್ ಅನ್ನು ಸರ್ಕಾರದ ವಿರುದ್ಧ ಹೈಕೋರ್ಟ್ ಹೇಳಿದರೆ ಕಾಂಗ್ರೆಸ್ ಪಾರ್ಟಿಯವರು ಸೆಲಬ್ರೇಟ್ ಮಾಡುತ್ತಾರೆ. ಚನ್ನಿಗಪ್ಪನವರು ಒಂದಾಗಿದ್ದೇವೆಂದು ಹೇಳುತ್ತೀರಿ. ಚೀಫ್ ಸೆಕ್ರೆಟರಿಯವರು ಅಫಿಡವಿಟ್ ಹಾಕುವಾಗ ಇದು ನನ್ನ ಒಪೀನಿಯನ್ ಅಲ್ಲ, ಕ್ಯಾಬಿನೆಟ್ ಒಪೀನಿಯನ್ ಎಂದು ಬರೆದು, ಅದಕ್ಕೆ ಒಳ್ಳೆಯದು, ಕೆಟ್ಟದ್ದು ಒಂದು ಕೋರ್ಟ್ ಅಡ್ವರ್ಸ ಆರ್ಡರ್ ಆದರೆ ನೀವು ಸೆಲಬ್ರೇಟ್ ಮಾಡುತ್ತೀರಿ. ನಿಮ್ಮದೇ ಪಾರ್ಟಿಯವರು, ಸರ್ಕಾರಕ್ಕೆ ಹೈಕೋರ್ಟ್ ಮುಖಕ್ಕೆ ಉಗುಳಿತು ಎಂದು ನಾನೇನೂ ಹೇಳಿಲ್ಲ. Headed by Congress Chief Minister, Congress party celebrates ಇದನ್ನು ನೀವು ಒಪ್ಪುವಿರಾ? ಈಗ ಉತ್ತರವನ್ನು ಹೇಳಿ. ನಿಮಗೆ ನಾಚಿಕೆಯಾಗುವುದಿಲ್ಲವೇ? ನಿಮ್ಮ ಕಾಂಗ್ರೆಸ್ ಪಾರ್ಟಿಯವರು ವಿಧಾನಸೌಧದ ಮುಂದೆ ಬಂದು ಸ್ಟ್ರೈಕ್ ಮಾಡುತ್ತಾರೆ . . . . . .

(ಗೊಂದಲ)

ಅಧ್ಯಕ್ಷರು: ನಿಲ್ಲಿಸಿರಿ, ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ: ಸಿ.ಡಿ. ತಂದು ಕೊಡಲೇ? ನಾನೇನು ಇವತ್ತು ಶ್ರೀಪತಿರಾವ್ ಮೇಲೆ ಹಲ್ಲೆ ಮಾಡಿರುವ ಸರ್ಕಲ್ ಇನ್ಸ್‌ಪೆಕ್ಟರ್ ಮೇಲೆ ಈ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಅವರ ಮೇಲೆ ಸಸ್ಪೆಂಡ್‌ಗೆ ರೆಕ್ಮಂಡ್ ಮಾಡಬೇಕು ಎಂದು ಒತ್ತಾಯ ಮಾಡಿ ಈಗ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮಾನ್ಯ ಶ್ರೀರಾಮರೆಡ್ಡಿಯವರು ಬೇಗ ಮಾತನಾಡಿ ಮುಗಿಸಬೇಕು.

ಶ್ರೀ ಬಸವರಾಜ ರಾಯರೆಡ್ಡಿ: ಸನ್ಮಾನ್ಯ ಅಧ್ಯಕ್ಷರೆ, ನಮ್ಮದೇನೂ ಅಬ್ಜೆಕ್ಷನ್ ಇಲ್ಲ. ಆದರೆ ಒಂದು ಸೈಡ್ ವಿರೋಧ ಪಕ್ಷದವರಿಗೆ, ಒಂದು ಬಾರಿ ಆಡಳಿತ ಪಕ್ಷದವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಬೇಕು.

(ಗೊಂದಲ)

ಅಧ್ಯಕ್ಷರು: ಆಯಿತು, ಎಲ್ಲರಿಗೂ ಅವಕಾಶವನ್ನು ಕೊಡುತ್ತೇನೆ, ಈಗ ಬೇಗ ಮಾತನಾಡಿ. 1.30 ಗಂಟೆಯೊಳಗೆ ಎಷ್ಟು ಬೇಕೋ ಅಷ್ಟನ್ನು ಮಾತನಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ(ಬಾಗೇಪಲ್ಲಿ): ರಾಮರೆಡ್ಡಿಯವರೆ, ಅಧ್ಯಕ್ಷರು ನನ್ನನ್ನು ಕರೆದಿದ್ದಾರೆ, ತಾವು ಕುಳಿತುಕೊಳ್ಳಬೇಕು. ಚರ್ಚಿಸಲು 25 ಬೇಡಿಕೆಗಳನ್ನು ಇಟ್ಟಿದ್ದೀರಿ. ಒಂದೊಂದು ಎಂತಹ ಇಲಾಖೆಗಳೆಂದರೆ ಗ್ರಾಮೀಣ ಅಭಿವೃದ್ಧಿಗೆ 611 ಕೋಟಿ ರೂಪಾಯಿಗಳನ್ನು ಈ ಸದನದಲ್ಲಿ ಮಂಜೂರು ಮಾಡಬೇಕು, ಭಾರಿ ನೀರಾವರಿ 3,942.00 ಕೋಟಿ ರೂಪಾಯಿಗಳು, ವಸತಿಗೆ 1,266 ಕೋಟಿ ರೂಪಾಯಿಗಳನ್ನು ಈ ಸದನ ಮಂಜೂರು ಮಾಡಬೇಕು. ಒಳಾಡಳಿತ, ಇಂಧನ ಇಂತಹ ಸಬ್ಜೆಕ್ಟ್‌ಗಳನ್ನು ಚರ್ಚೆಗೆ ಇಟ್ಟು ಒಂದೇ ಸಲ ಚರ್ಚಿಸಿ ಇವತ್ತು ಪಾಸ್ ಮಾಡಬೇಕೆಂದು ಹೇಳುತ್ತೀರಿ. ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ, ಪ್ರಜಾತಂತ್ರದ ವ್ಯವಸ್ಥೆಗೆ ಇದಕ್ಕಿಂತ ಅವಮಾನ ಮಾಡುವಂತಹದ್ದು ದೇಶದ ಯಾವುದೇ ಸದನದಲ್ಲೂ ಕೂಡ ನಡೆಯುವುದಿಲ್ಲ. ಏಕೆಂದರೆ ಹತ್ತು ಸಾವಿರ ಚಿಲ್ಲರೆ ಕೋಟಿ ರೂಪಾಯಿಗಳನ್ನು ಸರ್ಕಾರ ಖರ್ಚು ಮಾಡಬೇಕಾದರೆ ಈ ಸದನ ಅನುಮತಿ ಕೊಡಬೇಕು. ಈ ಸದನ ಅನುಮತಿಯನ್ನು ಕೊಡಬೇಕಾದರೆ ಪ್ರತಿಯೊಂದು ಇಲಾಖೆಯ ಯೋಗ್ಯತೆ, ಅರ್ಹತೆ, ಕೆಲಸದ ವಿಧಾನವನ್ನು ಚರ್ಚೆ ಮಾಡಿ ಈ ಇಲಾಖೆಗೆ ಇಷ್ಟು ಹಣ ಅವಶ್ಯಕತೆಯಿದೆಯೇ, ಇದಕ್ಕೆ ಇಷ್ಟು ಹಣವನ್ನು ಖರ್ಚು ಮಾಡುವಂತಹ ಯೋಗ್ಯತೆ ಇದೆಯೇ? ಸದನದಲ್ಲಿ ವಿವರವಾಗಿ ಚರ್ಚೆ ಮಾಡಿ ಇಲ್ಲಿ ಮಂಜೂರು ಮಾಡಬೇಕಾದಂತಹ ಸ್ಥಿತಿಯಿದೆ, ಇದು ಸಂವಿಧಾನದಲ್ಲಿ ಬೇಡಿಕೆಗಳ ಮೇಲೆ ಚರ್ಚೆ ಎಂದರೆ ಬಹಳ ಪವಿತ್ರವಾದಂತಹ, ಜವಾಬ್ದಾರಿಯುತವಾದಂತಹ ಕೆಲಸವಿದು. ಆದರೆ ಈ ಕೆಲಸಕ್ಕೆ ಈ ಸದನ, ಸರ್ಕಾರ ಕೊಡುತ್ತಿರುವಂತಹ ಗೌರವ ಎಷ್ಟೆಂದು ಹೇಳಿದರೆ 16ನೇ ತಾರೀಖು ಚರ್ಚೆ ಆರಂಭಿಸಿ 28ನೇ ತಾರೀಖು ಮುಗಿಸಬೇಕು. 36 ಇಲಾಖೆಗಳಿಗೆ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಮಂಜೂರು ಮಾಡಬೇಕೆಂದು ಕೇಳುತ್ತೀರಿ. ಜಗತ್ತಿನ ಪ್ರಜಾಪ್ರಭುತ್ವದಲ್ಲಿ ಇದಕ್ಕಿಂತ ಅವಮಾನಕರವಾದ ಪ್ರಸಂಗ ಬಹುಶಃ ಎಲ್ಲೂ ಕೂಡ ನಡೆಯಲಿಕ್ಕೆ ಸಾಧ್ಯವಿಲ್ಲ. ಇಷ್ಟು ಬೇಡಿಕೆಗಳಿಗೆ ಒಂದೇ ದಿವಸ ಉತ್ತರ ಕೊಡಬೇಕೆಂದು ಹೇಳುತ್ತಾರೆ, ಮೊನ್ನೆ ದಿವಸ ತೋಟಗಾರಿಕೆ ಸಚಿವರು ಎರಡು ಗಂಟೆ ಕಾಲ ಉತ್ತರಕೊಟ್ಟರು, ಇವತ್ತು 25 ಬೇಡಿಕೆಗಳಿಗೆ ಮಧ್ಯಾಹ್ನದೊಳಗೆ ಉತ್ತರ ಕೊಟ್ಟು ಮುಗಿಸಬೇಕು ಎಂದು ಹೇಳುತ್ತೀರಿ, ಹಾಗಾದರೆ ಚರ್ಚೆಗೆ ಏಕೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ? ಸದನ ಏಕೆ ನಡೆಯಬೇಕು? ಇವತ್ತು ಮೆಜಾರಿಟಿ ಇದೆಯೆಂದು ಪಾಸ್ ಮಾಡಿಕೊಂಡು ಬಿಲ್ ಹಾಕಿಕೊಂಡು ಹೋಗಿಬಿಡಿ, ಸದನದಲ್ಲಿ ಚರ್ಚಿಸಲಿಕ್ಕೆ ಅವಕಾಶ ಏತಕ್ಕೆ ಕೊಡಬೇಕು, ಬೇಕಾಗಿಲ್ಲ, ಪಾಸ್ ಮಾಡಿಕೊಳ್ಳಿ, 25 ಬೇಡಿಕೆಗಳ ಮೇಲೆ ಹಲವಾರು ಮಾನ್ಯ ಸದಸ್ಯರು ಮಾತನಾಡಿರತಕ್ಕಂತಹ ಸಂದರ್ಭದಲ್ಲಿ ಕೆಲವು ಇಲಾಖೆಗಳ ಬಗ್ಗೆ ಒಂದು ಮಾತನ್ನೂ ಕೂಡ ಆಡಿಲ್ಲ.

ಅಧ್ಯಕ್ಷರು: ಶ್ರೀರಾಮರೆಡ್ಡಿಯವರೆ, ಸಬ್ಜೆಕ್ಟ್‌ಗೆ ಬಂದು ಮಾತನಾಡಿ. ಈಗ ಸಮಯವಿಲ್ಲ, ಇನ್ನೂ ಅನೇಕರು ನಿಮ್ಮೆದುರಿಗೆ ಅವಕಾಶವನ್ನು ಕೇಳುತ್ತಿದ್ದಾರೆ. ಈಗ 20 ಬೇಡಿಕೆಗಳನ್ನು ಹಾಕಲೇಬೇಕಾಗುತ್ತದೆ. ಮೊದಲು, 3 ನಂತರ 5 ಬೇಡಿಕೆಗಳನ್ನು ಹಾಕಿದ್ದೇನೆ. ಈಗ ಅನಿವಾರ್ಯವಾಗಿ ಬೇಡಿಕೆಗಳನ್ನು ಹಾಕಲೇಬೇಕಾಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು ಸಬ್ಜೆಕ್ಟ್ ಬಗ್ಗೆ ಮಾತನಾಡುತ್ತಿದ್ದೇನೆ, ನಾನು ಬೇರೆ ವಿಷಯದ ಬಗ್ಗೆ ಮಾತನಾಡುತ್ತಿಲ್ಲ.

ಅಧ್ಯಕ್ಷರು: ಅನಿವಾರ್ಯವಾಗಿ ಹಾಕಬೇಕಾಯಿತು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಏಕೆ ಅನಿವಾರ್ಯವಾಗುತ್ತದೆ?

ಶ್ರೀ ಎಸ್.ಎಸ್. ಪಾಟೀಲ್: ಮೂರು ದಿವಸ ಸದನದ ಸಮಯ ವೇಸ್ಟ್ ಆಯಿತು.

(ಗೊಂದಲ)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ನೀವು ಸದನಕ್ಕೆ ಬರುವುದೇ ಇಲ್ಲ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಈ ಸದನ ಪ್ರಜಾಪ್ರಭುತ್ವದ್ದು, ದಾಮಾಶಾಹಿ ಸರ್ಕಾರವಲ್ಲ ಇದು. ಇದು ಶಾಸನಸಭೆ, ಇಲ್ಲಿ ಪ್ರತಿಭಟನೆ, ಧರಣಿ, ಸತ್ಯಾಗ್ರಹ ಮಾಡಲಿಕ್ಕೆ ನಮಗೆ ಹಕ್ಕು ಇದೆ.

ಅಧ್ಯಕ್ಷರು: ಅವರಿಗೆ ಮಾತನಾಡಲಿಕ್ಕೆ ಅವಕಾಶವನ್ನು ಮಾಡಿಕೊಡಿ, ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್: ಇವರು ಸದನ ಸೇರಿದರೆ ಒಬ್ಬರು ಒಂದು ಗಂಟೆಯಾದರೂ ಪತ್ತೆಯಿರುವುದಿಲ್ಲ. ಈಗ ಇಲ್ಲಿಗೆ ಬಂದು ಕಾಲಹರಣ ಮಾಡುತ್ತೀರಿ ಎಂದು ಹೇಳುತ್ತಿದ್ದಾರೆ. ಮೂರು ದಿವಸ ಏನು ಮಾಡಿದಿರಿ ಎಂದು ಕೇಳುತ್ತಾರೆ, ಶ್ರೀ ಎಸ್.ಎಸ್. ಪಾಟೀಲರೆ, ನೀವು ಸ್ವಲ್ಪ ಅವರಿಗೆ ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಎಸ್.ಎಸ್. ಪಾಟೀಲರ ಬಗ್ಗೆ ಬಹಳ ಗೌರವವಿದೆ, ಅವರು ಹಿರಿಯ ಸದಸ್ಯರು, ಈ ಸದನ ಜನಗಳಿಂದ ಆಯ್ಕೆಯಾಗಿರುವಂಥದ್ದು; ಜನಗಳ ಸಮಸ್ಯೆಯ ಬಗ್ಗೆ ಮಾತನಾಡತಕ್ಕಂತಹ ಸಂದರ್ಭದಲ್ಲಿ ಸದನದಲ್ಲಿ ಧರಣಿ, ಸತ್ಯಾಗ್ರಹವನ್ನು ಹಾಗೂ ಹೋರಾಟವನ್ನು ಮಾಡಬೇಕಾಗುತ್ತದೆ, ನಾವು ಇಲ್ಲಿ ಮೂಕರಾಗಿ ಕುಳಿತುಕೊಳ್ಳಲಿಕ್ಕಾಗಿ ಜನ ನಮ್ಮನ್ನು ಇಲ್ಲಿಗೆ ಆರಿಸಿ ಕಳುಹಿಸಿಲ್ಲ, ನೀವು ಹೇಳಿದ ಹರಿಕಥೆಯನ್ನು ಕೇಳಿಕೊಂಡು ಹೋಗಲಿಕ್ಕೆ ಜನ ನಮ್ಮನ್ನು ಇಲ್ಲಿಗೆ ಕಳುಹಿಸಿಲ್ಲ.

ಶ್ರೀ ಎಸ್.ಎಸ್. ಪಾಟೀಲ್: ಒಂದು ದಿವಸ ಧರಣಿ ಮಾಡಿದ್ದರೆ ಸಾಕಾಗಿತ್ತು, ಇನ್ನು ಎರಡು ದಿವಸ ಮಾಡುವ ಅವಶ್ಯಕತೆಯಿರಲಿಲ್ಲ. ಈಗಾಗಲೇ ಸದನದ ವೇಳೆ ಮುಗಿದುಹೋಗುತ್ತಿದೆ, ತಾವು ಮೊದಲೇ ಈ ವಿಷಯವನ್ನು ತೆಗೆದುಕೊಂಡಿದ್ದಾರೆ ಮುಗಿದುಹೋಗುತ್ತಿತ್ತು. ಇದನ್ನು ಮಾಡಬೇಕು, ನಾನು ಬೇಡವೆನ್ನುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಿಮ್ಮ ಉಪದೇಶ ಬೇಕಾಗಿಲ್ಲ, ನಿಮ್ಮ ಬಗ್ಗೆ ಬಾರಿ ಗೌರವವನ್ನು ಇಟ್ಟುಕೊಂಡಿದ್ದೇವೆ. ನೀವು ಆ ರೀತಿ ಮಾತನಾಡಬೇಡಿ. ಅದು ಸರಿಯಲ್ಲ. ಪ್ರಜಾಪ್ರಭುತ್ವಕ್ಕೆ ಅಪಚಾರ ಅದು. ಹೋರಾಟ ಮಾಡತಕ್ಕಂಥಾದ್ದು ಪ್ರಜಾಪ್ರಭುತ್ವದ ಮೂಲಭೂತ ಹಕ್ಕು. ಅದನ್ನು ಕಿತ್ತುಕೊಳ್ಳುವ ಅಧಿಕಾರ ಯಾರಿಗೂ ಇಲ್ಲ.

ಅಧ್ಯಕ್ಷರು: ಶ್ರೀರಾಮರೆಡ್ಡಿಯವರೆ, ದಯವಿಟ್ಟು ತಾವು ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ನಾನು ಕುಳಿತಿದ್ದೇನೆ. ನೀವು ನನ್ನ ಹೆಸರು ಕರೆಯುತ್ತಿದ್ದೀರಿ. ಅವರು ಕಾಂಗ್ರೆಸ್ಸ್‌ಗೆ ಹೋಗಿ ಸೇರಿದ ಮೇಲೆ ಕುಲಗೆಟ್ಟುಹೋದರು ಈ ಕಡೆ ಇದ್ದಾಗ ಚೆನ್ನಾಗಿದ್ದರು ಎಸ್.ಎಸ್. ಪಾಟೀಲರು. ಬಹಳ ಚೆನ್ನಾಗಿದ್ದರು. ಏಕೆ ಅವರು ಕೆಟ್ಟುಹೋದರೋ ನನಗಂತೂ ಗೊತ್ತಾಗುತ್ತಿಲ್ಲ.

ಶ್ರೀ ಎಸ್.ಎಸ್. ಪಾಟೀಲ್: ನಾನು ಅಲ್ಲಿದ್ದಾಗ ಪ್ರತಿಭಟನೆ ಮಾಡಿದ್ದೇನೆ. ಈ ತರಹ ಅಲ್ಲ. ತಾವು ಮೂರು ದಿವಸ ಪ್ರತಿಭಟನೆ ಮಾಡುವ ಅವಶ್ಯಕತೆ ಇರಲಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ತಾವು ಮತ್ತೆ ಅದನ್ನೇ ಮಾತನಾಡಬೇಡಿ.

ಶ್ರೀ ಎಸ್.ಎಸ್. ಪಾಟೀಲ್: ಯಾವುದಕ್ಕೂ ಇತಿಮಿತಿ ಇರುತ್ತದೆ. ಸದನದ ವೇಳೆಯನ್ನು ನಾವು ಅಪವ್ಯಯ ಮಾಡುತ್ತಿದ್ದೇವೆ. ಆ ದೃಷ್ಟಿಯಿಂದ ನಾನು ಹೇಳಿದೆ ಅಷ್ಟೇ. ವಿರೋಧ ಪಕ್ಷದವರು ಧರಣಿ ಮಾಡಬೇಕಾಗುತ್ತದೆ. ಮಾಡಬಾರದು ಎಂದು ನಾನು ಹೇಳುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: 10 ಗಂಟೆಗೆ ಸದನ ಸೇರುತ್ತದೆಂದು ಹೇಳಿ 11 ಗಂಟೆಗೆ ನೀವು ಬರುತ್ತೀರಿ; ಮತ್ತೆ ಮಾತನಾಡುತ್ತಿದ್ದೀರಾ? ಜವಾಬ್ದಾರಿ ಇಲ್ಲವೇ ನಿಮಗೆ? 10 ಗಂಟೆಗೆ ಸದನ ಸೇರುತ್ತದೆಂದು ಹೇಳಿದರೆ 11 ಗಂಟೆಗೆ ಬರುತ್ತಾರೆ. ಮಂತ್ರಿಗಳನ್ನು ಕುಳಿತುಕೊಳ್ಳುವುದಕ್ಕೆ ಹೇಳಿ. ಮತ್ತೆ ಮಾತನಾಡುತ್ತಿದ್ದೀರಿ ನೀವು.

ಅಧ್ಯಕ್ಷರು: ರೀ ಸಬ್ಜೆಕ್ಟ್ ಮೇಲೆ ಮಾತನಾಡ್ರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಏನು ಕೆಲಸ ಇದೆ ನಿಮಗೆ? ಮಾಧುಸ್ವಾಮಿಯವರು ಹೇಳಲಿಲ್ಲವೇ? ಏನು ಕೆಲಸ ಮಾಡುತ್ತಿದ್ದೀರಿ ನೀವು? ಇಷ್ಟು ಹೊತ್ತು ಮಾತನಾಡಿದರು ನಮ್ಮ ಸ್ನೇಹಿತರು, ನೀವು ಏನು ಕೆಲಸ ಮಾಡುತ್ತಿದ್ದೀರಿ ಎಂದು.

ಶ್ರೀ ಎಸ್.ಎಸ್. ಪಾಟೀಲ್: ಒಳ್ಳೆಯ ಸಲಹೆ ಹೇಳಿದರೆ ಅದಕ್ಕೆ ನಾವೂ ಒಪ್ಪುತ್ತೇವೆ. ಇಲ್ಲ ಎಂದು ಹೇಳುವುದಿಲ್ಲ. ಆದರೆ 3 ದಿವಸ ನೀವು ಮಾಡಿದ್ದು ತಪ್ಪು, ಅದನ್ನು ನೀವು ಒಪ್ಪಿಕೊಳ್ಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾವು ತಪ್ಪು ಮಾಡಿಲ್ಲ. ನಮ್ಮ ಹಕ್ಕನ್ನು ನಾವು ಚಲಾಯಿಸಿದ್ದೇವೆ. ಮಾನ್ಯ ಅಧ್ಯಕ್ಷರೆ, ನಾವು ತಪ್ಪು ಮಾಡಿಲ್ಲ. ನಾವು ನಮ್ಮ ಹಕ್ಕನ್ನು ಚಲಾಯಿಸಿದ್ದೇವೆ.

(ಗೊಂದಲ)

ಅಧ್ಯಕ್ಷರು: ಯಾವುದನ್ನು ರೆಕಾರ್ಡ್ ಮಾಡಬೇಡಿ. ಅವರವರು ಮಾತನಾಡಿ ಅವರು ಸಮಾಧಾನವಾದ ಮೇಲೆ ನೋಡೋಣ.

XXX ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಇಷ್ಟು ಇಲಾಖೆಗಳ ಪೈಕಿ ಬಹಳ ಪ್ರಮುಖವಾದ ಗ್ರಾಮೀಣಾಭಿವೃದ್ಧಿ ಇಲಾಖೆ ಬಗ್ಗೆ ನಾನು ಮಾತನಾಡಲು ಬಯಸುತ್ತೇನೆ. ಏಕೆಂದರೆ ಈ ಸದನದಲ್ಲಿ ಆಗಲೇ ಮಾನ್ಯ ಎಸ್.ಎಸ್. ಪಾಟೀಲರು ಹೇಳಿದರಲ್ಲಾ ಧರಣಿ-ಧರಣಿ ಅಂತ

XXX ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ದಾಖಲು ಮಾಡಿರುವುದಿಲ್ಲ.

ನೀವು ಸದನದ ಸಮಯವನ್ನು ವೇಸ್ಟ್ ಮಾಡಿದಿರಿ ಎಂದು. ಈ ಗ್ರಾಮೀಣಾಭಿವೃದ್ಧಿಯ ಇಲಾಖೆಯ ಬೇಡಿಕೆಗಳಿಗೆ, ಸಮಸ್ಯೆಗಳಿಗೆ ಸಂಬಂಧಪಟ್ಟ ಹಾಗೆಯೇ ಸುಮಾರು ಚರ್ಚೆಯಾಗಿ ಧರಣಿ ನಡೆದು ಹೋರಾಟ ನಡೆದಿದೆ. ಏನು ಇಲ್ಲಿ ಚರ್ಚೆಯಾಗತಕ್ಕಂಥಾದ್ದು, ನಾವು ಗ್ರಾಮೀಣಾಭಿವೃದ್ಧಿಗೆ ಸಂಪೂರ್ಣವಾದಂಥ ಅಧಿಕಾರವನ್ನು ಕೊಟ್ಟು ಇಡೀ ಗ್ರಾಮೀಣ ಪ್ರದೇಶದಲ್ಲಿ ಕರ್ನಾಟಕ ರಾಜ್ಯದಲ್ಲಿ ಅದನ್ನು ಅಭಿವೃದ್ಧಿಪಡಿಸತಕ್ಕಂಥ ಅಧಿಕಾರವನ್ನು ಹಳ್ಳಿ ಜನಕ್ಕೆ ಕೊಡಬೇಕು, ಆ ಅಧಿಕಾರದಲ್ಲಿ ಶಾಸಕರಾಗಲಿ, ಲೋಕಸಭಾ ಸದಸ್ಯರಾಗಲಿ ಯಾರೂ ಹಸ್ತಕ್ಷೇಪ ಮಾಡಬಾರದು ಅನ್ನತಕ್ಕಂಥ ಉಪದೇಶವನ್ನು, ಆದೇಶವನ್ನು ಕಾನೂನನ್ನು ನಾವು ಕೇಳಿದೆವು. ಮಾನ್ಯ ಅಧ್ಯಕ್ಷರೆ, ಕೇಳಿ 1987ನೇ ಇಸವಿಯಲ್ಲಿ ಈ ವಿಕೇಂದ್ರೀಕರಣ ಪ್ರಕ್ರಿಯೆ ಪ್ರಾರಂಭವಾಯಿತು. ಆ ವಿಕೇಂದ್ರೀಕರಣ ಪ್ರಕ್ರಿಯೆ ಪ್ರಾರಂಭವಾದ ಮೇಲೆ ಅಂದರೆ ಸರಿಸುಮಾರು ಇವತ್ತಿಗೆ 18 ವರ್ಷವಾಗಿದೆ. 18 ವರ್ಷಗಳ ಅನುಭವದಲ್ಲಿ ನಾವು ಇವತ್ತು ವಿಕೇಂದ್ರೀಕರಣದ ಪರಿಣಾಮ ಏನಾಗಿದೆ ಎನ್ನತಕ್ಕಂಥಾದ್ದನ್ನು ನಾವು ಆಲೋಚನೆ ಮಾಡಬೇಕಾಗಿದೆ. ನಾವು ವಿಕೇಂದ್ರೀಕರಣದ ವಿರುದ್ಧವಾಗಿ ಮಾತನಾಡಿದರೆ, ಪ್ರಶ್ನೆ ಮಾಡಿದರೆ, ಪ್ರಶ್ನೆ ಕೇಳಿದರೆ ನೀವು ವಿಕೇಂದ್ರೀಕರಣದ ವಿರುದ್ಧವೇ ಎಂದು ಕೇಳುತ್ತೀರಿ. ವಿಕೇಂದ್ರೀಕರಣ ಅಂದರೆ ಜನಗಳ ಕೈಗೆ ಅಧಿಕಾರ ಕೊಡಬೇಕು ಎಂದು ನಾವು ಇದ್ದೇವೆ, ಅದಕ್ಕೆ ನೀವು ವಿರೋಧವಾಗಿದ್ದೀರಾ ಎಂದು ನಮ್ಮ ಬಗ್ಗೆ ಮಾತನಾಡುತ್ತೀರಿ. ಇದರಲ್ಲಿ ಪ್ರಮುಖವಾದ ಅಂಶ ಏನಿದೆ ಅಂದರೆ ಗ್ರಾಮೀಣ ಜನರು ಕೊಂಡುಕೊಳ್ಳತಕ್ಕಂಥ ಶಕ್ತಿಯನ್ನು ಹೆಚ್ಚು ಮಾಡಬೇಕು. ಗ್ರಾಮೀಣಾಭಿವೃದ್ಧಿಗೆ ತಮ್ಮ ಕಾರ್ಯಕ್ರಮ ಏನು? ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ? ನಿಜವಾಗಿಯೂ ಗ್ರಾಮೀಣ ಜನರು ಕೊಂಡುಕೊಳ್ಳತಕ್ಕಂಥ ಶಕ್ತಿಯನ್ನು ಹೆಚ್ಚು ಮಾಡಿದ್ದೀರಾ? ನಿಜವಾಗಿಯೂ ಗ್ರಾಮೀಣ ಜನರ ಅಭಿವೃದ್ಧಿಯನ್ನು ಮಾಡಿದ್ದೀರಾ? ಮಾನ್ಯ ಅಧ್ಯಕ್ಷರೆ, ಯೋಜನಾ ಆಯೋಗದ ವರದಿಯನ್ನು ತಾವು ತೆಗೆದು ನೋಡಿ. ಅದರಲ್ಲಿ ಏನು ಹೇಳಿದ್ದಾರೆಂದರೆ "The purchasing power of the common man in Karnataka compared to 1993-2003 has come down to $3\frac{1}{2}\%$." ಇದು ಅವರು ಹೇಳಿರುವುದು; ನಾವು ಹೇಳಿರುವುದಲ್ಲ. ಕೇಂದ್ರ ಸರ್ಕಾರ ಹೇಳಿರತಕ್ಕಂಥಾದ್ದು. ಖ್ಯಾತ ಅರ್ಥ ಶಾಸ್ತ್ರಜ್ಞರಾದ ಶ್ರೀ ವಿ.ಎನ್. ದಾಂಡೇಕರ್ ಅವರು, ಕೊಟ್ಟಿರತಕ್ಕಂಥ ವರದಿಯಲ್ಲಿ ಇದೆ. ಶ್ರೀ ಡಿ.ಆರ್. ಪಾಟೀಲ್‌ರವರು ಆ ಪುಸ್ತಕವನ್ನು ಕೊಡಿ ನಾನು ನೋಡುತ್ತೇನೆಂದು ಕೇಳಿದರು, ಆಗ ನಾನು ನಮ್ಮ ಲೈಬ್ರರಿಯಲ್ಲಿ ಇರಬಹುದು ನೋಡಿ ಎಂದೆ. ನಾನು ಆ ಪುಸ್ತಕವನ್ನು ಹುಡುಕಿ ನೋಡಿದೆ. ಆ ಪುಸ್ತಕವನ್ನು ನನ್ನ ಸ್ನೇಹಿತರೊಬ್ಬರು ಓದಲು ತೆಗೆದುಕೊಂಡು ಹೋಗಿದ್ದಾರೆ. ಅವರು ಅದರಲ್ಲಿ ಒಂದು ಮಾತು ಹೇಳಿದ್ದಾರೆ. ಅದೇನೆಂದರೆ, "ಭಾರತ ದೇಶದಲ್ಲಿ ಹಳ್ಳಿಗಾಡಿನಲ್ಲಿರತಕ್ಕಂಥ ಜನಗಳಿಗೆ ಒಂದು ವರ್ಷಕ್ಕೆ ಕನಿಷ್ಠ 5 ಮೀಟರ್ ಬಟ್ಟೆಯನ್ನು ಕೊಂಡುಕೊಳ್ಳತಕ್ಕಂಥ ಶಕ್ತಿಯನ್ನು ನಾವು ಕೊಟ್ಟರೆ ನಮ್ಮ ಭಾರತ ದೇಶದಲ್ಲಿ ಟೆಕ್ಸ್‌ಟೈಲ್ ಮಿಲ್ಸ್ ಈಗ ಇರುವುದಕ್ಕಿಂತ ನೂರು ಪರ್ಸೆಂಟ್ ಜಾಸ್ತಿಯಾಗುತ್ತವೆ, ಇದರಿಂದ ಅನುಕೂಲವಾಗುತ್ತದೆಂದು" ಅವರು ತಮ್ಮ ಅಭಿಪ್ರಾಯವನ್ನು ಆ ಪುಸ್ತಕದಲ್ಲಿ ಹೇಳಿದ್ದಾರೆ. ಆದರೆ ಇವತ್ತು ಏನಾಗಿದೆ ಎಲ್ಲಾ ಟೆಕ್ಸ್‌ಟೈಲ್ ಮಿಲ್ಸ್‌ನ್ನು ಮುಚ್ಚುತ್ತಿದ್ದೇವೆ. ಇನ್ನು ಕೊಂಡುಕೊಳ್ಳತಕ್ಕಂಥ ಶಕ್ತಿ ಸಂಪೂರ್ಣವಾಗಿ ಕುಸಿದು ಹೋಗಿದೆ. ನೀವು ಹೇಳುತ್ತಿದ್ದೀರಿ ನಮ್ಮ ಉತ್ಪಾದನಾ ಶಕ್ತಿ ಜಾಸ್ತಿಯಾಗಿದೆ, ತಲಾ ಆದಾಯ ಜಾಸ್ತಿಯಾಗಿದೆ ಎಂದು. ತಲಾ ಆದಾಯ ಮತ್ತು ಉತ್ಪತ್ತಿ ಎಲ್ಲಿ ಜಾಸ್ತಿಯಾಗಿದೆ ಅಂದರೆ ಹಣಕಾಸಿನ

ಲೆಕ್ಕದಲ್ಲಿ ಜಾಸ್ತಿಯಾಗಿದೆ. ಅದು ಲೆಕ್ಕ ಆಗುವುದಿಲ್ಲ. Purchasing power of the rupee has come down. I am not talking of the capacity. Purchasing power, ಎಷ್ಟು ಇವತ್ತು ! ನಮ್ಮ ದೇಶದಲ್ಲಿ ಒಂದು ರೂಪಾಯಿ ಮಾರ್ಕೆಟ್ ವ್ಯಾಲ್ಯು ಏನಿದೆ ಅಂದರೆ 11.5 ಪೈಸೆ. ಹೆಸರಿಗೆ 100 ಪರ್ಸೆಂಟ್. ಕೊಂಡುಕೊಳ್ಳತಕ್ಕಂಥಾದ್ದು ಒಂದು ರುಪಿ ಬೆಲೆ 11.5 ಪೈಸೆ. ಅಂದರೆ ನಾವು ಒಂದು ರೂಪಾಯಿಯನ್ನು ಲೆಕ್ಕಕ್ಕೆ ತೆಗೆದುಕೊಂಡರೆ ನಿಜವಾಗಿಯೂ ಅದು 11.5 ಪೈಸೆ. ಅಂದರೆ ಒಂದು ರೂಪಾಯಿ ಬೆಲೆ 11.5 ಪೈಸೆ ಮಾತ್ರ. ಒಂದು ರೂಪಾಯಿಗೆ 90 ಪರ್ಸೆಂಟ್‌ನಷ್ಟು ಬೆಲೆ ಬಂದರೆ ಆಗ ನಮ್ಮ ಆದಾಯ ಜಾಸ್ತಿಯಾಗಿದೆ ಎಂದು ಭಾವಿಸಬಹುದು. ನಮಗೆ ಪರ್ಚೇಸಿಂಗ್ ಕೆಪ್ಯಾಸಿಟಿ ಜಾಸ್ತಿ ಆಗಬೇಕು. ಅದು ಆಗಿದೆಯೇ? ನನ್ನ ಪ್ರಕಾರ ಪರ್ಚೇಸಿಂಗ್ ಕೆಪ್ಯಾಸಿಟಿ ಕಡಿಮೆ ಆಗಿದೆ. ಈ ಬಗ್ಗೆ ಗ್ರಾಮೀಣಾಭಿವೃದ್ಧಿ ಇಲಾಖೆ ಏನು ಕಾರ್ಯಕ್ರಮ ಹಾಕಿಕೊಂಡಿದೆ? ಈ ಕಾರ್ಯಕ್ರಮಕ್ಕೆ ಎಷ್ಟು ಖರ್ಚು ಮಾಡುತ್ತೀದ್ದೀರಿ? ಇದಕ್ಕೆ ಯಾವ ಶಾಸಕರು, ಯಾವ ಲೋಕಸಭಾ ಸದಸ್ಯರು ಅಡ್ಡಿ ಬರುತ್ತಾರೆ? ನೀವು ಈ ಕಾರ್ಯಕ್ರಮಕ್ಕೆ ಹಣವನ್ನೇ ಖರ್ಚು ಮಾಡುತ್ತಿಲ್ಲ. ಇನ್ನು ಎರಡನೆಯದಾಗಿ, ಬಹಳ ಮುಖ್ಯವಾದ ವಿಚಾರ ಅಂದರೆ ಇವತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಆಕ್ಟ್‌ಗೆ ರಾಜ್ಯಾಂಗದ 73ನೇ ವಿಧಿಯನ್ನು ತಿದ್ದುಪಡಿ ಮಾಡಿದಿರಿ. ಏಕೆಂದರೆ ಇವತ್ತು ದೇಶದಲ್ಲಿ ಅನೇಕ ಭಾಗಗಳಲ್ಲಿ ಚರ್ಚೆ ನಡೆಯುತ್ತಿದೆ. ನಾವು ಹಣ ತೆಗೆದುಕೊಳ್ಳುತ್ತಿರುವುದು ಎಷ್ಟು? ನಮ್ಮ ಗ್ರಾಮೀಣ ಜನಸಂಖ್ಯೆ ಎಷ್ಟು? ವರ್ಲ್ಡ್ ಬ್ಯಾಂಕ್‌ನವರು ಒಂದು ವರದಿಯಲ್ಲಿ ಹೇಳಿದ್ದಾರೆ. ನಾವು ಟಿ.ಪಿ.ಎಸ್.ನಲ್ಲಿ ಕೊಟ್ಟಿರತಕ್ಕಂಥದ್ದು, is not according to the need-based. You are giving it only for expenditure. ವರ್ಲ್ಡ್ ಬ್ಯಾಂಕ್ ಕೊಟ್ಟಿರತಕ್ಕಂಥಾದ್ದು; Financial decentralisation of rurla gavernance in India ರಿಪೋರ್ಟ್‌ನಲ್ಲಿ ಹೇಳಿದ್ದಾರೆ. ಇವತ್ತು ನಿಮಗೆ ಗ್ರಾಮೀಣಾಭಿವೃದ್ಧಿ ಮಾಡಲು ಪ್ರಾಮಾಣಿಕ ಕಾಳಜಿ ಸರ್ಕಾರಕ್ಕೆ ಇದೆಯೇ? ಗ್ರಾಮೀಣ ಪ್ರದೇಶದಲ್ಲಿ ವಾಸ ಮಾಡತಕ್ಕಂಥ ಜನಸಂಖ್ಯೆ ಎಷ್ಟು? ಅವರ ಜೀವನವನ್ನು ಉತ್ತಮಪಡಿಸತಕ್ಕಂಥ ದಿಸೆಯಲ್ಲಿ ರಾಜ್ಯ ಸರ್ಕಾರ ಏನು ಮಾಡಿದ್ದೀರಿ? ಇವತ್ತು ನಾವು ಕರ್ನಾಟಕ ರಾಜ್ಯದಲ್ಲಿ ಈ ಗ್ರಾಮೀಣಾಭಿವೃದ್ಧಿಗೆ ಎಷ್ಟು ಹಣ ಖರ್ಚು ಮಾಡಿದ್ದೀರಿ ಎನ್ನುವ ಉದಾಹರಣೆಯನ್ನು ತೆಗೆದುಕೊಂಡರೆ ಇದು ಏನೇನೂ ಸಾಲದು. ಈ ಇಲಾಖೆಗೆ ಒಟ್ಟು ರಾಜ್ಯದ ಆದಾಯದಲ್ಲಿ ಶೇಕಡ 4.3 ಪರ್ಸೆಂಟ್ ಹಣ ಕೊಟ್ಟಿದ್ದೀರಿ.

(ಶ್ರೀ ಡಿ.ಆರ್. ಪಾಟೀಲ್‌ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ನಮ್ಮ ರಾಜ್ಯದ ಆದಾಯದಲ್ಲಿ, ಈ ಗ್ರಾಮೀಣಾಭಿವೃದ್ಧಿ ಇಲಾಖೆಗೆ ಕೇರಳದಲ್ಲಿ ಎಷ್ಟು ಹಣ ಇಟ್ಟಿದ್ದಾರೆ ಎನ್ನುವ ಒಂದು ಸರ್ವೆ ಮಾಡಿದ್ದಾರೆ. ಆ ಸರ್ವೆ ರಿಪೋರ್ಟ್ ಪ್ರಕಾರ ಅವರು ಆ ರಾಜ್ಯದ ಒಟ್ಟು ಆದಾಯದಲ್ಲಿ ಶೇಕಡ 18 ಪರ್ಸೆಂಟ್ ಹಣವನ್ನು ಇಟ್ಟಿದ್ದಾರೆ. ಕೇರಳ ರಾಜ್ಯ ಪಾಪ್ಯುಲೇಶನ್ ವೈಜ್ ನಮ್ಮ ರಾಜ್ಯದ ಅರ್ಧದಷ್ಟು ಇದೆ. ಕೇರಳ ರಾಜ್ಯದಲ್ಲಿ ಅವರು ಈ ಗ್ರಾಮೀಣಾಭಿವೃದ್ಧಿಗೆ 18 ಪರ್ಸೆಂಟ್ ಹಣವನ್ನು ಅವರ ಬಜೆಟ್‌ನಲ್ಲಿ ಕೊಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿ ನಾವು ನಮ್ಮ ರಾಜ್ಯದ ಒಟ್ಟಾರೆ ಬಜೆಟ್‌ನಲ್ಲಿ 4.31 ಪರ್ಸೆಂಟ್ ಕೊಟ್ಟಿದ್ದೇವೆ. ನಿಮಗೆ ಪ್ರಾಮಾಣಿಕ ಕಾಳಜಿ ಈ ಗ್ರಾಮೀಣಾಭಿವೃದ್ಧಿ ಮೇಲೆ ಇದೆಯೇ? ನೀವು ಯಾವ ರೀತಿಯಲ್ಲಿ ಅಭಿವೃದ್ಧಿ ಮಾಡುತ್ತೀರಿ? ನನ್ನದೊಂದು ಸವಾಲು ಇದೆ. ಈ ಇಲಾಖೆಯ ಕಾರ್ಯದರ್ಶಿಗಳು ಇವತ್ತು ಬಂದಿಲ್ಲ. ಅವರು ಯಾವಾಗಲೂ ಗ್ರಾಮೀಣ

ಜನರ ಕೈಗೆ ಅಧಿಕಾರ ಕೊಡಬೇಕೆಂದು ಹೇಳುತ್ತಿರುತ್ತಾರೆ. ನನ್ನ ಒಂದು ಸವಾಲು ಇದೆ. ಈ ಸದನದಲ್ಲಿ ನಾನು ಹೇಳುತ್ತೇನೆ. 1987ನೇ ಇಸವಿಯಲ್ಲಿ ಈ ವಿಕೇಂದ್ರೀಕರಣ ಪ್ರಾರಂಭವಾಗಿದೆ. ಇವತ್ತು ತಾವು ಒಂದು ಪಂಚಾಯತಿಯನ್ನು ಆಯ್ಕೆ ಮಾಡಿ. ಕರ್ನಾಟಕ ರಾಜ್ಯದಲ್ಲಿ ಯಾವುದೇ ಒಂದು ಪಂಚಾಯತಿ ಆಗಬಹುದು, ತಾವು ಹೋಗಿ ಕೇಳಿ 1987ನೇ ಇಸವಿಯಿಂದ ಈ ಗ್ರಾಮ ಪಂಚಾಯತಿಗೆ ಎಷ್ಟು ಹಣ ಕೊಟ್ಟಿದ್ದಾರೆ? ಎಷ್ಟು ಹಣ ಬಿಡುಗಡೆ ಮಾಡಿದ್ದಾರೆ. ಆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಯಾವುದಾದರೂ ಒಂದು ಹಳ್ಳಿಯಲ್ಲಿ ಶಾಶ್ವತವಾದ ಅಭಿವೃದ್ಧಿ ಕೆಲಸವನ್ನು ಮಾಡಲಿಕ್ಕೆ ಆ ಪಂಚಾಯತಿಯಲ್ಲಿ ಏನು ಕಾರ್ಯಕ್ರಮ ಮಾಡಿದ್ದಾರೆ ಎನ್ನುವ ಬಗ್ಗೆ ವರದಿ ಕೊಟ್ಟರೆ ಸಾಕು, ಇದು ನನ್ನ ಸವಾಲು. ಗ್ರಾಮ ಪಂಚಾಯಿತಿಯನ್ನು ಬಲಗೊಳಿಸಬೇಕು. ಅಭಿವೃದ್ಧಿಗೊಳಿಸಬೇಕೆಂದು ಹೇಳುವವರಲ್ಲಿ ನಾನೂ ಕೂಡ ಒಬ್ಬ. ಆದರೆ ಅವೆಲ್ಲಾ ಮಾಡುವುದಕ್ಕೆ ಇವರಲ್ಲಿ ಏನಾದರೂ ಕೇಡರ್‌ವೈಸ್ ಸಿಬ್ಬಂದಿಗಳಿದ್ದಾರೆಯೇ; ಯಾರ್ಯಾರು ಇದ್ದಾರೆ? ನೋಡಿದರೆ ಯಾರೂ ಇಲ್ಲ, ವೆಟರ್ನರಿ ವೈದ್ಯರು, ಸಹಕಾರ ಇಲಾಖೆಯಿಂದ, ಆರೋಗ್ಯ ಇಲಾಖೆಯಿಂದ ಲೀನ್ ಮೇಲೆ ಅಥವಾ ಡೆಪ್ಯುಟೇಷನ್ ಮೇಲೆ ಇಒ ಆಗಿ ಹಾಕುತ್ತಾರೆ, ಇದರಿಂದ ಏನು ಅಭಿವೃದ್ಧಿಯಾಗುತ್ತದೆ? ಗ್ರಾಮ ಅಭಿವೃದ್ಧಿಯ ಬಗ್ಗೆ ಕಾಳಜಿ ಇದ್ದರೆ, ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ಜಾರಿ ಮಾಡುವುದಕ್ಕೆ ಹಳ್ಳಿಯಲ್ಲಿ, ತಾಲ್ಲೂಕಿನಲ್ಲಿ, ಹೋಬಳಿಯಲ್ಲಿ ಇವರದೇ ಆದ ಏನಾದರೂ ಕಾರ್ಯಪಡೆ ಇದೆಯೋ? ಅಧಿಕಾರಿಗಳು ಇದ್ದಾರಾ? ನೀವು ಇಒ ಕಛೇರಿಯಲ್ಲಿ ಹೋಗಿ ನೋಡಿ; ಅಲ್ಲಿ ಸೂಪರ್‌ವೈಸರ್ ಇಲ್ಲ, ಅಕೌಂಟೆಂಟ್ ಇಲ್ಲ, ಪೀವನ್ ಇಲ್ಲ, ಗುಮಾಸ್ತ ಇಲ್ಲ, ಎಲ್ಲರನ್ನೂ ಬೇರೆ ಡಿಪಾರ್ಟ್‌ಮೆಂಟ್‌ನಿಂದ ಲೀನ್‌ಗೆ ತೆಗೆದುಕೊಳ್ಳುವುದು ಅಥವಾ ಡೆಪ್ಯುಟೇಷನ್ ತೆಗೆದುಕೊಳ್ಳುವುದು ನಡೆಯುತ್ತಾ ಇದೆ ಇವತ್ತು ಎಲ್ಲರೂ ಗ್ರಾಮೀಣಾಭಿವೃದ್ಧಿಯಾಗಬೇಕೆನ್ನುತ್ತಾರೆ. ಇಲ್ಲವೆಂದರೆ ಅಧಿಕಾರಿಗಳು ಡಿಎಲ್‌ಡಿಬಿ ಬೇಕೆನ್ನುತ್ತಾರೆ, ಏತಕ್ಕೆ ಗೊತ್ತಾ? ಇವೆರಡು ಆದರೆ ಒಳ್ಳೆಯ ಹುಲ್ಲುಗಾವಲು, ಇದು ಬೇರೆ ಎಲ್ಲೂ ಸಿಗುವುದಿಲ್ಲ. ನೀವು ಪ್ರಾಮಾಣಿಕವಾಗಿ ಗ್ರಾಮೀಣಾಭಿವೃದ್ಧಿಯನ್ನು ಮಾಡುವವರಾದರೆ ನಿಮ್ಮದೇ ಆದಂತಹ ರೆಕ್ರೂಟ್‌ಮೆಂಟ್ ಪಾಲಿಸಿ ನಿಮ್ಮದೇ ಆದ ಕೇಡರ್ ಪಾಲಿಸಿ ಮಾಡಿ ಈಗ ನಿಮ್ಮದೇ ಆದ ಕೇಡರ್ ಇಲ್ಲ, ನೀವು ಹೇಗೆ ಗ್ರಾಮೀಣಾಭಿವೃದ್ಧಿ ಮಾಡುತ್ತೀರಿ? ಯಾರಿಗೆ ಹೇಳಿ ನೀವು ಮಾಡುತ್ತೀರಿ? ಫಾರಸ್ಟ್ ಡಿಪಾರ್ಟ್‌ಮೆಂಟ್‌ನ ರೇಂಜರ್ ಅನ್ನು ತೆಗೆದುಕೊಂಡು ಹೋಗಿ ಇಒ ಎಂದು ಹಾಕಿ, ನೀವು ಏನು ಗ್ರಾಮೀಣಾಭಿವೃದ್ಧಿಯನ್ನು ಮಾಡುತ್ತೀರಿ? ಪಶುವೈದ್ಯ, ಅವನನ್ನು ಇಒ ಎಂದು ಹಾಕುತ್ತೀರಿ ಆತನಿಗೆ ಗ್ರಾಮೀಣಾಭಿವೃದ್ಧಿಯ ಬಗ್ಗೆ ಏನು ಗೊತ್ತಿದೆ. ಆತ ಏನು ಮಾಡುತ್ತಾನೆ? ಪಶ್ಚಿಮಬಂಗಾಳದಲ್ಲಿ ಗ್ರಾಮೀಣಾಭಿವೃದ್ಧಿ ನಿರ್ದೇಶನಾಲಯವೇ ಪ್ರತ್ಯೇಕವಾಗಿದೆ, ಅವರ ಕೇಡರ್ಸ್ ಬೇರೆ, ಅವರದ್ದು ಇಂಡಿಪೆಂಡೆಂಟ್ ರೆಕ್ರೂಟ್‌ಮೆಂಟ್, ಅದಕ್ಕೆ ಟ್ರೈನ್ಡ್ ಆಫೀಸರ್ಸ್ ಇದ್ದಾರೆ. ಆದರೆ ಕರ್ನಾಟಕ ರಾಜ್ಯದಲ್ಲಿ ಇದು ಇಲ್ಲ, ಅದರ ಪರಿಣಾಮ ಏನಾಗಿದೆ, ಗ್ರಾಮಪಂಚಾಯಿತಿಗೆ ಆ್ಯಕ್ಷನ್ ಪ್ಲಾನ್ ಮಾಡಿ ಎಂದು ಕೊಡುತ್ತೀರಿ, ಆ್ಯಕ್ಷನ್ ಪ್ಲಾನ್ ಮಾಡಿ ಎಂದು ನೀವು ಹಣ ಬಿಡುಗಡೆ ಮಾಡುತ್ತೀರಿ. ಯಾರಾದರೂ ಒಬ್ಬ ಅಧಿಕಾರಿ ಆ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳಿಗೆ ಏನು ಮೂಲಭೂತ ಅವಶ್ಯಕತೆ ಇದೆ, ಗ್ರಾಮೀಣ ನೈರ್ಮಲ್ಯದ ಪ್ರಶ್ನೆ ಏನು ಯಾವ ಹಳ್ಳಿಯಲ್ಲಿ ಏನು ಕಾರ್ಯಕ್ರಮ ಕೈಗೆತ್ತಿಕೊಳ್ಳಬೇಕೆಂದು ಸೂಪರ್‌ವಿಷನ್ ಮಾಡಿ ಆ್ಯಕ್ಷನ್ ಪ್ಲಾನ್ ತಯಾರು ಮಾಡುತ್ತಿದ್ದಾರಾ ಎನ್ನುವುದನ್ನು ಇವರು ಒಂದೇ ಒಂದು ಖಾತರಿ ಮಾಡಿಬಿಡಲಿ ನಾನು ಸವಾಲ್ ಹಾಕುತ್ತೇನೆ. ಅವರು ಹೇಗೆ ಆ್ಯಕ್ಷನ್ ಪ್ಲಾನ್ ಮಾಡುವುದು? ನಮಗೆಲ್ಲಾ ಗೊತ್ತಿದೆ,

ಬಹಳ ನೋವಿನಿಂದ ಹೇಳಬೇಕಾಗುತ್ತದೆ. ಸುಮಾರು ಕಡೆ, ಪಂಚಾಯಿತಿಯಲ್ಲಿ ಸದಸ್ಯರೆಲ್ಲಾ ಒಟ್ಟಿಗೆ ಕುಳಿತು ಚರ್ಚೆ ಮಾಡಿ ಆ್ಯಕ್ಷನ್ ಪ್ಲಾನ್ ಮಾಡುವುದಿಲ್ಲ, ಹಣ ಬಂದಿದೆ ಎಂದಾಕ್ಷಣ ನನ್ನಭಾಗ ನನಗೆ ಕೊಟ್ಟು ಬಿಡಿ ಎನ್ನುತ್ತಾರೆ. ಪ್ರತಿಯೊಬ್ಬ ಪಂಚಾಯಿತಿಯ ಸದಸ್ಯನೂ ನನ್ನ ಕ್ಷೇತ್ರದ ಪಾಲನ್ನು ನನಗೆ ಕೊಟ್ಟುಬಿಡು ರೆಸಲ್ಯೂಷನ್ ಬೇಕಾಗಿಲ್ಲ, ಕುಳಿತು ಮಿಟಿಂಗ್ ಮಾಡಬೇಕಾಗಿಲ್ಲ, ಸೆಕ್ರೆಟರಿ ಪುಸ್ತಕ ತೆಗೆದುಕೊಂಡು ಹೋದರೆ ಸಹಿ ಮಾಡಿ ಕಳುಹಿಸಿ ಬಿಡುತ್ತಾರೆ, ನನ್ನ ಭಾಗ ಕೊಟ್ಟುಬಿಡು ಎಂದು ಒಬೊಬ್ಬ ಸದಸ್ಯನಿಗೆ ಇಷ್ಟಿಷ್ಟು ಎಂದು ಭಾಗ ಇಡುತ್ತಾರೆಯೇ ಹೊರತು, ಅವರು ಸಾಮೂಹಿಕವಾಗಿ ಕುಳಿತು ಗ್ರಾಮಗಳನ್ನು ಅಭಿವೃದ್ಧಿ ಮಾಡತಕ್ಕಂಥ ಆ್ಯಕ್ಷನ್ ಪ್ಲಾನ್ ಮಾಡುವುದಿಲ್ಲ. ಇದನ್ನು ಬೇಕಾದರೆ ನೀವು ಪರೀಕ್ಷೆ ಮಾಡಿ ನೋಡಿಬಿಡಿ, ಅಥವಾ ನೀವು ತನಿಖೆ ಮಾಡಿ, ಎಲ್ಲಿ ಇಡೀ ಪಂಚಾಯಿತಿಯ ಸದಸ್ಯರು ಒಟ್ಟಿಗೆ ಸೇರಿಕೊಂಡು ಆ್ಯಕ್ಷನ್ ಪ್ಲಾನ್ ಮಾಡಿ, ಇಂತಹ ಊರಿಗೆ ಇಂತಹದ್ದು ಅವಶ್ಯಕತೆ ಇದೆ, ಈ ಒಂದು ಪಂಚಾಯಿತಿಗೆ ಬಂದಿರುವ ಹಣವನ್ನು ಈ ಊರಿಗೆ ಬಳಸೋಣವೆಂದು ತೀರ್ಮಾನ ಮಾಡಿದ್ದಾರೆ ತೋರಿಸಿ; ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟರೆ, ಹತ್ತು ಜನ ಸದಸ್ಯರು ಇದ್ದರೆ ಒಬ್ಬೊಬ್ಬರಿಗೆ ಹತ್ತತ್ತು ಸಾವಿರ ಭಾಗ, ಅವರ ಇಷ್ಟ, ಯಾರು ಮಧ್ಯೆ ಕೆಲಸ ಮಾಡಿದ್ದಾರೋ ಇಲ್ಲವೋ ಎಂದು ಚೆಕ್ ಅಪ್ ಮಾಡುತ್ತಾರೆ? ಇಂಜಿನಿಯರ್, ಅವರ್‍ಯಾರು, ಟಿಪಿಎಸ್ ಇಂಜಿನಿಯರ್, ನಿಮಗೆ ಸ್ವಂತ ಇಂಜಿನಿಯರ್ ಇಲ್ಲ, ಪಿಡಬ್ಲ್ಯೂಡಿಯಿಂದ ಡೆಪ್ಯುಟೇಷನ್ ಆಗಬೇಕು, ಎಂಐನಿಂದ ಡೆಪ್ಯುಟೇಷನ್ ಆಗಬೇಕು ಅಥವಾ ಜೆಡ್‌ಪಿಯಿಂದ ಡೆಪ್ಯುಟೇಷನ್ ಆಗಬೇಕು, ನಿಮಗೆಲ್ಲಿದ್ದಾರೆ ಇಂಜಿನಿಯರ್‌ಗಳು? ಅವನು ಪಿಡಬ್ಲ್ಯೂಡಿ ಕೆಲಸವನ್ನು ಮಾಡಬೇಕು, ಇಲ್ಲಿಯೂ ಮಾಡಬೇಕು, ಅವನು ಇಲ್ಲೇ ಕಛೇರಿಯಲ್ಲಿ ಕುಳಿತುಕೊಂಡು ಬಿಲ್ ಬರೆದುಬಿಡುತ್ತಾನೆ. ಕೆಲಸವಾಗಿದೆಯೇ ಇಲ್ಲವೇ ಎಂದು ನೋಡುವುದಿಲ್ಲ. ಹಣ ಯಾವರೀತಿಯಾಗಿ ಉಪಯೋಗವಾಗುತ್ತಿದೆ? ಹಣದಿಂದ ಯಾವ ರೀತಿಯಾಗಿ ಇವತ್ತು ಅಭಿವೃದ್ಧಿ ಮಾಡಿದ್ದೀರಿ? ಒಂದು ಉದಾಹರಣೆ ಹೇಳುವುದಾದರೆ ನಿರ್ಮಲ ಗ್ರಾಮೀಣ ಯೋಜನೆ, ನಿಜವಾಗಿಯೂ ಇದೊಂದು ಬಹಳ ಒಳ್ಳೆಯ ಕಾರ್ಯಕ್ರಮ. ಆದರೆ ಅನುಭವ ಏನು ಇವತ್ತು? ಎಷ್ಟು ಸಾವಿರ ಕೋಟಿ ರೂಪಾಯಿಗಳನ್ನು ಗ್ರಾಮೀಣ ನಿರ್ಮಲ ಯೋಜನೆಗೆ ಖರ್ಚು ಮಾಡುತ್ತಿದ್ದೇವೆ? ಇವತ್ತು ಹೈಟೆಕ್, ಇನ್‌ಫಾರ್ಮೇಷನ್ ಟೆಕ್ನಾಲಜಿ, ಕಂಪ್ಯೂಟರ್, ಆಕಾಶ, ನಕ್ಷತ್ರಗಳಿಗೆ ಈ ಜಗತ್ತು ಓಡಾಡುತ್ತಿದೆ, ನಮ್ಮ ಹಳ್ಳಿಗಾಡಿನ ಹೆಣ್ಣುಮಕ್ಕಳು ಶೌಚಾಲಯಕ್ಕೆ ಹೋಗಲು ಸಂಜೆಯವರೆಗೂ ಕಾಯಬೇಕು. ಇಂತಹ ಅನಾಗರಿಕ ವ್ಯವಸ್ಥೆಯನ್ನು ತಪ್ಪಿಸುವುದಕ್ಕೆ ಐವತ್ತೆಂಟು ವರ್ಷಗಳಿಂದ ಈ ದೇಶದಲ್ಲಿ ಏನೂ ಕಾರ್ಯಕ್ರಮ ಆಗಲಿಲ್ಲ, ಅದನ್ನು ಮಾಡುತ್ತೇವೆಂದು ನಿರ್ಮಲ ಗ್ರಾಮೀಣ ಯೋಜನೆಯನ್ನು ತಂದಿರಿ, ನಾನು ಇವತ್ತು ಗ್ರಾಮೀಣ ಇಲಾಖೆಯ ಮಂತ್ರಿ ಹಾಗೂ ಅಧಿಕಾರಿಗಳನ್ನು ಕೇಳುತ್ತಿದ್ದೇನೆ, ಯಾವ ಗ್ರಾಮ ಪಂಚಾಯಿತಿಯಲ್ಲಿ ಆ ಗ್ರಾಮೀಣ ನಿರ್ಮಲ ಯೋಜನೆಯಡಿಯಲ್ಲಿ ಸುಸಜ್ಜಿತವಾದ, ಸುವ್ಯವಸ್ಥಿತವಾದ ಶೌಚಾಲಯಗಳನ್ನು ನಾವು ನಿರ್ಮಾಣ ಮಾಡಿದ್ದೇವೆ, ಆ ಶೌಚಾಲಯಗಳಿಗೆ ನೀರು ಕೊಡುತ್ತಿದ್ದೇವೆಂದು ಪ್ರಾಮಾಣಿಕವಾಗಿ ಹೇಳಿ. ಆಶ್ರಯ ಮನೆಗಳನ್ನು ಕಟ್ಟಬೇಕಾದರೆ ನೀವು ಲ್ಯಾವೆಟ್ರಿ ಕಟ್ಟಬೇಕೆಂದು ಇವರು ಒಂದು ಕಂಡೀಷನ್ ಹಾಕುತ್ತಾರೆ, ಇವರೇನು ಕೊಡುತ್ತಾರೆ ಗೊತ್ತೆ? ಒಂದು ಬೇಸಿನ್ ಮತ್ತು ಎರಡು ಮೂಟೆ ಸಿಮೆಂಟ್ ಕೊಡುತ್ತಾರೆ. ಎರಡು ಮೂಟೆ ಸಿಮೆಂಟ್ ಮತ್ತು ಒಂದು ಬೇಸಿನ್‌ನಲ್ಲಿ ಲ್ಯಾವೆಟ್ರಿ ಕಟ್ಟಬೇಕಂತೆ; ಇದನ್ನು ಯಾರು ಪ್ಲಾನ್ ಮಾಡುವುದು? ಐಎಎಸ್ ಅಧಿಕಾರಿಗಳು;

ಐಎಎಸ್ ಅಧಿಕಾರಿಗಳ ಮನೆಯಲ್ಲಿ ಬಾತ್‌ರೂಂ ಹೇಗಿದೆ ಕೇಳಿ ನೀವು? ನಾನು ರಿಟೈರ್ಡ್ ಆದಂತಹ ಆಫೀಸರ್ ಮನೆಗೆ ಹೋಗಿದ್ದೆ, ಅವರು ಈಗ ಇಲ್ಲ, ಸತ್ತುಹೋಗಿದ್ದಾರೆ, ಅವರ ಹೆಸರನ್ನು ಹೇಳುವುದು ಬೇಡ, ಅದು ಮಾಸ್ಟರ್ ಬಾತ್‌ರೂಂ ಅಂತೆ, ನಾನು ಹೆಸರೇ ಕೇಳಿರಲಿಲ್ಲ, ಐಎಎಸ್ ಆಫೀಸರ್ ಮನೆ ಮಾಸ್ಟರ್ ಬಾತ್‌ರೂಂ ಖರ್ಚು ಹತ್ತು ಲಕ್ಷರೂಪಾಯಿಗಳು! ಅವರು ಸ್ಕೀಂ ಮಾಡುವ ನಿರ್ಮಲ ಗ್ರಾಮೀಣ ಯೋಜನೆಗೆ ಒಂದು ಬೇಸಿನ್ ಮತ್ತು ಎರಡು ಮೂಟೆ ಸಿಮೆಂಟ್ ಕೊಡುವುದು ಅವನು ಅದರಲ್ಲಿ ಲ್ಯಾವೆಟ್ರಿ ಕಟ್ಟಿಕೊಳ್ಳುವುದಂತೆ, ಇದೇನು ವ್ಯವಸ್ಥೆ? ಇದೇನಾ ಗ್ರಾಮೀಣಾಭಿವೃದ್ಧಿ? ಇದೇನಾ ಗ್ರಾಮೀಣ ಜನರಿಗೆ ಕೊಡುತ್ತಿರುವ ಕೊಡುಗೆ? ಎಷ್ಟು ಸಾವಿರ ಕೋಟಿ ರೂಪಾಯಿಗಳನ್ನು ನಿರ್ಮಲ ಗ್ರಾಮೀಣ ಯೋಜನೆಗೆ ಮತ್ತು ನಿರ್ಮಲ ಕರ್ನಾಟಕಕ್ಕೆ ಖರ್ಚು ಮಾಡಿದ್ದೀರಿ? ಅದರ ಫಲಿತಾಂಶವೇನು? ಏನಾಗಿದೆ? ಏನಾದರೂ ಕಾರ್ಯಕ್ರಮ ಜಾರಿಯಾಗಿದೆಯಾ ಹೇಳಿ? ಅದೇ ರೀತಿಯಾಗಿ ನೀವು ಇವತ್ತು ಹಲವಾರು ಯೋಜನೆಗಳನ್ನು ಜಾರಿಗೆ ತಂದಿದ್ದೀರಿ; ಗ್ರಾಮಪಂಚಾಯಿತಿ ವ್ಯಾಪ್ತಿಗೆ ಕೊಟ್ಟಿದ್ದೀರಿ, ಸಂತೋಷ, ನಾವು ಬೇಡವೆಂದು ಹೇಳಲಿಲ್ಲ, ನಾವು ಅದರ ಪರವಾಗಿರತಕ್ಕಂಥವರು. ಆದರೆ ಇವತ್ತು ಏನಾಗಿದೆ? ಯಾವ ಯೋಜನೆ ಜಾರಿಯಾಗಿದೆ ಎಂದು ಒಂದೇ ಒಂದು ಸಣ್ಣ ಉದಾಹರಣೆ ಹೇಳಿ ನೋಡೋಣ ಗ್ರಾಮಪಂಚಾಯಿತಿ ಆ್ಯಕ್ಟ್‌ನಲ್ಲಿ ನೀವೇನು ಹೇಳಿದಿರಿ? ಬಿಪಿಎಲ್ ಕೆಳಗಡೆ ಇರುವವರನ್ನು ಗ್ರಾಮಪಂಚಾಯಿತಿ ಕಛೇರಿಯಲ್ಲಿ ಸರ್ವೆ ಮಾಡಿ ಪಟ್ಟಿ ಹಾಕಬೇಕು, ಯಾವುದೇ ಕಾಮಗಾರಿಗಳು ಬಂದಂತಹ ಸಂದರ್ಭದಲ್ಲಿ ಆ ಬಿಪಿಎಲ್ ಪಟ್ಟಿಯಲ್ಲಿ ಯಾರ ಹೆಸರಿರುತ್ತದೆಯೋ ಅವರಿಗೆ ಕೆಲಸ ಕೊಡಬೇಕೆನ್ನುವ ಕಾನೂನು ನೀವು ಮಾಡಿದಿರಿ. ಎಷ್ಟು ಪಂಚಾಯಿತಿಗಳು ಕರ್ನಾಟಕ ರಾಜ್ಯದಲ್ಲಿ ಆ ಬಿಪಿಎಲ್ ಲಿಸ್ಟ್ ಅನ್ನು ತಯಾರು ಮಾಡಿವೆ ಎಂದು ಇವರು ಹೇಳಿಬಿಡಲಿ. ಕರೆಕ್ಟಾಗಿ ವೈಜ್ಞಾನಿಕವಾಗಿ, ಬಿಪಿಎಲ್ ಲಿಸ್ಟ್ ಇಟ್ಟುಕೊಂಡು ಅದರ ಪ್ರಕಾರ ಕೆಲಸ ಮಾಡುತ್ತಿದ್ದಾರೆ, ಜನಕ್ಕೆ ಕೆಲಸ ಕೊಡುತ್ತಿದ್ದಾರೆ ಎಂಬುದನ್ನು ಇವತ್ತು ಹೇಳಲಿ, ಇವರ ಹತ್ತಿರ ಏನಾದರೂ ದಾಖಲೆ ಇದ್ದರೆ ಹೇಳಲಿ, ಏನೂ ಇಲ್ಲ. ಮತ್ತೆ ನೀವು ಫಲಾನುಭವಿಗಳನ್ನು ಬಿಪಿಎಲ್ ಲಿಸ್ಟ್‌ನಲ್ಲಿ ಆಯ್ಕೆ ಮಾಡಬೇಕೆನ್ನುತ್ತೀರಿ, ಬಿಪಿಎಲ್ ಲಿಸ್ಟ್‌ನಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಬೇಕೆಂದು ಹೇಳುವಂತಹ ನೀವು ಯಾರ್‍ಯಾರನ್ನು ಬಿಪಿಎಲ್ ಲಿಸ್ಟ್‌ಗೆ ಸೇರಿಸಿದ್ದೀರಿ, ಬಿಪಿಎಲ್ ಲಿಸ್ಟ್‌ಗೆ ಸೇರಬೇಕಾದರೆ ಕ್ರೈಟೀರಿಯಾ ಏನು? ಯಾವ ಆಧಾರದ ಮೇಲೆ ಅವರನ್ನು ಬಿಪಿಎಲ್ ಲಿಸ್ಟ್‌ಗೆ ಸೇರಿಸುತ್ತೀರಿ? ಬಿಲೋ ಪಾವರ್ಟಿ ಲೈನ್ ಎಂದರೆ ಏನು ಡೆಫನೇಷನ್? ಪಾವರ್ಟಿ ಎಂದರೆ ಏನು? ನೀವು ಲೆಕ್ಕ ಹಾಕಿದ್ದೀರಾ? What is meant by poverty? What is meant by below poverty? Below poverty is totally different from that of poverty. You asked only for BPL. What about poverty? According to the Planning Commission Report, ನಾವು ಇವತ್ತು ಇಂಡಿಯಾ ದೇಶದಲ್ಲಿ ಯಾವ ಪರಿಸ್ಥಿತಿ ಇದೆಯೆಂಬುದನ್ನು ನೋಡಬೇಕಾಗಿದೆ. ವರ್ಲ್ಡ್ ಬ್ಯಾಂಕ್ ರಿಪೋರ್ಟ್‌ನಲ್ಲಿ ಹೇಳುತ್ತಾರೆ, 1/3rd of the total world population's one day earning is only one dollar. It is not my report. It is a World Bank Report. 1/3rd of the ಟೋಟಲ್ ವರ್ಲ್ಡ್ ಪಾಪ್ಯುಲೇಷನ್‌ನಲ್ಲಿ ಒಬ್ಬ ಮನುಷ್ಯನ ಒಂದು ದಿನದ ಸಂಪಾದನೆ ಒಂದು ಡಾಲರ್. ಅದರಲ್ಲಿ ಆ 1/3 ಪಾಪ್ಯುಲೇಷನ್‌ನಲ್ಲಿ 50 ಪರ್ಸೆಂಟ್ ಇನ್ ಇಂಡಿಯಾ. ಇಂಡಿಯಾದಲ್ಲಿರತಕ್ಕಂಥವರ ನೂರಕ್ಕೆ

38 ಜನರ ದಿನದ ಸಂಪಾದನೆ ಆ ಲೆಕ್ಕದ ಪ್ರಕಾರ 16 ಪೈಸೆ. ಹೇಗೆ ಎಂದು ನೀವು ಆಶ್ಚರ್ಯಪಡಬಹುದು. ಇದು ಅಸಾಧ್ಯವೆಂದು ನೀವು ಹೇಳುತ್ತೀರಿ. ನಾನು ಒಂದೇ ಒಂದು ಅನಾಲಿಸಿಸ್ ನಿಮಗೆ ಹೇಳುತ್ತೇನೆ. ಒಂದು ಕೃಷಿ ಕಾರ್ಮಿಕರ ಕುಟುಂಬ ಇದೆ ಅದರಲ್ಲಿ ಒಬ್ಬನು ಕೂಲಿಯನ್ನು ಮಾಡುತ್ತಾನೆ. ಹೆಂಡತಿ ಮಕ್ಕಳನ್ನು ಸಾಕಬೇಕು. ಅವನಿಗೆ ಇವತ್ತು ಹಳ್ಳಿಯಲ್ಲಿ ಆವ್ರೇಜ್ ಆಗಿ ಕೂಲಿ ಕೊಡತಕ್ಕದ್ದು ಸಾಮಾನ್ಯ ಸಂದರ್ಭದಲ್ಲಿ 25 ರಿಂದ 30 ರೂಪಾಯಿಗಳನ್ನು ಕೊಡುತ್ತಾರೆ. ಆ 25–30 ರೂಪಾಯಿಗಳಾದರೂ 360 ದಿವಸವೂ ಕೆಲಸ ಸಿಗುವುದಿಲ್ಲ. ಅವನಿಗೆ ಮ್ಯಾಕ್ಸಿಮಮ್ ಸಿಗತಕ್ಕಂಥದ್ದು ಒಂದು ವರ್ಷದಲ್ಲಿ 50 ರಿಂದ 60 ದಿವಸ ಮಾತ್ರ. 50 ರಿಂದ 60 ದಿವಸ ಕೆಲಸ ಮಾಡಿದರೆ 30 ರೂಪಾಯಿಯನ್ನು ಡಿವೈಡ್ ಮಾಡಿ 360 ದಿವಸಕ್ಕೆ. ಆಗ ನಿಮಗೆ ಎಷ್ಟು ಎಂದು ಕರೆಕ್ಟ್ ಆಗಿ ಗೊತ್ತಾಗುತ್ತದೆ. ಎಷ್ಟು ಅವನ ಆದಾಯ ಎಂಬುದು ಗೊತ್ತಾಗುತ್ತದೆ. ಇವತ್ತು ಆ ಲೆಕ್ಕಾಚಾರವನ್ನು ಯಾರೂ ಮಾಡುವುದಿಲ್ಲ. ಆ ಕ್ಯಾಲ್‌ಕ್ಯುಲೇಷನ್‌ನಲ್ಲಿ ಪಾವರ್ಟಿ, ಬಿಲೋ ಪಾವರ್ಟಿಯನ್ನು ಲೆಕ್ಕ ಹಾಕುವುದಿಲ್ಲ. 15 ಪೈಸೆ ಸಂಪಾದನೆ ಮಾಡಿ ಗ್ರಾಮೀಣ ಜನರ ಆರ್ಥಿಕ ಶಕ್ತಿಯನ್ನು ಕೊಂಡುಕೊಳ್ಳತಕ್ಕ ಶಕ್ತಿಯನ್ನು ಹೆಚ್ಚು ಮಾಡತಕ್ಕ ಕಾರ್ಯಕ್ರಮವನ್ನು ಈ ಪುಸ್ತಕದಲ್ಲಿ ಕೊಟ್ಟಿದ್ದಾರೆ. ಏನು ವಿಪರ್ಯಾಸ ಇದು. Then what is meant by poverty? ಪಾವರ್ಟಿ ಅಂದರೆ ಏನು? ಪಾವರ್ಟಿ ಎಂದರೆ A man who is struggling to get a two square meal is a poor man. That is the poverty. Below poverty means a man who could not get even two square meal a day is BPL ನೀವು ಯಾವ ಲೆಕ್ಕದಲ್ಲಿ ಲೆಕ್ಕವನ್ನು ಹಾಕಿದ್ದೀರಿ? ಯಾವ ಆಧಾರದ ಮೇಲೆ ನೀವು ಅದನ್ನು ಹಂಚಿಕೆ ಮಾಡಿದ್ದೀರಿ? ಇದು ಒಂದು ಅಂಶ. ಇನ್ನೊಂದು ಬಹಳ ಮುಖ್ಯವಾದ ಅಂಶವೆಂದರೆ ಕುಡಿಯುವ ನೀರು ಸರಬರಾಜು. ಬಹುಶಃ ಇದಕ್ಕೆ ಖರ್ಚು ಮಾಡಿದಷ್ಟು ಹಣ ಕರ್ನಾಟಕ ರಾಜ್ಯದಲ್ಲಿ ಬೇರೆ ಯಾವುದಕ್ಕೂ ಖರ್ಚು ಮಾಡಿಲ್ಲ. ಆದರೆ ಇವತ್ತಿಗೂ ಕೂಡ ಯಾವುದಾದರೂ ಒಂದು ಹಳ್ಳಿಯಲ್ಲಿ ನಾವು ಕುಡಿಯಲಿಕ್ಕೆ ಯೋಗ್ಯವಾದ ನೀರನ್ನು ಪ್ರತಿಯೊಂದು ಕುಟುಂಬಕ್ಕೂ ನಾನು ಎಷ್ಟು ಎಂದರೆ ಬೇಕಾದಷ್ಟು ಎಂದು ಇಲ್ಲ. ಕನಿಷ್ಠವಾಗಿ ನೀವು ಸ್ವಚ್ಛವಾದ ನೀರನ್ನು ಇವತ್ತು ಗ್ರಾಮೀಣ ಪ್ರದೇಶದಲ್ಲಿ ಕೊಡುವುದಕ್ಕೆ ಸಾಧ್ಯವಾಗಿದೆಯೇ ಎಂಬುದನ್ನು ನಾವೇನು ಇವತ್ತು ಕೊಡುತ್ತೇವೆ, ಕುಡಿಯಲಿಕ್ಕೆ ನೀರು ಕೊಡಲಿಕ್ಕೆ ನಮಗೆ ಯೋಗ್ಯತೆ ಇಲ್ಲ. ಎರಡು ಹೊತ್ತು ಊಟ ಮಾಡಲಿಕ್ಕೆ ಅವರಿಗೆ ಶಕ್ತಿ ತುಂಬಲಿಕ್ಕೆ ನಮಗೆ ಯೋಗ್ಯತೆ ಇಲ್ಲ. ನಾವು ಗ್ರಾಮೀಣಾಭಿವೃದ್ಧಿ ಬಗ್ಗೆ ಮಾತನಾಡುತ್ತಿದ್ದೇವೆ. ಗ್ರಾಮೀಣಾಭಿವೃದ್ಧಿಗಾಗಿ ಎಷ್ಟು ಹಣ ಕೊಟ್ಟಿದ್ದೀರಿ ಎಂಬುದನ್ನು ನೀವು ಹೇಳಿ. ಅದರ ಜೊತೆಗೆ ಇವತ್ತು ಗ್ರಾಮೀಣ ನೈರ್ಮಲ್ಯದ ಇನ್ನೊಂದು ಮುಖ ಇದೆ. ಆ ಗ್ರಾಮದಲ್ಲಿ ಕೊಳಚೆ ನೀರು ಹೋಗಲಿಕ್ಕೆ ಏನು ದಾರಿ ಇದೆ? ಚರಂಡಿಯನ್ನು ಮಾಡಿದ್ದೀರಾ? ಬಿಚ್ಚಿಂಗ್ ಮಾಡುತ್ತೀರಾ? ಮಾನ್ಯ ಅಧ್ಯಕ್ಷರೆ, ಬನ್ನಿ ಕೆಲವು ಪಂಚಾಯಿತಿ. ಗೆ. ಅವರು ಡ್ರೈನ್ ಅನ್ನು ಮಾಡಿದ್ದಾರೆ. ಆ ಡ್ರೈನ್‌ನಲ್ಲೇನಾದರೂ ನೀರು ಹೊರಟುಹೋದರೆ ನೀವು ಹೇಳಿದ್ದಕ್ಕೆ ನಾನು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇನೆ. ಆ ನೀರು ಹೋಗುವುದರ ಬದಲು ಅದಿನ್ನೂ ತುಂಬಿಕೊಳ್ಳುತ್ತದೆ. ಅಲ್ಲೇ ಸೊಳ್ಳೆ. ಅಲ್ಲೇ ಎಲ್ಲಾ ವ್ಯವಸ್ಥೆ. ಅಲ್ಲೇ ಮಲೇರಿಯಾ. ಅಲ್ಲೇ ಕುಡಿಯುವ ನೀರಿನ ಪಂಪು. ಅಲ್ಲೇ ಬಟ್ಟೆ ಒಗೆಯುವುದು. ಎಲ್ಲಾ ಅಲ್ಲೇ. ಹೇಗೆ ಮಾಡಿದ್ದೀರಿ? ಆ್ಯಕ್ಷನ್ ಪ್ಲಾನನ್ನು ಮಾಡುತ್ತೀರಿ. ಮತ್ತೆ ಇವತ್ತು ಕೆಲವು ಹಳ್ಳಿಗಳಲ್ಲಿ ಮಳೆ ಬಂದರೆ ಬರಿಗಾಲಿನಲ್ಲಿ ಚಪ್ಪಲಿ ಹಾಕಿಕೊಂಡು ನಡೆಯಲಿಕ್ಕೆ ಸಾಧ್ಯವಿಲ್ಲ;

ಎಲ್ಲಾ ಮಣ್ಣು ಕಾಲಿಗೆ ಅಂಟಿಕೊಂಡುಬಿಡುತ್ತದೆ. ಬರೀ ಗಾಲಿನಲ್ಲಿ ನಡೆಯುವಾಗ ಮಣ್ಣು ಒಂದೊಂದು ಕೆ.ಜಿ. ಬರುತ್ತದೆ. ಏನು ಮಾಡಿದ್ದೀರಿ ಸ್ವಾಮಿ? ಲೆಕ್ಕ ಹಾಕಿ. 1987ನೇ ಇಸವಿಯಿಂದ ನೀವು ಗ್ರಾಮೀಣಾಭಿವೃದ್ಧಿಗೆ ಹಣವನ್ನು ತೆಗೆದಿಟ್ಟಿದ್ದೀರಿ. ಯಾವ ರೀತಿಯಲ್ಲಿ ಅದನ್ನು ಅಭಿವೃದ್ಧಿ ಮಾಡಿದ್ದೀರಿ? ಯಾವ ಹಳ್ಳಿಯಲ್ಲಾದರೂ ಅಟ್‌ಲೀಸ್ಟ್ ಒಂದೊಂದು ಗ್ರಾಮಪಂಚಾಯಿತಿಯಲ್ಲಿ ಒಂದೊಂದು ಗ್ರಾಮದಲ್ಲಿ ಮುಖ್ಯವಾದ ಒಂದು ದಾರಿ ಇರುತ್ತದೆ ವಿಲೇಜ್‌ಗೆಲ್ಲಾ ಒಂದು ದಾರಿ ಇರುತ್ತದೆ. ಒಂದೊಂದು ಬಜಾರ್‌ಗಾದರೂ ನೀವು ಕಾಂಕ್ರೀಟನ್ನು ಹಾಕಿಸಿ. ಒಂದೊಂದು ಬಜಾರ್‌ಗಾದರೂ ಕಾಂಕ್ರೀಟನ್ನು ಹಾಕಿಸತಕ್ಕಂಥ ವ್ಯವಸ್ಥೆಯಾಗಿದೆಯೇ? ಯಾವುದಾದರೂ ಒಂದು ಪಂಚಾಯಿತಿಯ ಹೆಸರನ್ನು ಹೇಳಿಬಿಡಲಿ. ಆ ರೀತಿ ಮಾಡಬೇಕೆಂದು ಹೇಳಿ ಕಡ್ಡಾಯವಾಗಿ ಕೆಲಸ ಮಾಡಬೇಕೆಂದು ಹೇಳಿ ಗ್ರಾಮಪಂಚಾಯಿತಿಗಳಿಗೆ ಏನಾದರೂ ಮಾರ್ಗದರ್ಶನ, ಕಾನೂನು ಅದಕ್ಕೆ ಸೂಪರ್‌ವಿಷನ್ ಅನ್ನು ಏನಾದರೂ ಮಾಡಿದ್ದೀರಾ? ಹೇಳಿ. ನಾನು ಎಲ್ಲಾ ಬಜಾರ್‌ಗಳಿಗೂ ಕಾಂಕ್ರೀಟ್ ಹಾಕಿ ಎಂದು ಹೇಳುತ್ತಿಲ್ಲ. ಒಂದೊಂದು ಊರಿಗೆ ಅದರಲ್ಲಿ ಜಾಸ್ತಿ ಎಂದರೆ ಒಂದು ಊರಿನಲ್ಲಿ ಒಂದು ಬಜಾರು ನೂರು ಮೀಟರ್ ಇರುತ್ತದೆ. ಐವತ್ತು ಮೀಟರ್ ಇರುತ್ತದೆ, ಅಥವಾ 150 ಮೀಟರ್ ಇರುತ್ತದೆ. ಆ ರೀತಿ 100–150 ಮೀಟರ್ ಕಾಂಕ್ರೀಟ್ ರಸ್ತೆಯನ್ನು ಹಾಕಿಸಿದರೆ ಕನಿಷ್ಠ ಮಳೆ ಬಂದಂಥ ಸಂದರ್ಭದಲ್ಲಿ ಜಾರಿಬಿದ್ದು ಕೈಕಾಲು ಮುರಿದುಕೊಳ್ಳುವುದಾದರೂ ತಪ್ಪುತ್ತದೆ. ಅಷ್ಟಾದರೂ ನಾವು ಮಾಡಿದ್ದೇವಾ? ಹಾಗಾದರೆ ಇನ್ನೇನು ಗ್ರಾಮೀಣಾಭಿವೃದ್ಧಿ ಎಂದು ಹೇಳಿದರೆ ಅರ್ಥ? ಪೇಪರ್‌ನಲ್ಲಿ ಗ್ರಾಮೀಣಾಭಿವೃದ್ಧಿಯಾ? ಭಾಷಣದಲ್ಲಿ ಗ್ರಾಮೀಣಾಭಿವೃದ್ಧಿಯಾ? ಗಾಂಧಿ ತತ್ವವನ್ನು ಹೇಳುವುದಕ್ಕೆ ಗ್ರಾಮೀಣಾಭಿವೃದ್ಧಿನಾ? ಗ್ರಾಮೀಣಾಭಿವೃದ್ಧಿ ಎಂದರೆ ಏನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಸಾರಿಗೆ ಮತ್ತು ಜಲಸಂಪನ್ಮೂಲ ಸಚಿವರು): ಮಾನ್ಯ ಅಧ್ಯಕ್ಷರೆ, ಗ್ರಾಮೀಣಾಭಿವೃದ್ಧಿ ಆಗಬೇಕೆಂದು ಹೇಳಿ ಅಧಿಕಾರದ ವಿಕೇಂದ್ರೀಕರಣವನ್ನು ಮಾಡಿದೆವು. ತಾವು ಹೇಳಿದಂತೆ, ತಮಗೆ ಗೊತ್ತಿರುವಂತೆ ಪಂಚಾಯಿತಿಗಳಿಗೆ ಇರತಕ್ಕ ಅಧಿಕಾರವು ಸರ್ಕಾರಕ್ಕೂ ಇಲ್ಲ. ನಿಮಗೂ ಇಲ್ಲ. ಜಿಲ್ಲಾ ಪಂಚಾಯಿತಿಗೆ ಕೊಟ್ಟಂಥ ಅಧಿಕಾರವನ್ನು ಕೂಡ ನಾವು ಮೊಟಕುಗೊಳಿಸುವುದಕ್ಕಾಗುವುದಿಲ್ಲ. ಅವರೇ ಸಂಪೂರ್ಣವಾಗಿ ತಮ್ಮ ಆಡಳಿತವನ್ನು ನಡೆಸಬೇಕು ಮತ್ತು ಅಭಿವೃದ್ಧಿ ಕೆಲಸವನ್ನೂ ಮಾಡಬೇಕು. ಈ ಅಭಿವೃದ್ಧಿ ಕೆಲಸವಾಗಲಿಲ್ಲವೆಂದರೆ, ಏನು ಅಲ್ಲಿ ಚುನಾಯಿತ ಸದಸ್ಯರು ಅಥವಾ ಅಧ್ಯಕ್ಷರ ತಪ್ಪೋ ಅಥವಾ ಸರ್ಕಾರದ ತಪ್ಪೋ ಎನ್ನುವುದು ಒಂದು ಎರಡನೆಯದು ಜಿಲ್ಲಾ ಮಟ್ಟದಲ್ಲೂ ಕೂಡ ತಮಗೆ ಗೊತ್ತಿರುವಂತೆ ಅನೇಕ ಕಡೆ ಎಲ್ಲಿ ಆಸಕ್ತಿಯನ್ನು ವಹಿಸುತ್ತಾರೋ ಅಲ್ಲಿ ಸ್ವಲ್ಪ ಒಳ್ಳೆಯ ಕೆಲಸಗಳಾಗುತ್ತವೆ. ಆಸಕ್ತಿ ವಹಿಸದೇ ಇರತಕ್ಕ ಕಡೆ ಸ್ವಲ್ಪ ತಾಪತ್ರಯಗಳಾಗುತ್ತವೆ. ನಾನು ಇದನ್ನು ಒಪ್ಪಿಕೊಳ್ಳುತ್ತೇನೆ. ಕೆಲವು ಕಡೆ ಅಧಿಕಾರಿಗಳು ಮಿಸ್‌ಚೀಫ್ ಮಾಡುತ್ತಾರೆ. ಆ ಅಧಿಕಾರಿ ಮೇಲೆ ನಿಮ್ಮ ಹತೋಟಿ ಇರುವುದಿಲ್ಲ. ಅದಕ್ಕೆ ಅಲ್ಲಿ ರಸ್ತೆಗಳಾಗಿಲ್ಲ, ಕುಡಿಯುವ ನೀರಿನ ವ್ಯವಸ್ಥೆಯಾಗಿಲ್ಲ, ಚರಂಡಿಯಾಗಿಲ್ಲವೆಂದರೆ ಒಪ್ಪಿಕೊಳ್ಳುತ್ತೇನೆ. ಆದರೆ ಅವರ ಹಳ್ಳಿಗೆ ಏನು ಬೇಕೋ ಆ ಗ್ರಾಂಟನ್ನು ನಾವು ಕೊಟ್ಟಾಗ ನೇರವಾಗಿ ಚೆಕ್ ಅವರ ಬಳಿಗೆ ಹೋಗುವಾಗ ಅವರೇ ತಮ್ಮ ಹಳ್ಳಿಗೆ ಏನು ಬೇಕು ಎಂದು ಒಂದು ನಿರ್ಣಯವನ್ನು ತೆಗೆದುಕೊಳ್ಳುವಾಗ ಯಾರಿಗೆ ನಾವು ಬ್ಲೇಮ್ ಮಾಡಬೇಕು? ಇದೇ ಸರ್ಕಾರ ಎಂದು ನಾನು ಮಾತನಾಡುತ್ತಿಲ್ಲ. ಸರ್ಕಾರ ಎಂದರೆ ಅಧಿಕಾರದ ವಿಕೇಂದ್ರೀಕರಣ ಆದಮೇಲೆ ಇನ್ನೂ ಅದೇ ವ್ಯವಸ್ಥೆ ಇನ್ನೂ ಹತ್ತು–ಹದಿನೈದು ವರ್ಷ

ಅದೇ ರೀತಿಯಾಗಿ ಇರಬೇಕೆಂದರೆ ನಾವೇನು ಅವರಿಗೆ ಕಾನ್‌ಸಿಯಸ್ ಮಾಡಿಲ್ಲವೋ ಅಥವಾ ಅವರಿಗೆ ತಿಳುವಳಿಕೆಯನ್ನು ಕೊಟ್ಟಿಲ್ಲವೋ ಅಥವಾ ನಾವೆಲ್ಲರೂ ಕೂಡ ಅದರ ಬಗ್ಗೆ ಕಣ್ಣು ಮುಚ್ಚಿಕೊಂಡು ಕೂತಿದ್ದೇವೋ ಎನ್ನತಕ್ಕ ಪ್ರಶ್ನೆ ಉದ್ಭವಿಸುತ್ತದೆ. ಅದಕ್ಕೆ ಈ ದಿಕ್ಕಿನಲ್ಲಿ ನಾವು ಯೋಚನೆ ಮಾಡತಕ್ಕದ್ದು ಇದೆ. ಮತ್ತು ತಾಲ್ಲೂಕು ಪಂಚಾಯಿತಿ ಮೀಟಿಂಗ್‌ಗಳಲ್ಲಿ ಅನೇಕ ಸಾರಿ ನಾವ್ಯಾರೂ ಹೋಗುವುದಿಲ್ಲ. ನನ್ನನ್ನೂ ಹಿಡಿದುಕೊಂಡೇ ಹೇಳುತ್ತೇನೆ. ನಾವು ಬಿಟ್ಟುಬಿಡುತ್ತೇವೆ. ಅವರವರೇ ಗಲಾಟೆ ಮಾಡಿಕೊಳ್ಳುತ್ತಾರೆ ಗುದ್ದಾಟ ಮಾಡಿಕೊಳ್ಳುತ್ತಾರೆ. ಪಂಚಾಯಿತಿ ಇದ್ದಾಗ ಏನು ನಡೆಯುತ್ತದೆ, ಎಷ್ಟು ಗ್ರಾಂಟ್ ಬಂತು? ಎಲ್ಲಿ ಅದನ್ನು ಖರ್ಚು ಮಾಡಿದರು? ಏನು ಮಾಡಿದರು ಎಂದು ಹೇಳಿ ಅನೇಕ ಸಾರಿ ನಾವು ತಾಲ್ಲೂಕು ಮಟ್ಟದ ಅಭಿವೃದ್ಧಿ ಕೆಲಸಗಳಲ್ಲೂ ನಾವು ರಿವ್ಯೂ ಮಾಡುವುದಿಲ್ಲ. ಹೀಗಾಗಿ ಕೆಲವು ಕಡೆ ಎಲ್ಲಾ ಕಡೆ ಎಂದು ನಾನು ಹೇಳುವುದಿಲ್ಲ ಸರಿಯಾದ ಕೆಲಸಗಳು ಆಗಿರುವುದಿಲ್ಲ. ಆದರೆ ಕೆಲವು ಕಡೆ ಚೆನ್ನಾಗಿಯೂ ಮಾಡಿದ್ದಾರೆ. ಈಗ ಉಡುಪಿ ಇದೆ. ಮಂಗಳೂರು ಇದೆ. ನಾರ್ತ್ ಕೆನರಾದಲ್ಲಿ ಕೆಲವು ಕಡೆ, ಚಿಕ್ಕಮಗಳೂರು ಭಾಗದಲ್ಲೂ ಕೆಲವು ಕೆಲಸಗಳನ್ನು ಚೆನ್ನಾಗಿ ಮಾಡಿದ್ದಾರೆ. ನಿಮ್ಮ ಭಾಗದಲ್ಲೂ ಒಂದೆರಡು ತಾಲ್ಲೂಕುಗಳಲ್ಲಿ ಚೆನ್ನಾಗಿ ಆಗಿವೆ. ಇಗ ಕೆಲವು ತಾಲ್ಲೂಕುಗಳು ಅಭಿವೃದ್ಧಿ ಪರ ಇರತಕ್ಕಂಥ ಜನ ಮತ್ತು ತಾಲ್ಲೂಕು ಅಧ್ಯಕ್ಷರು ಇದ್ದರೆ ಅಥವಾ ಗ್ರಾಮ ಪಂಚಾಯಿತಿ ಅಧ್ಯಕ್ಷರು ಇದ್ದರೆ ಒಳ್ಳೆಯ ಕೆಲಸ ಆಗುತ್ತವೆ. ಅದಕ್ಕೆ ನೀವು ಅದನ್ನು ವಿಕೇಂದ್ರೀಕರಣ ಇವತ್ತು ಅಧಿಕಾರ ವಿಕೇಂದ್ರೀಕರಣವಾಗಿ ಅದೆಲ್ಲಾ ಅಧಿಕಾರವನ್ನು ಕೊಟ್ಟಮೇಲೂ ಬರೀ ನಮಗೇ ಬಯ್ಯುತ್ತಿದ್ದೀರೇ ಹೊರತಾಗಿ ಅಲ್ಲೇನು ಸುಧಾರಣೆಯನ್ನು ಮಾಡಬೇಕೆಂದು ತಾವು ಹೇಳಲೇ ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಹೇಳುತ್ತೇನೆ. ನಾನು ಯಾವುದೇ ಒಂದು ಸರ್ಕಾರವನ್ನು ಬಯ್ಯುತ್ತಿಲ್ಲ. ನಾನು ಹೇಳುತ್ತಿರುವುದು ಏನೆಂದರೆ ವಿಕೇಂದ್ರೀಕರಣದ ತತ್ವ ಫೈನ್ ಎಂದು.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು): ಮಾನ್ಯ ಅದ್ಯಕ್ಷರೆ, ಈಗ ನಿರ್ಮಲ ಗ್ರಾಮ ಯೋಜನೆಯಡಿಯಲ್ಲಿ ಈ ಹೆಣ್ಣು ಮಕ್ಕಳಿಗೆ ನಾವು ಬೆಳಗಾಂ ಜಿಲ್ಲೆಯಲ್ಲಿ ಸಾಕಷ್ಟು ಹಳ್ಳಿಗಳಲ್ಲಿ ಊರಿನ ಹೊರಗಡೆ 10x10ರ ಒಂದು ಶೌಚಾಲಯವನ್ನು ಕಟ್ಟಿಸಿ, ಅದಕ್ಕೆ ಬೋರ್ ಮುಖಾಂತರ ನೀರಿನ ವ್ಯವಸ್ಥೆಯನ್ನು ಮಾಡಿದ್ದೇವೆ. ಬೇಕಾದರೆ ನೋಡಬಹುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಸರ್ವೆ ಮಾಡಿದರೆ ಗೊತ್ತಾಗುತ್ತದೆ. ನಾನು ಅಧಿಕಾರ ವಿಕೇಂದ್ರೀಕರಣದ ತತ್ವ ಸರಿಯಿಲ್ಲ ಎಂದು ಖಂಡಿತಾ ಹೇಳುತ್ತಿಲ್ಲ. ಅದು ಅಬ್ಸಲ್ಯೂಟಲಿ 100 ಪರ್ಸೆಂಟ್ ರೈಟ್, ಅದು ಆಗಬೇಕಾಗಿದೆ. ಯಾವ ಹಳ್ಳಿ ಅಭಿವೃದ್ಧಿ ಆಗಬೇಕು ಎನ್ನತಕ್ಕ ತೀರ್ಮಾನ, ಆ ಹಳ್ಳಿ ಜನರಿಗೆ ಅಧಿಕಾರ ಕೊಡತಕ್ಕದ್ದರ ಬಗ್ಗೆ ಎರಡು ಮಾತಿಲ್ಲ. ಅವರೇ ತೀರ್ಮಾನ ಮಾಡಬೇಕು. That is the actual meaning of de-centralization. ಆ ಪವರ್ ಅವರಿಗೆ ಕೊಡಬೇಕು. ಒಂದು ಕಡೆ ಫೈನಾನ್ಸಿಯಲ್ ಪವರ್, ಇನ್ನೊಂದು ಕಡೆ ಪೊಲಿಟಿಕಲ್ ಪವರ್. ಎರಡೂ ಅವರಿಗೆ ಕೊಡಬೇಕೆನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ನಾನು ಪ್ರಾರಂಭದಲ್ಲಿ ಹೇಳಿದಾಗ ನೀವು ಇರಲಿಲ್ಲ. ಫೈನಾನ್ಸಿಯಲ್ ಅಲೋಕೇಶನ್ ವಿಚಾರದ ಬಗ್ಗೆ ನಾನು ಮಾತನಾಡುವಾಗ ನೀವು ಇರಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲಸಂಪನ್ಮೂಲ ಹಾಗೂ ಸಾರಿಗೆ ಸಚಿವರು): ನಾನು ಕೇಳುತ್ತಲೇ ಇದ್ದೆ. ನೀವು ನನ್ನ ಬಗ್ಗೆಯೂ ಮಾತನಾಡಿದಿರಿ. ಅಂದರೆ ಮೇಜರ್ ಇರಿಗೇಷನ್‌ಗೆ ಇಷ್ಟು ಕೋಟಿ ರೂ. ಅಲಾಟ್ ಆಗಿದೆ. ಮತ್ತು ಜಿಲ್ಲಾ ಪಂಚಾಯತ್‌ಗೆ 600 ಕೋಟಿ ರೂಪಾಯಿ ಅಲೋಕೇಶನ್ ಆಗಿದೆ. ಅವರೆಲ್ಲಾ ಇಲ್ಲ ಎಂದರೆ ನಾನೇನು ಮಾತನಾಡುವುದು ಎಂದು ಪ್ರಾರಂಭ ಮಾಡಿದಿರಿ. ನಾನು ಎಲ್ಲಾ ಕೇಳಿಕೊಂಡು ಅಲ್ಲಿ ಕುಳಿತಿದ್ದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಆದರೆ ಅಲೋಕೇಶನ್ ಎಷ್ಟು? ಏಕೆಂದರೆ ಗ್ರಾಮೀಣ ಪ್ರದೇಶದಲ್ಲಿ ಜೀವನ ಮಾಡತಕ್ಕಂಥ ಜನರ ಸಂಖ್ಯೆ ಎಷ್ಟು? ಗ್ರಾಮೀಣ ಪ್ರದೇಶದಲ್ಲಿರತಕ್ಕಂಥ ಒಟ್ಟು ಜನಸಂಖ್ಯೆ ಎಷ್ಟು? ಆ ಜನಕ್ಕೆ ನಾವು ಕೊಡುತ್ತಿರತಕ್ಕಂಥ ನಮ್ಮ ರಾಜ್ಯದ ಸಂಪತ್ತಿನ ಭಾಗ ಎಷ್ಟು? ಇದು ಪ್ರಶ್ನೆ ಇರತಕ್ಕದ್ದು, ನಾನು ಹೇಳುತ್ತಿರತಕ್ಕದ್ದು. ಅದಕ್ಕೇ ನಾನು ಹೇಳಿದ್ದು. ನೀವು 4:31 ಪರ್ಸೆಂಟ್ ಹಣ ಕೊಡುತ್ತಿದ್ದೀರಿ ಇವತ್ತು ರಾಜ್ಯದ ಸಂಪತ್ತಿನಲ್ಲಿ ನಮ್ಮ ಪಾಪ್ಯುಲೇಷನ್ 5 ಕೋಟಿ ಚಿಲ್ಲರೆ ಇದೆ. ಕೇರಳದವರು 18 ಪರ್ಸೆಂಟ್ ಕೊಡುತ್ತಾರೆ. ಅಲ್ಲಿ ನಮಗಿಂತ ಕಡಿಮೆ ಪಾಪ್ಯುಲೇಷನ್ ಇದೆ. ನಾನು ಹೇಳುತ್ತಿರುವುದು. Unless you give a financial de-centralization, it is impossible. ಇದು ಒಂದನೆಯದು. ಎರಡನೆಯದು ಪೊಲಿಟಿಕಲ್ ಪವರ್.

ಡಾ: ಹೆಚ್.ಸಿ. ಮಹದೇವಪ್ಪ(ಗ್ರಾಮೀಣಾಭಿವೃದ್ಧಿ ಸಚಿವರು): ಗ್ರಾಮೀಣ ಅಭಿವೃದ್ಧಿಗೆ ಕೊಡತಕ್ಕ ಆಯವ್ಯಯದಲ್ಲಿ 4:31 ಪರ್ಸೆಂಟ್ ಎಂದರೆ ಅಗ್ರಿಕಲ್ಚರ್, ಇರಿಗೇಷನ್, ಪ್ರೈಮರಿ ಹೆಲ್ತ್, 'ಸೋಷಿಯಲ್ ಸೆಕ್ಟಾರ್, ಫಾರೆಸ್ಟ್ರಿ, ವಿಮೆನ್ ಅಂಡ್ ಚೈಲ್ಡ್ ವೆಲ್‌ಫೇರ್ ' ಇವೆಲ್ಲಾ ಸೇರಿಕೊಂಡಾಗ... These are going to add to the upliftment of rural economy. We have to put together all these in the budgetary allocation. ನೀವು ಹೇಳಿದ್ದು ನಾನು ಒಪ್ಪುತ್ತೇನೆ. ಹೆಚ್ಚಿಗೆ ಕೊಡಬೇಕು. ಗ್ರಾಮೀಣಾಭಿವೃದ್ಧಿ ಆಗಬೇಕು.

[ಮಾನ್ಯ ಉಪಾಧ್ಯಕ್ಷರು (ಶ್ರೀ ಎಸ್.ವೈ. ಗೋಪಾಲಕೃಷ್ಣ ಅವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು]

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅದರ ಬಗ್ಗೆ ನನಗೆ ಅರಿವಿದೆ. ಅದೆಲ್ಲವೂ ಸೇರಿ ಎಂದು ಹೇಳತಕ್ಕ ಅರಿವಿದೆ. ಆದರೆ ಇವತ್ತು ಪ್ರೈಮ್ ಇಂಪಾರ್ಟೆನ್ಸ್ ಯಾವುದು? ಜನಸಂಖ್ಯೆ ಎಷ್ಟು ಅದಕ್ಕೆ ಕೊಡುತ್ತಿರತಕ್ಕಂಥ ಹಣ ಎಷ್ಟು? all putting together ನೀವು ಏನು ಹೇಳಿದಿರಿ? ಅಗ್ರಿಕಲ್ಚರ್, ಅದೂ ಇದೂ ಎಲ್ಲವನ್ನೂ ಹೇಳಿದರೂ ಕೂಡ all putting together 80% of the population living in the rural side. 20 ಪರ್ಸೆಂಟ್ ಮಾತ್ರ ಅರ್ಬನ್ ಸೈಡ್‌ನಲ್ಲಿರತಕ್ಕ ಪಾಪ್ಯುಲೇಷನ್, ಒಟ್ಟು ರಾಜ್ಯದ ಸಂಪತ್ತಿನಲ್ಲಿ ಎಷ್ಟು ಭಾಗ ಆ ಜನಕ್ಕೆ ಹೋಗಿದೆ? 80 ಪರ್ಸೆಂಟ್‌ಗೆ ಎಷ್ಟು ಕೊಡುತ್ತಿದ್ದೇವೆ? 20 ಪರ್ಸೆಂಟ್‌ಗೆ ಎಷ್ಟು ಕೊಡುತ್ತಿದ್ದೇವೆ? ಇದು ಪ್ರಶ್ನೆ ಇರತಕ್ಕದ್ದು ಇದನ್ನು ನೀವು ಲೆಕ್ಕ ಹಾಕಿ. ಎರಡನೆಯದು ನಾವು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಡೀಸೆಂಟ್ರಲೈಸ್ ಮಾಡಿ ಅಧಿಕಾರ ಕೊಡತಕ್ಕ ಸಂದರ್ಭದಲ್ಲಿ ಆ ಡೆಮಾಕ್ರಟಿಕ್ ಕಾನ್‌ಷಿಯೆಸ್‌ನೆಸ್ ಏನು ಇದೆ, ಆ ಕಾನ್‌ಷಿಯೆಸ್‌ನೆಸ್ ಇನ್ನೂ ಮೆಚ್ಯೂರ್ ಆಗಲಿಲ್ಲ. ಮಾನ್ಯ ಖರ್ಗೆಯವರು ಹೇಳಿದ್ದು ಕರೆಕ್ಟ್. ಇಲ್ಲಿ ಯಾರ ತಪ್ಪು ಇದೆ ಎಂದು ಹುಡುಕ ಬೇಕೆಂದರೆ, ಇಲ್ಲಿ ತಪ್ಪು ಒನ್ ಸೈಡ್ ಇಲ್ಲ. ಎರಡೂ ಸೈಡ್ ಇದೆ. ಒಂದು ಕಡೆ ಆ ಗ್ರಾಮೀಣಾಭಿವೃದ್ಧಿ ಮಾಡತಕ್ಕ ಸಂದರ್ಭದಲ್ಲಿ ಆ ಗ್ರಾಮೀಣ ಜನರ ತಿಳುವಳಿಕೆ

ಮಟ್ಟ, ಕನಿಷ್ಠ ಅವರ ಹಕ್ಕುಗಳ ಬಗ್ಗೆ ಅವರ ತಿಳುವಳಿಕೆ ಮಟ್ಟ, ಕನಿಷ್ಠ ಅವರ ಕರ್ತವ್ಯಗಳ ಬಗ್ಗೆ ಕನಿಷ್ಠ ಅರ್ಥ, ಇವೆಲ್ಲವನ್ನೂ ನಾವು ಲೆಕ್ಕಹಾಕಿದರೆ ಆ ಡೆಮಾಕ್ರಟಿಕ್ ಕಾನ್‌ಷಿಯೆಸ್‌ನೆಸ್ ನಾವು ಹೆಚ್ಚು ಮಾಡಲಿಲ್ಲ. ಅದಕ್ಕೆ ನೀವು ನಜೀರ್ ಸಾಬ್ ಹೆಸರಿನಲ್ಲಿ ತರಬೇತಿ ಸಂಸ್ಥೆಯನ್ನು ಇಟ್ಟಿದ್ದೀರಿ. ಕಾಟಾಚಾರಕ್ಕೆ ತರಬೇತಿ ಪ್ರಾರಂಭ ಮಾಡುತ್ತೀರಿ. ವರ್ಷಕ್ಕೊಂದು ಸಾರಿ ಜೆಡ್‌ಪಿ ಮೆಂಬರ್‌ಗಳಿಗೆ, ಟಿಪಿಎಸ್ ಮೆಂಬರ್‌ಗಳಿಗೆ ನೀವು ತರಬೇತಿ ಕೊಡಲು ನೀವು ಹೇಳುತ್ತೀರಿ. ಹಾಗೆ ಟ್ರೈನಿಂಗ್ ಕೊಡತಕ್ಕ ಸಂದರ್ಭದಲ್ಲಿ ಒಂದು ಇಂಪಾರ್ಟೆಂಟ್ ಕಂಟೆಂಟ್ ಅನ್ನು ನೀವು ಮಿಸ್ ಮಾಡುವುದು ಎಲ್ಲಿ ಎಂದರೆ ಮೆಕಾನಿಕಲ್ ಆಗಿ ಅಧಿಕಾರಿಗಳನ್ನು ಕರೆಸಿ ಅಭಿವೃದ್ಧಿ ಮಾಡಲಿಕ್ಕೆ ದುಡ್ಡನ್ನು ಹೇಗೆ ಖರ್ಚು ಮಾಡಬೇಕು? ಕಾನೂನು ಇಷ್ಟನ್ನೇ ಹೇಳುತ್ತೀರೇ ಹೊರತು ಅವರ ಜನರಲ್ ಕಾನ್‌ಷಿಯಸ್ ರೈಸ್ ಮಾಡತಕ್ಕಂಥ ಕಾರ್ಯಕ್ರಮವನ್ನು ನೀವು ಹಾಕುವುದಿಲ್ಲ. ಅದರ ಪರಿಣಾಮ ಏನಾಗಿದೆ? ಪಂಚಾಯತಿ ಮೆಂಬರ್‌ಗಳ ಪ್ರಜ್ಞೆ, ಕಾನ್‌ಷಿಯಸ್ ಯಾವ ರೀತಿ ಡೆವಲಪ್ ಆಗಿದೆ ಎಂದರೆ ಪಂಚಾಯತಿಗೆ ಹಣ ಬಂದರೆ ನಾವು ಭಾಗ ಇಟ್ಟುಕೊಳ್ಳುವುದು. ನಮ್ಮ ನಮ್ಮ ಊರಿನಲ್ಲಿ ನಾವೇನು ಮಾಡಬೇಕೋ ಅದನ್ನು ಮಾಡಿಕೊಳ್ಳುತ್ತೇವೆ. You have no business to interfere. ಆಗ ಸಮಗ್ರವಾಗಿ ಒಂದು ಆಕ್ಷನ್ ಪ್ಲಾನ್ ಮಾಡಲಿಕ್ಕೆ ಆಗುವುದಿಲ್ಲ. ಯಾವ ಹಳ್ಳಿಗೆ ಏನು ನೆಸಿಸಿಟಿ ಇದೆ, ಅದರ ಪ್ರಕಾರ ಆಕ್ಷನ್ ಪ್ಲಾನ್ ಮಾಡುವುದಿಲ್ಲ. ನಮಗೇನು ಇಷ್ಟ ಇದೆ, ಅದರ ಪ್ರಕಾರ ಆಕ್ಷನ್ ಪ್ಲಾನ್ ಮಾಡುವುದು. ಒಬ್ಬ ಮೆಂಬರ್‌ಗೆ ಏನು ಇಷ್ಟ ಇದೆ ಆ ಕೆಲಸ ಮಾಡುವುದು. ಸಮಗ್ರವಾಗಿ ಆ ಹಳ್ಳಿಗೆ ಏನು ಅವಶ್ಯಕತೆ ಇದೆ ಎನ್ನುತಕ್ಕ ಆಧಾರದ ಮೇಲೆ ಆಕ್ಷನ್ ಪ್ಲಾನ್ ಆಗುವುದಿಲ್ಲ. ಆ ಆಕ್ಷನ್ ಪ್ಲಾನ್ ಸರಿಯಾಗಿ ಇರಬೇಕು ಎಂದು ಹೇಳಿ ಸೂಪರ್‌ವಿಶನ್ ಮಾಡತಕ್ಕಂಥ ಮೆಕಾನಿಸಂ ನಿಮ್ಮ ಹತ್ತಿರ ಇಲ್ಲ. ಅಥವಾ ಅದಕ್ಕೆ ಗೈಡ್‌ಲೈನ್ಸ್ ಇಲ್ಲ. ನಿಮ್ಮ ಸ್ಟ್ಯಾಫ್ ಇಲ್ಲ. ನಿಮ್ಮದೇ ಆದಂತಹ ಸ್ಟ್ಯಾಫ್ ಇಲ್ಲ. ಅದನ್ನೇ ನಾನು ಪ್ರಾರಂಭದಲ್ಲಿ ಹೇಳಿದ್ದು. You are handicapped with the trained staff, experienced staff. ಅದಕ್ಕೋಸ್ಕರವೇ ಗ್ರಾಮೀಣಾಭಿವೃದ್ಧಿಗೆ ಎಂದು ಹೇಳಿ ತಯಾರು ಮಾಡಿದಂತಹ, ಟ್ರೈನ್ ಆಫ್ ಮಾಡಿದಂತಹ ಆ ಕೇಡರ್ ಪಾಲಿಸಿ ನಿಮ್ಮಲ್ಲಿ ಇಲ್ಲ, ಕೇಡರ್‌ಗಳನ್ನು ಕೊಡಲಿಲ್ಲ ಎಂದು ಅದನ್ನೇ ಕೇಳಿದ್ದು. That is the main draw-back. ಇವತ್ತಿಗೂ ನೀವು ಅದನ್ನು ಆಲೋಚನೆ ಮಾಡಲಿಲ್ಲ. ನಾನು ಅದಕ್ಕೆ ಬೆಂಗಾಲದ ಉದಾಹರಣೆ ಕೊಟ್ಟೆ. They are having seperate Directorate of Rural Development. ಅವರ ಸ್ಟ್ಯಾಫೇ ಬೇರೆ. ಅವರ ಎಂಪ್ಲಾಯ್‌ಮೆಂಟೇ ಬೇರೆ. ಅವರದ್ದೇ ರಿಕ್ರೂಟ್‌ಮೆಂಟ್. ಅವರದ್ದೇ ಪ್ರತ್ಯೇಕವಾದಂತಹ ವ್ಯವಸ್ಥೆ. ಆ ರೀತಿ ವ್ಯವಸ್ಥೆ ಇಲ್ಲಿಲ್ಲ. That is the handicap. ಅದು ಇಲ್ಲದೇ ಹೋದಾಗ ನಿಮ್ಮ ಕಾರ್ಯಕ್ರಮಗಳನ್ನು ಎಫೆಕ್ಟೀವ್ ಆಗಿ ಜಾರಿಗೆ ಮಾಡಲಿಕ್ಕೆ ಆಗಲಿಲ್ಲ. ಪರಿಣಾಮಕಾರಿಯಾಗಿ ಜಾರಿಗೆ ಮಾಡಲಿಕ್ಕೆ ಆಗಲಿಲ್ಲ. ಕಡೆಯದಾಗಿ ನಾನು ಗ್ರಾಮೀಣಾಭಿವೃದ್ಧಿಯ ಬಗ್ಗೆ ಹೇಳತಕ್ಕದ್ದು ಗ್ರಾಮ ಸಭೆಗಳಿಗೆ ಬೆನಿಫಿಷರೀಸ್ ಅನ್ನು ಸೆಲೆಕ್ಟ್ ಮಾಡಬೇಕು ಎಂದು ಕೊಟ್ಟಿದ್ದೀರಿ. ಕರೆಕ್ಟ್, but make it mandatory. ಮ್ಯಾಂಡೇಟರಿ ಮಾಡಿ ಅದನ್ನು. ಕಾನೂನು ಬದ್ಧಗೊಳಿಸಿ. ಗ್ರಾಮ ಸಭೆಯ ತೀರ್ಮಾನವನ್ನು ವಯಲೇಟ್ ಮಾಡತಕ್ಕಂಥ ಅಧಿಕಾರ ಯಾರಿಗೂ ಇರಬಾರದು. ಅದನ್ನು ಮಾಡಿ. ಆವಾಗ ಶಾಸಕರ ಹಸ್ತಕ್ಷೇಪವು ಅವಶ್ಯಕತೆ ಇಲ್ಲ. ಲೋಕಸಭಾ ಸದಸ್ಯರ ಹಸ್ತಕ್ಷೇಪವು ಬೇಕಾಗಿಲ್ಲ. ಯಾರ ಹಸ್ತಕ್ಷೇಪವೂ ಬೇಕಾಗಿಲ್ಲ. Make it mandatory. ಗ್ರಾಮ ಸಭೆಯಲ್ಲಿ ಸೆಲೆಕ್ಟ್ ಆದದ್ದನ್ನು

ರದ್ದು ಮಾಡತಕ್ಕಂಥ ಅವಕಾಶ, ಯಾವುದೇ ಕಾರಣಕ್ಕೂ ಯಾರಿಗೂ ಇರಬಾರದು. ಆ ಸಂದರ್ಭದಲ್ಲಿ ಒಂದು ವಿಚಾರ ಹೇಳುತ್ತಾರೆ. ಅದೇನೋ ಅದಾಗುತ್ತದೆ, ಇದಾಗುತ್ತದೆ. ಸೂಪರ್‌ವಿಶನ್ ಬೇಕು. ಇಲ್ಲದೇ ಇದ್ದರೆ ಅದೇನಾದರೂ ಮಿಸ್ಟೇಕ್ ಆಗಿರುತ್ತದೆ ಅನ್ನುತೀರಿ ಅಗಲಿ. ಏಕೆ ಆಗಲಿ ಎಂದು ಹೇಳುತ್ತೇನೆಂದರೆ, that panchayath members are answerable to the people. ನಾವು ಹೇಗೆ ಓಟು ಹಾಕಿಸಿಕೊಂಡವರು ಕಾನ್‌ಸ್ಟಿಟ್ಯುಯೆನ್ಸಿ ಜನಕ್ಕೆ ಆನ್ಸರಬಲ್ ಆಗುತ್ತೇವೆಯೋ ಹಾಗೆ ಆ ಹಳ್ಳಿಯಲ್ಲಿ ಓಟು ಹಾಕಿಸಿಕೊಂಡಿರತಕ್ಕ ಗ್ರಾಮ ಪಂಚಾಯತಿ ಮೆಂಬರ್‌ನ್ನು ಜನರು ಕೇಳಲಿ. ನಿಮಗೇ ಸಂಪೂರ್ಣ ಅಧಿಕಾರ ಕೊಟ್ಟಿದ್ದಾರೆ. ನೀನೇನು ಮಾಡಿದೆ ಎಂದು ಇವತ್ತು ಕೇಳಲಿ. ಆದರೆ ಇವತ್ತು ನಮ್ಮ ಜನರ ಪರಿಸ್ಥಿತಿ ಏನಾಗಿದೆ ಅಂದರೆ ಚರಂಡಿಯಲ್ಲಿ ನೀರು ಹೋಗಲಿಲ್ಲ ಅಂದರೆ ಎಂಎಲ್‌ಎ ಮನೆ ಹತ್ತಿರ ಬೆಳಿಗ್ಗೆ ಬರುತ್ತಾರೆ. ಮನೆ ಇಲ್ಲ ಎಂದರೆ ಎಂಎಲ್‌ಎ ಮನೆ ಹತ್ತಿರ ಬರುತ್ತಾರೆ. ಕುಡಿಯುವುದಕ್ಕೆ ನೀರು ಇಲ್ಲ ಎಂದರೆ ಎಂಎಲ್‌ಎ ಮನೆ ಹತ್ತಿರ ಬರುತ್ತಾರೆ. ಪಂಪು ಕೆಟ್ಟು ಹೋಗಿದೆ ಎಂದರೆ ಎಂಎಲ್‌ಎ ಮನೆ ಹತ್ತಿರ ಬರುತ್ತಾರೆ. ನೀವು ಹೇಳುತ್ತೀರಿ ಎಂಎಲ್‌ಎಗೆ ಅಧಿಕಾರ ಬೇಡ. ರೈಟ್ ನಮಗೆ ಬೇಡ. ನಮ್ಮ ಹತ್ತಿರ ಬರದ ಹಾಗೆ ಮಾಡಿಬಿಡಿ. ನಮಗೇನೂ ಇಂತಹ ಜವಾಬ್ದಾರಿ ಬೇಕು ಎಂದೇನಿಲ್ಲ. ಯಾಕೆ ಬರುತ್ತಾರೆ ಗೊತ್ತೇನು? ಆ ಜನಕ್ಕೆ ಡೀಸೆಂಟ್ರಲೈಸೇಷನ್ ಮಹತ್ವ ಮತ್ತು ಅದರ ಜವಾಬ್ದಾರಿ ಇನ್ನೂ ಅರ್ಥ ಆಗಿಲ್ಲ. Because of the immaturity of the democratic norms. ಹಾಗಾಗಿ ಇವತ್ತು ಏನಾಗುತ್ತಿದೆ? ಎಲ್ಲದಕ್ಕೂ ಶಾಸಕರೇ ಹೊಣೆ ಎನ್ನತಕ್ಕದ್ದು. ಎಲ್ಲದಕ್ಕೂ ಶಾಸಕರೇ ಹೊಣೆ. ನೀರು ಕೊಡಲಿಲ್ಲ, ಶಾಸಕರು ಹೊಣೆ. ರಸ್ತೆ ಮಾಡಲಿಲ್ಲ, ಶಾಸಕರು ಹೊಣೆ. ಊರಿನಲ್ಲಿ ಚರಂಡಿಯಲ್ಲಿ ನೀರು ಹೋಗಲಿಲ್ಲ ಶಾಸಕರು ಹೊಣೆ. ಕರೆಂಟ್ ಇಲ್ಲ, ಶಾಸಕರು ಹೊಣೆ, ಪಂಪು ಕೆಟ್ಟು ಹೋಗಿಬಿಟ್ಟಿದೆ, ಶಾಸಕರು ಹೊಣೆ. ನಾವೇನು ಮಾಡವುದು ಸ್ವಾಮಿ? ಟ್ರಾನ್ಸ್‌ಫಾರ್ಮರ್ ಸುಟ್ಟು ಹೋದರೆ ಶಾಸಕರು ಹೊಣೆ. ಎಲ್ಲಾ ಹೊಣೆ. ಹೊಣೆಗಾರಿಕೆ ಮಾತ್ರ ನಮಗೆ, ಬಯ್ಗಳು ಮಾತ್ರ ನಮಗೆ. ಅಧಿಕಾರ ಹಣ ಮಾತ್ರ ಅವರಿಗೆ. ನಮಗೆ ಬಯ್ಗಳೂ ಬೇಡ. ಆ ಅಧಿಕಾರವೂ ಬೇಡ ಆ ಹಣವೂ ಬೇಡ. ಅವರಿಗೆ ಕೊಡಿ. ಅವರಿಗೇ ಸಂಪೂರ್ಣ ಕೊಡಿ. ಆದರೆ ಅದನ್ನು ಸರಿಯಾದ ರೀತಿಯಲ್ಲಿ, ವ್ಯವಸ್ಥೆ ಆಗತಕ್ಕ ರೀತಿಯಲ್ಲಿ ಕೆಲಸ ಮಾಡಿಸಿ. ನಮ್ಮದೇನೂ ತಕರಾರಿಲ್ಲ. We have no objection at all. ಆ ರೀತಿ ಆಗದೇ ಇರುವ ಕಾರಣಕ್ಕೋಸ್ಕರ ಇವತ್ತು ನಾವು ಎಡಬಿಡಂಗಿಗಳಾಗಿದ್ದೇವೆ. ಆ ಕಡೆ ಅದನ್ನು ಬಿಡುವ ಹಾಗಿಲ್ಲ, ಇದನ್ನು ಕಟ್ಟಿಕೊಳ್ಳುವ ಹಾಗಿಲ್ಲ. ಆ ರೀತಿ ಇವತ್ತು ಪರಿಸ್ಥಿತಿ ನಿರ್ಮಾಣ ಆಗಿದೆ. ಆದ್ದರಿಂದ ನೀವು ಗ್ರಾಮಸಭೆಗಳನ್ನು ಮ್ಯಾಂಡೇಟರಿ ಮಾಡಿ ಕಾನೂನು ಬದ್ಧಗೊಳಿಸಿ ಅದನ್ನು ಯಾರೂ ವಯಲೇಟ್ ಮಾಡಬಾರದು ಎಂದು ಹೇಳಿಬಿಡಿ. ಸಾರ್, ಕಾನೂನಿನಲ್ಲಿ ಮ್ಯಾಂಡೇಟರಿ ಆಗಿದೆ. ಅದು ಎಫೆಕ್ಟೀವ್ ಆಗಿ ಜಾರಿಗೆ ಆಗುತ್ತಿಲ್ಲ. ಯಾರ್‍ಯಾರಿಗೆ ಏನು ಬೇಕಾದರೂ ಆಮೇಲೆ ತಿದ್ದುಪಡಿ ತೆಗೆದುಕೊಂಡು ಬಂದು ತಿದ್ದಿಕೊಳ್ಳುತ್ತಾರೆ.

ಡಾ: ಹೆಚ್.ಸಿ. ಮಹದೇವಪ್ಪ: ಗ್ರಾಮಸಭೆಯಲ್ಲಿ ಫಲಾನುಭವಿಗಳ ಆಯ್ಕೆ ಮ್ಯಾಂಡೇಟರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಹೌದು ಸಾರ್.

ಶ್ರೀ ಎಸ್.ಎಲ್. ಧರ್ಮೇಗೌಡ: ಗ್ರಾಮಸಭೆಗಳನ್ನು ಮಾಡುತ್ತಿದ್ದಾರಲ್ಲಾ, ಪ್ರಾಕ್ಟಿಕಲ್ ಸಾಧ್ಯವೇ ಎಂದು ಅವರನ್ನು ದಯವಿಟ್ಟು ಕೇಳಿ. ಹಿಂಸೆಗೆ ಗ್ರಾಮ ಸಭೆಗಳನ್ನು ಮಾಡಿಸುತ್ತಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಕಾನೂನು ಇದೆ. ನಾನು ಇಲ್ಲ ಎಂದು ಹೇಳುತ್ತಿಲ್ಲ. ಇಂಪ್ಲಿಮೆಂಟೇಷನ್ ಆಸ್ಪೆಕ್ಟ್‌ನಲ್ಲಿ ಎಷ್ಟು ಎಫೆಕ್ಟೀವ್ ಇದೆ? ಇದು ನಂಬರ್ ಒನ್. ನಂಬರ್ ಟೂ, ಮೇಜರ್ ಡ್ರಾ ಬ್ಯಾಕ್ ಇದರಲ್ಲಿ ಅರ್ಥ ಮಾಡಿಕೊಳ್ಳಿ. ಗ್ರಾಮಸಭೆಯಲ್ಲಿ ಫಲಾನುಭವಿಗಳನ್ನು ಸೆಲೆಕ್ಟ್ ಮಾಡಬೇಕಾದರೆ, ಆಯ್ಕೆ ಮಾಡಬೇಕಾದರೆ ನೀವು ಒಂದೊಂದು ಸ್ಕೀಮ್‌ನಲ್ಲಿ ಇಷ್ಟಿಷ್ಟು ಜನರಿಗೆ ಇಷ್ಟಿಷ್ಟು ಎಂದು ಕೊಡುತ್ತೀರಿ. ಗಂಗಾ ಕಲ್ಯಾಣ–ತಾಲ್ಲೂಕಿಗೆಲ್ಲಾ ಸೇರಿ 7 ಕೊಡುತ್ತೀರಿ ಗ್ರಾಮ ಪಂಚಾಯತಿಗೆ ಎಷ್ಟು ಬರುತ್ತದೆ ಸಾರ್? ನೀವು ಹೇಳಿ. ತಾಲ್ಲೂಕಿಗೆ 15 ಕೊಡುತ್ತೀರಿ ಎಂದು ಇಟ್ಟುಕೊಳ್ಳಿ. ಗ್ರಾಮ ಪಂಚಾಯತಿ ಲೆಕ್ಕದಲ್ಲಿ ಎಷ್ಟು ಬರುತ್ತದೆ ಸಾರ್? ಒಂದೂ ಬರುವುದಿಲ್ಲ. ಆಯಿತಾ? ಆ ಗ್ರಾಮಸಭೆಯಲ್ಲಿ ಯಾರನ್ನು ಹಿಡಿದುಕೊಂಡು ಅವರು ಎಲೆಕ್ಟ್ ಮಾಡುತ್ತಾರೆ? ಪಂಚಾಯತಿಯಲ್ಲಿ ಒಂದೂ ಬರುವುದಿಲ್ಲ ಗಂಗಾ ಕಲ್ಯಾಣದಲ್ಲಿ ಹೇಗೆ ನೀವು ಗ್ರಾಮಸಭೆಯಲ್ಲಿ ಸೆಲೆಕ್ಟ್ ಮಾಡುತ್ತೀರಿ? ಅದಕ್ಕೊಂದು ಸಲ ಗ್ರಾಮಸಭೆಯನ್ನು ನಡೆಸಬೇಕು. ಮನೆಗಳು, ಅದಕ್ಕೊಂದು ಸಲ ಗ್ರಾಮಸಭೆ ನಡೆಸಬೇಕು. ಕಾರ್ಡ್–ಅದಕ್ಕೊಂದು ಸಲ ಗ್ರಾಮಸಭೆ ನಡೆಸಬೇಕು. ಪ್ರತಿ ಒಂದಕ್ಕೂ, ಏನೇನು ಬೆನಿಫಿಟ್ಸನ್ನು ಕೊಡುತ್ತಿದ್ದೀರಿ, ...

ಡಾ: ಹೆಚ್.ಸಿ. ಮಹದೇವಪ್ಪ: ಗ್ರಾಮಸಭೆಯನ್ನು ಆರು ತಿಂಗಳಿಗೆ ಒಂದು ಸಾರಿ ಕಡ್ಡಾಯವಾಗಿ ನಡೆಸಬೇಕು ಎಂದು ಇದೆ. ವಾರ್ಡ್‌ಸಭೆ ಮತ್ತು ಗ್ರಾಮಸಭೆ ಆರು ತಿಂಗಳಿಗೆ ಒಂದು ಸಾರಿ ನಡೆಯಬೇಕೆಂದು ಕಡ್ಡಾಯ ಇದೆ. ಆಯವ್ಯಯದಲ್ಲಿ ಮಂಜೂರಾದ ಮೇಲೆ ಅವೆಲ್ಲವನ್ನೂ ಇಟ್ಟು ಒಮ್ಮೆಲೇ ಆರು ತಿಂಗಳು ನಡೆಯುವಂತಹ ಗ್ರಾಮಸಭೆಗಳು ಫಲಾನುಭವಿಗಳನ್ನು ಆಯ್ಕೆ ಮಾಡುವುದು ಮತ್ತು ಆಯ್ಕೆ ಮಾಡುವುದು ಮ್ಯಾಂಡೇಟರಿ ಆಗಿರತಕ್ಕದ್ದು ಈಗಾಗಲೇ ಕಾಯಿದೆಯಲ್ಲಿ ಇದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಆರು ತಿಂಗಳಿಗೆ ಒಂದು ಸಾರಿ ಗ್ರಾಮಸಭೆಗಳನ್ನು ಕಡ್ಡಾಯ ಮಾಡಿದರೆ ನೀವು ಏನೇನು ಬೆನಿಫಿಟ್ಸನ್ನು ಜನಕ್ಕೆ ಡಿಕ್ಲೇರ್ ಮಾಡುತ್ತೀರಿ, ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಿಂದ, ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನಿಂದ, ಹೌಸಿಂಗ್ ಡಿಪಾರ್ಟ್‌ಮೆಂಟ್‌ನಿಂದ ರೂರಲ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್‌ನಿಂದ ಏನೇನು ಸವಲತ್ತು ಕೊಡುತ್ತೀರಿ, ಅವೆಲ್ಲವನ್ನೂ ಪ್ಯಾಕೇಜ್ ಮಾಡಿ ಆರು ತಿಂಗಳಿಗೆ ಒಂದೊಂದು ಸಲ ನೀವು ಕೊಡುತ್ತೀರಾ?

ಡಾ: ಹೆಚ್.ಸಿ. ಮಹದೇವಪ್ಪ: ಗ್ರಾಮ ಸಭೆ ಮತ್ತು ವಾರ್ಡ್ ಸಭೆಗಳು ಆರು ತಿಂಗಳಿಗೆ ಒಂದು ಸಾರಿ ಕಡ್ಡಾಯವಾಗಿ ನಡೆಯಬೇಕು ಎನ್ನುವುದು ಇದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಗ್ರಾಮ ಸಭೆಯಲ್ಲಿ ಸೆಲೆಕ್ಟ್ ಮಾಡಬೇಕಾದರೆ ನೀವು ಎಲ್ಲಾ ಸ್ಕೀಮ್‌ನಲ್ಲಿ ಬರತಕ್ಕ ಯೋಜನೆಗಳನ್ನು ಪ್ಯಾಕೇಜ್ ಟೈಪ್‌ನಲ್ಲಿ ಆರು ತಿಂಗಳಿಗೊಮ್ಮೆ ರಿಲೀಸ್ ಮಾಡುವುದಾದರೆ, ಆರು ತಿಂಗಳಿಗೆ ಒಮ್ಮೆ ಸಭೆ ಮಾಡಿ ಸೆಲೆಕ್ಟ್ ಮಾಡುತ್ತಾರೆ. ತಿಂಗಳಿಗೆ ಒಮ್ಮೆ, ಸ್ಕೀಮ್ ತರುತ್ತಿದ್ದೀರಿ. ತಿಂಗಳಿಗೊಮ್ಮೆ ಸ್ಕೀಮ್ ತರುವಾಗ ಗ್ರಾಮ ಸಭೆ ಮಾಡಲಿಕ್ಕೆ ಎಷ್ಟು ಸಮಯ ಇದೆ? ಎಷ್ಟು ಗ್ರಾಮಸಭೆಗಳನ್ನು ಮಾಡುತ್ತೀರಿ? ಎಲ್ಲಿ ಸಾಧ್ಯ ಇದೆ ಹೇಳಿ?

ಮಾನ್ಯ ಸದಸ್ಯರು: ಪ್ರತಿ ಒಂದು ಗ್ರಾಮ ಸಭೆ ಒಟ್ಟಿಗೆ ಆದಾಗ ಅಧಿಕಾರಿಗಳು ಹೋಗುವುದಕ್ಕೆ ಆಗುವುದಿಲ್ಲ. ಪ್ರಾಕ್ಟಿಕಲ್ ಆಗಿ ಏನು ನಡೆಯುತ್ತಿದೆ ಎಂಬುದನ್ನು ತಿಳಿದುಕೊಳ್ಳಬೇಕು.

ಡಾ: ಹೆಚ್.ಸಿ. ಮಹದೇವಪ್ಪ: ಪ್ರತಿ ಎರಡು ಗ್ರಾಮ ಸಭೆಗಳಿಗೆ ಒಬ್ಬರು ನೋಡಲ್ ಆಫೀಸರ್ ಅವರನ್ನು ನೇಮಕ ಮಾಡಿದ್ದೇವೆ. ಆ ನೋಡಲ್ ಆಫೀಸರ್ ಗ್ರಾಮ ಸಭೆಗಳನ್ನು ಕಂಡಕ್ಟ್ ಮಾಡಬೇಕು, ಗ್ರಾಮ ಸಭೆಯ ಕಾರ್ಯದರ್ಶಿಗಳು ಇವರೆಲ್ಲಾ ಸೇರಿ ಕಡ್ಡಾಯವಾಗಿ ನಡೆಸಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಪ್ರಾಕ್ಟಿಕಲ್ ಆಗಿ ಆಲೋಚನೆ ಮಾಡಿ ಮಾನ್ಯ ಮಹದೇವಪ್ಪನವರೆ, ಎರಡು ಗ್ರಾಮ ಪಂಚಾಯತಿಗಳೇ, ಅಗ್ರೀಡ್. ಸರಾಸರಿ ಎಷ್ಟು ವಿಲೇಜ್‌ಗಳು ಬರುತ್ತವೆ?

ಮಾನ್ಯ ಸದಸ್ಯರು: ಮಾನ್ಯ ಶ್ರೀರಾಮರೆಡ್ಡಿಯವರೆ, ಎಲ್ಲಾ ಗ್ರಾಮ ಸಭೆಗಳನ್ನೂ ಒಂದೇ ದಿವಸ ಹಾಕಿಕೊಳ್ಳುತ್ತಾರೆ. ಎಂಪಿಗಳನ್ನು, ಎಂಎಲ್‌ಎಗಳನ್ನು ಮತ್ತು ಅಲ್ಲಿನ ಜಿಲ್ಲಾ ಪಂಚಾಯತ್ ಸದಸ್ಯರ ಹೆಸರನ್ನೆಲ್ಲಾ ಪ್ರಿಂಟ್ ಮಾಡಿಸುತ್ತಾರೆ. ಯಾರಿಗೂ ಕೂಡ ಇನ್‌ವಿಟೇಷನ್ ತಲುಪಿಸುವುದಿಲ್ಲ. ಮತ್ತು ಒಂದೇ ದಿವಸ ಒಂದೇ ಟೈಮಿಗೆ ಬೆಳಿಗ್ಗೆ 11.00 ಗಂಟೆಗೆ ಎಂದು ಸಭೆ ಹಾಕಿಕೊಳ್ಳುತ್ತಾರೆ. ಎಷ್ಟು ಕಡೆಗೆ ಅಧಿಕಾರಿಗಳು ಹೋಗುವುದಕ್ಕೆ ಸಾಧ್ಯ ಆಗುತ್ತದೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಎರಡು ಗ್ರಾಮ ಪಂಚಾಯತಿಗಳಿಗೆ ಒಬ್ಬ ನೋಡಲ್ ಆಫೀಸರ್ ಎಂದು ಹೇಳುತ್ತೀರಿ; ಅಗ್ರೀಡ್. ನೀವು ಹೇಳಿದ ಪ್ರಕಾರ ಆ ರೀತಿ ಕೆಲಸ ಆಗುತ್ತಿಲ್ಲ.

ಶ್ರೀ ಎಸ್.ಎಲ್. ಧರ್ಮೇಗೌಡ: ಎರಡಲ್ಲ, ಸತ್ಯವಾಗಲೂ ಎರಡು ಆಗುತ್ತಿಲ್ಲ. 20 ಪಂಚಾಯತಿಗಳಿಗೆ ಒಬ್ಬರನ್ನು ಹಾಕುತ್ತಾರೆ.

(ಗೊಂದಲ)

ಶ್ರೀ ಎಸ್.ಎಲ್. ಧರ್ಮೇಗೌಡ: ನಾವು ಗ್ರಾಮ ಪಂಚಾಯತಿ ಮೆಂಬರ್ ಆಗಿ ಜಿಲ್ಲಾ ಪಂಚಾಯತಿ ಮೆಂಬರ್ ಆಗಿ ಬಂದಿದ್ದೇವೆ. 15 ಪಂಚಾಯತಿಗಳಿಗೆ ಒಬ್ಬ ನೋಡಲ್ ಅಧಿಕಾರಿಯನ್ನು ಹಾಕುತ್ತಾರೆ. ಒಬ್ಬ ಅಧಿಕಾರಿಯೂ ಬರುವುದಿಲ್ಲ. ಠರಾವು ಮಾಡಿದ್ದೇವೆ. ಕ್ರಮ ತೆಗೆದುಕೊಂಡಿಲ್ಲ.

ಡಾ: ಹೆಚ್.ಸಿ. ಮಹದೇವಪ್ಪ: ತಾಲ್ಲೂಕಿನಲಿ 25–30 ಜನ ತಾಲ್ಲೂಕು ಆಫೀಸರ್ಸ್ ಇರುತ್ತಾರೆ. ಎರಡು ಪಂಚಾಯತಿ ಅಥವಾ ಮೂರು ಪಂಚಾಯತಿಗಳಿಗೆ ಒಬ್ಬೊಬ್ಬ ನೋಡಲ್ ಆಫೀಸರ್ ಅನ್ನು ಕಡ್ಡಾಯವಾಗಿ ಹಾಕಿರುತ್ತೇವೆ. ಅವರು ಹೇಳುವುದು ಕರೆಕ್ಟ್ ಇಲ್ಲ.

ಶ್ರೀ ಎಸ್.ಎಲ್. ಧರ್ಮೇಗೌಡ: ನೀವು ಬೇಕಾದರೆ ವರದಿ ತರಿಸಿ. ನಾವು ರಾಜೀನಾಮೆ ಕೊಟ್ಟು ಹೋಗುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಹದೇವಪ್ಪನವರೆ, ನಿಮ್ಮ ಮಾತನ್ನೇ ಒಪ್ಪೋಣ.

ಡಾ: ಹೆಚ್.ಸಿ. ಮಹದೇವಪ್ಪ: ಆ ತರಹ ಇದ್ದರೆ ಕೊಡಿ, ಪರಿಶೀಲನೆ ಮಾಡಿ ಆ ಬಗ್ಗೆ ಗೈಡ್‌ಲೈನ್ಸ್ ಕೊಡಿಸಿ, ಆ ಪ್ರಕಾರ ಮಾಡೋಣ.

ಶ್ರೀ ಎಸ್. ಕುಮಾರ್ ಬಂಗಾರಪ್ಪ: ಒಂದೇ ಒಂದು ನಿಮಿಷ ಡಾಕ್ಟರ್ ಅವರೇ. ಈಗ ಏನಾಗಿದೆ ಎಂದರೆ ನಾವು ಕೆಡಿಪಿ ಮೀಟಿಂಗ್ ಹಾಕಿ ಕೊಂಡಿರುತ್ತೇವೆ; ಇಲ್ಲ ಜನರಲ್ ಬಾಡಿ ಮೀಟಿಂಗ್ ಹಾಕಿಕೊಂಡಿರುತ್ತೇವೆ. ಇಲ್ಲ ಎಂದರೆ ನಾನಾ ತರಹದ ಮೀಟಿಂಗ್‌ಗಳು ಇರುತ್ತವೆ. ಹೆಚ್ಚು ಕಡಿಮೆ ಅಸೆಂಬ್ಲಿ ನಡೆಯಬೇಕಾದರೂ ಕೂಡ ಗ್ರಾಮ ಸಭೆಗಳು ನಡೆಯುತ್ತಿರತಕ್ಕ ನಿದರ್ಶನಗಳು ಬೇಕಾದಷ್ಟು ಇವೆ. ಹಾಗಾಗಿ ನೀವು ಮಿನಿಮಮ್ ಒಂದು ದಿನದಲ್ಲಿ ನಾಲ್ಕು–ಐದು ಗ್ರಾಮ ಸಭೆಗಳನ್ನು ಹಾಕಿಕೊಂಡು ಕಾರ್ಯಕ್ರಮ ಮಾಡುವುದಕ್ಕಿಂತ ಎರಡು ಸಭೆಗಳು ಮೂರು ಸಭೆಗಳು ಎಂದು

ಫಿಕ್ಸ್ ಮಾಡಿ. ಆಮೇಲೆ ನೀವು ಏನು ಹೋಬಳಿಗೆ ಒಬ್ಬೊಬ್ಬರು ನೋಡಲ್ ಆಫೀಸರ್ ಎಂದು ಮಾಡುತ್ತೀರಿ, ಅದರಲ್ಲಿ ಮಿನಿಮಮ್ ಆದರೂ ನೀವು ಮಾಡಬೇಕಾಗುತ್ತದೆ. ಇಲ್ಲದಿದ್ದರೆ, ಏನಾಗುತ್ತದೆ ಎಂದರೆ, ಗ್ರಾಮ ಸಭೆಗಳಲ್ಲಿ ಎಲ್ಲಾ ಫಲಾನುಭವಿಗಳೂ, ಎಲ್ಲಾ ಕಾರ್ಯಕ್ರಮಗಳು ಈಗ ನಡೆಯುವುದರಿಂದ ನೀವು ನಿರ್ದಿಷ್ಟವಾಗಿ ಈ ತರಹ ಕಾರ್ಯಕ್ರಮಗಳು, ಈ ತರಹ ಕ್ಯಾಲೆಂಡರ್ ಆಫ್ ಈವೆಂಟ್ಸ್ ಇಡೀ ಸ್ಟೇಟಿಗೆ ಯೂನಿವರ್ಸಲ್ ಆಗಿ ಒಂದು ಮಾಡಲಿಲ್ಲ ಎಂದರೆ ಲೋಕಲ್ ಆಗಿ ಇಟ್ಟುಕೊಂಡಿರತಕ್ಕ ಒಂದೊಂದು ಸಭೆಯನ್ನು ಅಲ್ಲೇ ಮಾಡಿದರೆ ಅಲ್ಲಿ ಈ ಇ.ಓ ಏನು ಡೈರೆಕ್ಷನ್ಸ್ ಕೊಡುತ್ತಾರೆ, ಅಥವಾ ತಹಶೀಲ್ದಾರ್ ಏನು ಡೈರೆಕ್ಷನ್ಸ್ ಕೊಡುತ್ತಾರೆ, ಅದರ ಮೇಲೆಯೇ ಗ್ರಾಮಸಭೆಗಳು ನಡೆಯುತ್ತಿವೆ. ಸಾರಾಸಗಟಾಗಿ ಒಂದೊಂದು ತಾಲ್ಲೂಕಿನಲ್ಲಿ 10–10 ಗ್ರಾಮಸಭೆಗಳು ಒಂದೇ ದಿನದಲ್ಲಿ ನಡೆದಿವೆ. ಜಸ್ಟ್ ಆನ್ ರೆಕಾರ್ಡ್ಸ್.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಗ್ರಾಮ ಸಭೆಗಳಿಗೆ ಶಾಸಕರು ಏಕೆ ಹೋಗಬೇಕು? ಅವಶ್ಯಕತೆ ಇಲ್ಲ, ಆಮೇಲೆ ಅಧಿಕಾರಿಗಳೂ ಅವಶ್ಯಕತೆ ಇಲ್ಲ. ಆ ಲೋಕಲ್ ಪಂಚಾಯತಿಯಲ್ಲಿರತಕ್ಕಂಥ ವಿಲೇಜ್ ನೌಕರುದಾರರು ಏನು ಇರುತ್ತಾರೆ, ಅವರೂ ಛೇರ್ಮನ್, ಮೆಂಬರೂ ಕೂಡಿ ಅದನ್ನು ಮಾಡಬೇಕು. ಅಷ್ಟು ಮಾಡಿದರೆ ಸಾಕು. ಯಾರೂ ನೋಡಲ್ ಆಫೀಸರ್ ಬೇಡ, ಯಾರೂ ಬೇಡ.

(ಗೊಂದಲ)

ಶ್ರೀ ನಾಗರಾಜ ಶೆಟ್ಟಿ: ವಿವಿಧ ಇಲಾಖೆಯ . .

(ಗೊಂದಲ)

ಶ್ರೀ ಎಸ್.ಎಲ್. ಧರ್ಮೇಗೌಡ: ಆಫೀಸರ್ಸ್ ಯಾವುದೇ ಗ್ರಾಮಸಭೆಗೆ ಬರುವುದಿಲ್ಲ.

(ಗೊಂದಲ)

ಶ್ರೀ ಎಸ್.ಎಲ್. ಧರ್ಮೇಗೌಡ: ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಪಾಟೀಲ್ ಅವರು ಹಿರಿಯರು. ಅವರು ಹೇಳುತ್ತಿದ್ದಾರೆ. ಗ್ರಾಮ ಸಭೆಗಳ ಉದ್ದೇಶ ಮತ್ತು ಗ್ರಾಮ ಸಭೆಯ ಔಚಿತ್ಯ ವಿವಿಧ ಇಲಾಖೆಯ ಅಧಿಕಾರಿಗಳು ಇಲಾಖೆಯ ಎಲ್ಲಾ ಪ್ರಗತಿಗಳನ್ನು ಮತ್ತು ಪ್ರಯೋಜನಗಳನ್ನು . . . .

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ಶ್ರೀರಾಮರೆಡ್ಡಿಯವರೆ, ನೀವೇಕೆ ಬೇರೆಯವರಿಗೆ ಅವಕಾಶ ಕೊಡುತ್ತೀರಿ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನೀವೇ ಅವಕಾಶ ಕೊಟ್ಟಿದ್ದೀರಿ.

(ಗೊಂದಲ)

ಉಪಾಧ್ಯಕ್ಷರು: ನಾವು ಯಾರಿಗೂ ಅವಕಾಶ ಕೊಟ್ಟಿಲ್ಲ. ಅವರಾಗಿಯೇ ಅವರು ಎದ್ದು ನಿಂತುಕೊಂಡು ಮಾತನಾಡುತ್ತಿದ್ದಾರೆ. ಮಾತನಾಡತಕ್ಕವರು ನೀವು. ನೀವೇಕೆ ಅಲೋ ಮಾಡುತ್ತೀರಿ?

ಶ್ರೀ ಎಸ್.ಎಲ್. ಧರ್ಮೇಗೌಡ: ಅಧಿಕಾರಿಗಳು ಏಕೆ ಬರಬೇಕು ಎಂದರೆ? . . .

ಉಪಾಧ್ಯಕ್ಷರು: ಶ್ರೀರಾಮರೆಡ್ಡಿಯವರೆ, ನೀವು ಮಾತನಾಡಿ.

ಶ್ರೀ ಎಸ್.ಎಲ್. ಧರ್ಮೇಗೌಡ: ಅಧಿಕಾರಿಗಳು ಇಲ್ಲದೆ ಗ್ರಾಮ ಸಭೆಗಳನ್ನು ಮಾಡುವುದಿಲ್ಲ.

ಉಪಾಧ್ಯಕ್ಷರು: ಇದಕ್ಕೆ ಅರ್ಥ ಇಲ್ಲ.

ಶ್ರೀ ಎಸ್.ಎಲ್. ಧರ್ಮೇಗೌಡ: ಅಧಿಕಾರಿಗಳು ಇಲ್ಲದೇ ಗ್ರಾಮ ಸಭೆ ಮಾಡುವುದಿಲ್ಲ. ವಿವಿಧ ಇಲಾಖೆಯ ಅಧಿಕಾರಿಗಳು ಆ ಒಂದು ಇಲಾಖೆಯ ಕಾರ್ಯಕ್ರಮಗಳನ್ನು ಪ್ರಗತಿಗಳನ್ನು ಮತ್ತು ಪ್ರಯೋಜನಗಳನ್ನು . . .

ಉಪಾಧ್ಯಕ್ಷರು: ಮಾನ್ಯ ಧರ್ಮಪ್ಪನವರೆ, ಅವರು ಮುಗಿಸಲಿ ಕುಳಿತುಕೊಳ್ಳಿ. ನಿಮ್ಮದಾಗಿದೆಯಲ್ಲಾ. ನಿಮ್ಮ ಭಾಷಣದಲ್ಲಿ ಆಗಿದೆಯಲ್ಲಾ ಮತ್ತೇಕೆ?

ಶ್ರೀ ಎಸ್.ಎಲ್. ಧರ್ಮೇಗೌಡ: ಏಕೆ ಅಧಿಕಾರಿಗಳು ಬರುತ್ತಾರೆ ಎಂಬುದಕ್ಕೆ ನಾನು ಹೇಳುತ್ತಿರುವುದು.

ಉಪಾಧ್ಯಕ್ಷರು: ಆಯಿತು. ಅವರಿಗೆ ಗೊತ್ತಾಗುತ್ತದೆ. ಈಗ ಅದೇ ಸಬ್ಜೆಕ್ಟನ್ನು ಮಾನ್ಯ ಶ್ರೀರಾಮರೆಡ್ಡಿಯವರು ಮಾತನಾಡುತ್ತಾರೆ. ಅವರು ಹೇಳಲಿ; ಅವರು ಮಾತನಾಡಲಿ.

ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ: ಮಾನ್ಯ ಉಪಾಧ್ಯಕ್ಷರೆ, ಪಂಚಯತ್ ರಾಜ್ ವ್ಯವಸ್ಥೆಯ ಬಗ್ಗೆ ಸಾಕಷ್ಟು ಚರ್ಚೆ ನಡೆಯುತ್ತಿದೆ. ಜೊತೆಗೆ ಮಾನ್ಯ ಶ್ರೀರಾಮರೆಡ್ಡಿಯವರೂ ಸಹ ತುಂಬಾ ಮುಖ್ಯವಾದಂತಹ ಕೆಲವು ವಿಷಯಗಳನ್ನು ಇಲ್ಲಿ ಚರ್ಚೆ ಮಾಡುತ್ತಿದ್ದಾರೆ. ಮುಖ್ಯವಾಗಿ ಕಳೆದ ನಮ್ಮ 50 ವರ್ಷದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾವು ಸುಮಾರು ರೀತಿಯ ಆಡಳಿತ ವ್ಯವಸ್ಥೆಯನ್ನು ತರಲು ಪ್ರಯತ್ನ ಮಾಡಿ, ಬಹುಶಃ ಎಲ್ಲದರಲ್ಲೂ ವಿಫಲ ಆಗಿದ್ದೇವೆ. ಗಾಂಧೀಜಿಯವರು ಕಂಡಂತಹ ಈ ಗ್ರಾಮ ಸ್ವರಾಜ್ಯ ಒಂದೇ ನಮಗೆ ಮಾರ್ಗ. ಅದನ್ನು ನಾವು ಸದಸ್ಯರು ಎಲ್ಲರೂ ಒಪ್ಪಬೇಕಾದಂಥದ್ದೇ. ಆದರೂ ಸಹ ಇವತ್ತು ಗ್ರಾಮ ಪಂಚಾಯಿತಿ ವ್ಯವಸ್ಥೆಯಲ್ಲಿ ಸಾಕಷ್ಟು ಅಡಕು ತೊಡಕು ಇದೆ. ಸಾಕಷ್ಟು ಅವ್ಯವಹಾರಗಳೂ ಸಹ ನಡೆಯುತ್ತಿವೆ. ಇದೆಲ್ಲಾ ನಮಗೆ ಗೊತ್ತಿರುವುದೆ. ಇದರಲ್ಲಿ ನಾವು ಕೇವಲ ಅಧಿಕಾರಿಗಳನ್ನು ದೂಷಣೆ ಮಾಡಿದರೂ ಸಾಕಾಗುವುದಿಲ್ಲ. ಅಧಿಕಾರಿಗಳೂ ಸಹ ಇದರಲ್ಲಿ ಸಾಕಷ್ಟು ನೆಲಮಟ್ಟದಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ಎಚ್ಚರಿಕೆಯಿಂದ ಗಮನಿಸಿ ಅವರು ಕ್ರಮ ತೆಗೆದುಕೊಂಡರೆ ಒಳ್ಳೆಯದು. ಒಂದೇ ನಿಮಿಷ, ನಾನು ಹೆಚ್ಚಿಗೆ ಹೇಳುವುದಿಲ್ಲ. ಒಂದೇ ಪಾಯಿಂಟ್ ಹೇಳುತ್ತೇನೆ. ಅಧಿಕಾರಿಗಳದ್ದೂ ಜವಾಬ್ದಾರಿ ಇದೆ. ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಅದರ ಜೊತೆಗೆ ಶಾಸಕರಾಗಿ ನಮ್ಮದೂ ಸಹ ಜವಾಬ್ದಾರಿ ಇದೆ. ಈ ಪಂಚಾಯತಿ ವ್ಯವಸ್ಥೆಗಳನ್ನು ಸುಧಾರಣೆ ಮಾಡಬೇಕಾದಂತಹ ಜವಾಬ್ದಾರಿ ನಮ್ಮದೂ ಇದೆ. ನಾವೂ ಸಹ ಅದರಲ್ಲಿ ಹೆಚ್ಚಿಗೆ ಗಮನ ಕೊಟ್ಟು, ಸೂಕ್ತ ಮಾರ್ಗದರ್ಶನ ಕೊಡುವುದರಿಂದ ಹಿಡಿದು, ಅಲ್ಲಿ ಸರಿಯಾಗಿ ವ್ಯವಹಾರಗಳು ನಡೆಯುತ್ತಿವೆಯೋ ಇಲ್ಲವೋ ಎನ್ನುವುದರ ಮೇಲ್ವಿಚಾರಣೆಯನ್ನು ನಾವೂ ಸಹ ಮಾಡಬೇಕಾಗುತ್ತದೆ. ಸುಮ್ಮನೇ ಅಧಿಕಾರಿಗಳಿಗೆ ಬೆರಳು ತೋರಿಸಿದರೆ ಏನೂ ಪ್ರಯೋಜನ ಆಗುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಸನ್ಮಾನ್ಯ ಉಪಾಧ್ಯಕ್ಷರೆ, ನಾನು ಯಾವ ಅಧಿಕಾರಿಯನ್ನೂ ದೂಷಣೆ ಮಾಡಲಿಲ್ಲ. ಅವರು ಬಹುಶಃ ಕೇಳಿಸಿಕೊಳ್ಳಲಿಲ್ಲ. ನಾನು ಯಾವ ಅಧಿಕಾರಿಯ ಮೇಲೂ ಅಪವಾದ ಮಾಡಲಿಲ್ಲ, ದೂಷಣೆಯನ್ನೂ ಮಾಡಲಿಲ್ಲ. ವ್ಯವಸ್ಥೆ ಬಗ್ಗೆ ಅಷ್ಟೇ ನಾನು ಹೇಳುತ್ತಿದ್ದೇನೆ. ಸನ್ಮಾನ್ಯ ಉಪಾಧ್ಯಕ್ಷರೆ, ನೀವು ಗ್ರಾಮ ಸಭೆ ಎಂದು ಹೇಳಿದಿರಿ. ಎರಡು ಗ್ರಾಮ ಪಂಚಾಯತಿಗಳಿಗೆ ಒಬ್ಬ ನೋಡಲ್ ಆಫೀಸರ್ ಎಂದು ಹೇಳಿದಿರಿ. ನಿಮ್ಮ ಪಾಯಿಂಟೇ ತೆಗೆದುಕೊಳ್ಳೋಣ. ಅದು ಸತ್ಯ ಅಲ್ಲ. ಆದರೂ ಕೂಡ ನಿಮ್ಮ ಪಾಯಿಂಟೇ ನಾನು ಒಪ್ಪುತ್ತೇನೆ. ಎರಡು ಗ್ರಾಮ ಪಂಚಾಯತಿಗಳಿಗೆ ಸರಾಸರಿಯಾಗಿ ಎಷ್ಟು ವಿಲೇಜ್‌ಗಳು ಬರುತ್ತವೆ? ನಮ್ಮ ಕಡೆಯಾದರೆ ಒಂದು ಗ್ರಾಮ ಪಂಚಾಯತಿಗೆ

ಮಿನಿಮಮ್ 12 ರಿಂದ 15 ಹಳ್ಳಿಗಳು ಬರುತ್ತವೆ. ಬೇರೆ ಕಡೆಗಳಲ್ಲಿ ಹೆಚ್ಚು ಕಡಿಮೆ ಇರಬಹುದು. ನಮ್ಮ ಕಡೆ ನಾನು ಹೇಳಿದ್ದು. ಎರಡು ಪಂಚಾಯತಿ ಅಂದರೆ ನಿಮ್ಮ ಮ್ಯಾಂಡೇಟರಿ ಪ್ರಕಾರ 30 ಹಳ್ಳಿಗಳಲ್ಲಿ ಕಡ್ಡಾಯವಾಗಿ ಗ್ರಾಮ ಸಭೆಗಳನ್ನು ಮಾಡಬೇಕು. ಹೌದೋ ಇಲ್ಲವೋ? 30 ಹಳ್ಳಿಗಳಲ್ಲಿ ಗ್ರಾಮ ಸಭೆ ಮಾಡಬೇಕು ಎಂದಾದರೆ ಒಂದು ತಿಂಗಳು ಬೇಕು. ಒಂದು ದಿವಸಕ್ಕೆ ನೀವು ಎರಡು ಗ್ರಾಮ ಸಭೆಗಳನ್ನು ಮಾಡುತ್ತೇವೆ ಎಂದು ಹೇಳಿದರೂ 15 ದಿವಸ ಬೇಕಾಗುತ್ತದೆ. ಆದರೆ ಇವತ್ತು ಏನು ಮಾಡುತ್ತಿದ್ದೀರಿ? ದಿನಕ್ಕೆ 5–6–10–12 ಗ್ರಾಮ ಸಭೆಗಳನ್ನು ಮಾಡುತ್ತಿದ್ದೀರಿ. ಅಂದರೆ ಶಾಸ್ತ್ರಕ್ಕೆ, ಹೋಗಿ ಹೂವಿನ ಹಾರವನ್ನು ಹಾಕಿಸಿಕೊಂಡು ಬರುವುದೇ ಕೆಲಸ ಗ್ರಾಮಸಭೆಯಲ್ಲಿ . . . . .

ಶ್ರೀ ಸಿ.ಬಿ. ಕೃಷ್ಣಬೈರೇಗೌಡ: ಅದನ್ನು ಸರಿಪಡಿಸಲು ಅಧಿಕಾರಿ ನಿಮಗೂ ಇದೆ ಸಾರ್. ಅದನ್ನು ನೀವು ಅಲ್ಲೇ ತಾಲ್ಲೂಕು ಪಂಚಾಯಿತಿಯಲ್ಲಿ ಹೇಳಿ ಸಾರ್. ಇದು ಸರಿಯಿಲ್ಲ, ಈ ರೀತಿ ಹಾಕಿಕೊಳ್ಳಬೇಡಿ ಎಂದು ಹೇಳಿ ಸಾರ್.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು ನಿಮ್ಮ ಹತ್ತಿರ ಬುದ್ಧಿವಾದ ಹೇಳಿಸಿಕೊಳ್ಳಲು ಬಂದಿಲ್ಲ. ನನ್ನ ಅಭಿಪ್ರಾಯವನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಸಿ.ಬಿ. ಕೃಷ್ಣಬೈರೇಗೌಡ: ನನ್ನ ಸಲಹೆಯನ್ನು ನಾನು ಕೊಡುತ್ತಿದ್ದೇನೆ. ನಾನೇನು ನಿಮಗೆ ಬುದ್ಧಿವಾದ ಹೇಳುತ್ತಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು ಅದನ್ನು ಕೇಳಲು ಬಂದಿಲ್ಲ. ನನಗೆ ಶಾಸಕನಾಗಿ ಗೊತ್ತಿದೆ. ಶಾಸಕನಾಗಿ ನನ್ನ ಕರ್ತವ್ಯವೇನು ಎಂಬುದು ನನಗೆ ಗೊತ್ತಿದೆ. ಇನ್ನೊಬ್ಬರ ಹತ್ತಿರ ಹೇಳಿಸಿಕೊಳ್ಳುವ ಅವಶ್ಯಕತೆ ನನಗೆ ಇಲ್ಲ. ಶಾಸಕನಾಗಿ ನನಗೇನು ಜವಾಬ್ದಾರಿ ಇದೆ ಅದು ನನಗೆ ಗೊತ್ತಿದೆ.

(ಗೊಂದಲ)

ಉಪಾಧ್ಯಕ್ಷರು: ಕೃಷ್ಣಬೈರೇಗೌಡರೆ, ತಾವು ಮಾತನಾಡಬೇಕೆ? ತಾವು ಒಂದು ನೋಟೀಸ್ ಕಳುಹಿಸಿ. ಇದರಲ್ಲಿ ನೀವು interfere ಆಗಬೇಡಿ. ಮಾತನಾಡಬೇಕಾದರೆ ನೀವು ನೋಟೀಸ್ ಕಳುಹಿಸಿ.

ಶ್ರೀ ಸಿ.ಬಿ. ಕೃಷ್ಣಬೈರೇಗೌಡ: ಬುದ್ಧಿವಾದ ಎಂದು ಹೇಳಿದರು ಅದಕ್ಕೆ . . . . .

ಉಪಾಧ್ಯಕ್ಷರು: ನೀವೂ ಚರ್ಚೆ ಮಾಡಿ, ಬೇಡವೆಂದು ಹೇಳುವುದಿಲ್ಲ, ಆದರೆ ಇದರಲ್ಲಿ interfere ಆಗುವುದು ಬೇಡ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಿಮಗೆ ಇದರ ಅವಕಾಶ ಸಿಕ್ಕಿದಾಗ ಹೇಳಿ, ಚರ್ಚೆ ಮಾಡಿ.

ಉಪಾಧ್ಯಕ್ಷರು: ನೀವು ನೋಟೀಸ್ ಕಳಿಸಿ, ನೀವು ಮಾತನಾಡಿ, ಬೇಡವೆಂದು ಹೇಳುವುದಿಲ್ಲ. ನಿಮಗೆ ಅವಕಾಶ ಕೊಡುತ್ತೇವೆ. ನೀವು ಮಧ್ಯದಲ್ಲಿ ಬರಬೇಡಿ.

ಶ್ರೀ ಎಸ್.ಎಲ್. ಧರ್ಮೇಗೌಡ: ಮಾನ್ಯ ಶ್ರೀರಾಮರೆಡ್ಡಿಯವರೆ, ನೀವು ತುಂಬಾ ಚೆನ್ನಾಗಿ ಬೆಳಕನ್ನು ಚೆಲ್ಲುತ್ತಿದ್ದೀರಿ, ಒಳ್ಳೆಯ ವಿಚಾರಗಳನ್ನು ತಿಳಿದುಕೊಂಡಿದ್ದೀರಿ, ಚೆನ್ನಾಗಿ ಸಭೆಗೆ ಹೇಳುತ್ತಿದ್ದೀರಿ. ಅವರಿಗೆ ಅನುಭವವಿದೆ, ಚೆನ್ನಾಗಿ ಹೇಳುತ್ತಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಹದಿನೈದು ದಿವಸ ಮಾಡಬೇಕಾಗುತ್ತದೆ ಗ್ರಾಮಸಭೆ . . . . .

ಶ್ರೀ ಪಿ.ಟಿ. ಪರಮೇಶ್ವರ ನಾಯಕ್: ಬುದ್ಧಿವಾದ ಹೇಳಿದರು ಎಂದು ಶ್ರೀರಾಮರೆಡ್ಡಿಯವರು ಹೇಳುತ್ತಿದ್ದಾರೆ, ಅವರು ಬುದ್ಧಿವಾದ ಹೇಳಲಿಲ್ಲ, ಸಲಹೆ ಕೊಡುತ್ತಿದ್ದಾರೆ.

ಉಪಾಧ್ಯಕ್ಷರು: ಬಹಳ ಸಂತೋಷ ಪರಮೇಶ್ವರ ನಾಯಕ್‌ರವರೆ, ಶ್ರೀರಾಮರೆಡ್ಡಿಯವರೆ, ಅವರು ನಿಮಗೆ ಸಲಹೆ ಕೊಟ್ಟಿದ್ದಾರೆ ಅಷ್ಟೆ! ತಾವು ಮಾತನಾಡಿ.

ಡಾ: ಹೆಚ್.ಸಿ. ಮಹದೇವಪ್ಪ: ಗ್ರಾಮಸಭೆ ಒಂದು ಪಂಚಾಯಿತಿಗೆ ಒಂದು ನಡೆಯುತ್ತದೆ. ಆದರೆ ವಾರ್ಡ್ ಸಭೆ ಆಯಾಯ ಊರಿನಲ್ಲಿ ನಡೆಯುತ್ತದೆ, ಆಯಾಯ ಮತದಾರರು ಇರುತ್ತಾರೆ, ನಾನೂರು ಜನಕ್ಕೆ ಒಬ್ಬರು ಗೆದ್ದಿರುತ್ತಾರೆ ಆ ರೀತಿ. ಅನಂತರ ಸದಸ್ಯರುಗಳು ಎಂ.ಎಲ್.ಎ. . . . .

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಯಾರು ಇರುತ್ತಾರೆ ಎಂಬ ಬಗ್ಗೆ ನನ್ನ ಡಿಸ್‌ಪ್ಯೂಟ್ ಇಲ್ಲ, ಅದನ್ನು ನಾನು ಕೇಳುತ್ತಲೂ ಇಲ್ಲ.

ಡಾ: ಹೆಚ್.ಸಿ. ಮಹದೇವಪ್ಪ: ಅವರುಗಳು ಗ್ರಾಮಸಭೆಯ ಸದಸ್ಯರುಗಳಲ್ಲ. ಆದರೆ ಆಹ್ವಾನಿತರಾಗಿ ಹೋಗಬಹುದು, ಯಾವ ವಾರ್ಡ್‌ನಲ್ಲಿ ಯಾವ ಗ್ರಾಮಸಭೆಯಲ್ಲಿ ಅವರ ಮೆಂಬರ್ ಇದ್ದಾರೆ ಎಂಬುದು ತಮಗೆ ಚೆನ್ನಾಗಿ ಗೊತ್ತಿದೆ. ಗೊತ್ತಿಲ್ಲವೆಂದಲ್ಲ. ಅದನ್ನು ಶಕ್ತಿ ಮಾಡಲು ಎಲ್ಲರೂ ಸೇರಿ ಪ್ರಯತ್ನ ಮಾಡೋಣ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ತಾವು ಹಾಗೆ ಹೇಳುವುದಾದರೆ ಅದು ಇನ್ನೂ ಹೆಜಾರ್ಡಸ್ ಆಗುತ್ತದೆ.

ಶ್ರೀ ಸಿ.ಎಸ್. ನಾಡಗೌಡ: ಮಾನ್ಯ ಅಧ್ಯಕ್ಷರೆ, ಶ್ರೀರಾಮರೆಡ್ಡಿಯವರೇನು ಹೇಳುತ್ತಿದ್ದಾರಲ್ಲಾ What he is pointing out is a lacuna in the whole system itself. ಅದನ್ನು ನಾವು ಬಹಳಷ್ಟು ರಾಜಕೀಯ ಬೆಳೆಸದೆಯೆ ಮಾತನಾಡಬೇಕಾದರೆ ಕೆಲವೊಂದು ಇನ್‌ಸ್ಟೆನ್ಸ್‌ನಲ್ಲಿ, ಕೆಲವು ಕಡೆಯಾಗಿದೆ, ಅಲ್ಲಿ ಏನಾದರೂ ನಾವು invitees ಆಗಿ ಹೋಗಿ ಸಲಹೆಗಳನ್ನು ಕೊಟ್ಟಿದ್ದಕ್ಕೆ ಎಷ್ಟು ಮಹತ್ವವಾದ ಸಲಹೆಯನ್ನು ಕೊಟ್ಟರೂ ಕೂಡ ಅವರು ಅದನ್ನು ತಲೆಯಲ್ಲಿ ಹಾಕಿಕೊಳ್ಳುವುದಿಲ್ಲ. ಸೆಕ್ರೆಟರೀಸ್ ಅವರು ಎಲ್ಲರೂ ಸೇರಿಕೊಂಡು ಶಾಮೀಲಾಗಿ ಅದೊಂದು ದಂಧೆ ಮಾಡಿದ್ದಾರೆ. ಅದನ್ನು ನಾವು ತಿಳಿದುಕೊಳ್ಳಬೇಕು. What he is pointing out is right, because I have come from the same institution. ಆದರೆ ಅದನ್ನು ಹೇಗೆ ಸೆಟ್‌ರೈಟ್ ಮಾಡಬೇಕು ಎಂಬ ಬಗ್ಗೆ ನಾವು ಚಿಂತನೆ ಮಾಡಬೇಕಾಗಿದೆ. It is not just ನಾವು ಹೋಗಿ ನಾನು ಒಬ್ಬ ಶಾಸಕನಾಗಿದ್ದೇನೆ, ಈ ರೀತಿ ಮಾಡಪ್ಪ ಎಂದರೆ . . ಮಂಡ್ಯದಲ್ಲಿ ಒಂದು ಇನ್‌ಸ್ಟೆನ್ಸ್ ಆಯಿತು, ನಮ್ಮ ಹಿಂದಿನ ಮಂತ್ರಿಗಳು, ಶಾಸಕರು ಅಲ್ಲಿ ಜಿಲ್ಲಾ ಪಂಚಾಯಿತಿ ಸದಸ್ಯರಾಗಿ invitee member ಆಗಿ ಹೋಗಿ ಒಂದು ಸಲಹೆಯನ್ನು ಕೊಡಬೇಕಾದರೆ ಅವರು ಏನು ಹೇಳುತ್ತಾರೆ ಅವರನ್ನು ಹೊರಕ್ಕೆ ಹಾಕಿ ಎಂದು ಹೇಳಿದಂಥ ಪ್ರಸಂಗ ಕೂಡ ಆಗಿದೆ. ಆದ್ದರಿಂದ ಇದನ್ನು ಸ್ವಲ್ಪ ಬಹಳ ಗಂಭೀರವಾಗಿ ಚಿಂತನೆ ಮಾಡಬೇಕು.

ಡಾ: ಹೆಚ್.ಸಿ. ಮಹದೇವಪ್ಪ: ಅದಕ್ಕಾಗಿಯೇ ಶಾಸಕರ ವಿಚಕ್ಷಣಾ ಸಮಿತಿ ರಚನೆ ಮಾಡುತ್ತಿದ್ದೇವೆ. ನೀವು ಮಾನೀಟರ್ ಮಾಡಿ ಅವರಿಗೆ ಅಡ್ವೈಸ್ ಕೊಟ್ಟು ಈ ಸಂಸ್ಥೆಗಳನ್ನು ಬಲಪಡಿಸಲು ಏನು ಮಾಡಬೇಕೋ ಶಾಸಕರು ಕೂಡ . . .

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಾನು ಹೇಳುತ್ತಿರುವುದನ್ನು ದಯವಿಟ್ಟು ನೀವು ಅರ್ಥ ಮಾಡಿಕೊಳ್ಳಿ. ಪ್ರಾಯೋಗಿಕವಾದಂಥ difficulties ಏನಿದೆ ಎಂದರೆ ನೀವು ಪಂಚಾಯಿತಿಯಲ್ಲಿರುವ ಹದಿನೈದು ಹಳ್ಳಿಗಳಿಗೆ ಗ್ರಾಮ ಸಭೆ ಮಾಡಿದರೆ ಇದರಷ್ಟು ಹೆಜಾರ್ಡಸ್ ಬೇರೆ ಏನೂ ಆಗಲು ಸಾಧ್ಯವಿಲ್ಲ. ಏಕೆಂದರೆ, ಹದಿನೈದು ಹಳ್ಳಿಗಳಿಗೆ ಒಂದೇ ಕಡೆ ಗ್ರಾಮ ಸಭೆ ಮಾಡಿದರೆ ಹಳ್ಳಿಯಲ್ಲಿರತಕ್ಕ, ಒಂದೊಂದು ಹಳ್ಳಿಯಲ್ಲಿ ಐದಾರು ಜನರ interested parties ಬರುತ್ತಾರೆ. ಹೆಚ್ಚಿನ ಜನರು ಪಾರ್ಟಿಸಿಪೇಟ್ ಮಾಡಲು ಸಾಧ್ಯವೇ ಇಲ್ಲ. ಆಗ ನೀವು ಫಲಾನುಭವಿಗಳನ್ನು ಆಯ್ಕೆ ಮಾಡಿದರೆ ಅದರ ಪರಿಣಾಮ ಊರಿನಲ್ಲಿ ಏನಾಗುತ್ತದೆ ಎಂಬುದನ್ನು ನೀವು ಆಲೋಚನೆ ಮಾಡಿ. ಇದು ಒಂದು, ಎರಡನೆಯದು, ನೀವು ಪ್ರಾಮಾಣಿಕವಾಗಿ ಗ್ರಾಮ ಸಭೆ ಎಂದರೆ, every village ನಲ್ಲಿ ಅದನ್ನು ನೀವು ವಾರ್ಡ್ ಎಂದು ಕರೆಯುತ್ತಿರೋ ಅಥವಾ ವಿಲೇಜ್ ಎಂದು ಕರೆಯುತ್ತೀರೋ ಅಥವಾ ಕಾನ್‌ಸ್ಟಿಟ್ಯೂಯೆನ್ಸಿಯೆಂದು ಕರೆಯುತ್ತಿರೋ, ಅದು ನಿಮಗೆ ಬಿಟ್ಟ ವಿಚಾರ. ಅಲ್ಲಿ ನೀವು ಗ್ರಾಮ ಸಭೆಯನ್ನು ಮಾಡಿದರೆ ಅದು ಪ್ರಯೋಜನವಾಗುತ್ತದೆ. ಎರಡನೆಯದು, ಆ ಹಳ್ಳಿಗೇನು ವರ್ಕ್ ಹಾಕುತ್ತೀರಿ ಅದರ ಮಾನೀಟರಿಂಗ್ . . ಬಂಗಾಳದಲ್ಲಿ. ಒಂದು system ಇದೆ. ನಿಮಗೆ ಒಂದು example ಹೇಳುತ್ತೇನೆ. ಆ ಹಳ್ಳಿಯಲ್ಲಿ ವಾರ್ಡ್ ಕಮಿಟಿ ಇರುತ್ತದೆ. ಆ ವಾರ್ಡ್ ಕಮಿಟಿ ಆ ಕೆಲಸದ ಬಗ್ಗೆ ಸರಿಯಾಗಿ ಆಗಿದೆಯೆಂದು ಹೇಳಿ ಅವರು ಸರ್ಟಿಫೈ ಮಾಡಿದರೆ ಮಾತ್ರ ಬಿಲ್ಲು ಕೊಡುವುದು. ಇಲ್ಲದಿದ್ದರೆ ಕೊಡುವುದಿಲ್ಲ ಆ ಹಣವನ್ನು . . .

ಡಾ: ಹೆಚ್.ಸಿ. ಮಹದೇವಪ್ಪ: ನಮ್ಮಲ್ಲೂ ಕೂಡ ಆಗಸ್ಟ್‌ನಿಂದ ಸೋಷಿಯಲ್ ಆಡಿಟಿಂಗ್ ಪ್ರಾರಂಭವಾಗುತ್ತಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು ಹೇಳುತ್ತೇನೆ, ಅದಕ್ಕೆ ಬರುತ್ತೇನೆ. ಸೋಷಿಯಲ್ ಆಡಿಟಿಂಗ್ ಅಲ್ಲ ಸ್ವಾಮಿ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿಗಳು ಲೆಕ್ಕಪತ್ರಗಳನ್ನು ಆಡಿಟ್ ಮಾಡಿಲ್ಲ. ನೀವು ಲೆಕ್ಕ ಹೇಳಿ ನನಗೆ. ಕರ್ನಾಟಕ ರಾಜ್ಯದಲ್ಲಿ ಜಿಲ್ಲಾಪಂಚಾಯಿತಿಗಳೆಷ್ಟಿದೆ, ತಾಲ್ಲೂಕು ಪಂಚಾಯಿತಿಗಳೆಷ್ಟಿದೆ; ಯಾವ್ಯಾವ ಜಿಲ್ಲಾ ಪಂಚಾಯತಿ ಲೆಕ್ಕಪತ್ರವನ್ನು correct ಆಗಿ up-to-date ಆಡಿಟ್ ಮಾಡಿದೆ? ಯಾವ ತಾಲ್ಲೂಕು ಪಂಚಾಯಿತಿ up-to-date ಲೆಕ್ಕಪತ್ರಗಳನ್ನು ಆಡಿಟ್ ಮಾಡಿದೆ ಹೇಳಿ. ಲೆಕ್ಕಪತ್ರಗಳ ಆಡಿಟ್ ಆಗಿಲ್ಲ. ಇನ್ನು ನೀವು ಅಲ್ಲೇನು ಆಡಿಟ್ ಮಾಡುತ್ತೀರಿ? ಎಲ್ಲಿ ಆಡಿಟ್ ಮಾಡಲು ಹೋಗುತ್ತೀರಿ?

ಡಾ: ಹೆಚ್.ಸಿ. ಮಹದೇವಪ್ಪ: ಜನರು ಮಾಡಬೇಕು. ಪಶ್ಚಿಮ ಬಂಗಾಳದಲ್ಲಿ ಮಾಡುತ್ತಾರೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ಜನ ಮಾಡಲಿಕ್ಕೆ ನಿಮ್ಮ ಕಾರ್ಯದರ್ಶಿಗಳು ಬಿಡುತ್ತಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಿಮ್ಮ ಆ್ಯಕ್ಟ್‌ನಲ್ಲಿರತಕ್ಕ ಟಿ.ಪಿ. ಮತ್ತು ಜೆಡ್.ಪಿ. ಗಳ ಲೆಕ್ಕಪತ್ರಗಳನ್ನು ಆಡಿಟ್ ಮಾಡಿಲ್ಲ;

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ಜನರದ್ದು ಮೆಂಬರ್ಸ್‌ದ್ದು ಮಾಡಲು ನಿಮ್ಮ ಕಾರ್ಯದರ್ಶಿ ಬಿಡುತ್ತಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಜೆಡ್.ಪಿ. ಮತ್ತು ಟಿ.ಪಿ.ದು ಆಡಿಟ್ ಮಾಡಿಸಿದ್ದರೆ ಹೇಳಿ, ಎಷ್ಟು ಆಡಿಟ್ ರಿಪೋರ್ಟ್ ಬಂದಿದೆ? ಸಂಬಂಧಪಟ್ಟ ಆಡಿಟ್ ಮಾಡಿಸದಿರುವ ಅಧಿಕಾರಿಗಳನ್ನು ಶಿಕ್ಷೆಗೆ ಗುರಿಪಡಿಸಿದ್ದೀರಾ? utilization ಪ್ರಶ್ನೆ utilization certificateನ್ನು ಕೊಟ್ಟಿಲ್ಲ ಎಂದು ಎಷ್ಟು ಹಣ ವಾಪಸ್ ಹೋಗಿದೆ ಕೇಂದ್ರ ಸರ್ಕಾರದ್ದು? ಹೇಳಿ ನೀವು, ಲೆಕ್ಕ ಹೇಳಿ. ಮೊನ್ನೆ ರಘುವಂಶಿ ಪ್ರಸಾದ್‌ಯಾದವ್‌ರವರು ಬಂದು ಏನು ಸ್ಟೇಟ್‌ಮೆಂಟ್ ಕೊಟ್ಟು ಹೋದರು? ಪಿ.ಎಂ.ಜಿ.ವೈ.ಎಸ್ ಹಣವನ್ನು ನೀವು ಎಷ್ಟು ಖರ್ಚು ಮಾಡಿಲ್ಲ, ಅದು ವೇಸ್ಟ್ ಆಗಿದೆ, ವಾಪಸ್ ಬಂದಿದೆ ಎಂದು ಕೇಂದ್ರ ಮಂತ್ರಿಯೊಬ್ಬರು ನಿಮ್ಮ ಮುಖ್ಯಮಂತ್ರಿ ಮುಂದೆಯೇ ಹೇಳಿಬಿಟ್ಟು ಹೋದರು.

ಡಾ: ಹೆಚ್.ಸಿ. ಮಹದೇವಪ್ಪ: ಹಣ ವೇಸ್ಟ್ ಆಗುವುದಾಗಲಿ, ವಾಪಸ್ ಹೋಗುವುದಾಗಲಿ ಆಗುವುದಿಲ್ಲ, ನೀವು ಹಿರಿಯ ಸದಸ್ಯರು, ನೀವು knowledge able Hon Member. ಅದು ವೇಸ್ಟ್ ಆಗುವುದಾಗಲಿ, ವಾಪಸ್ ಹೋಗುವುದಾಗಲಿ ಆಗಲು ಸಾಧ್ಯವಿಲ್ಲ ಪಿ.ಎಂ.ಜಿ.ವೈ.ಎಸ್ money will not be wasted: It will not be lapsed. It will not be given back ಖಂಡಿತ.

SRI G.V. SRIRAMA REDDY: Before last year PMGYS programe ಏನಾಗಿದೆ ಹೇಳಿ ಸ್ವಾಮಿ?

ಡಾ: ಹೆಚ್.ಸಿ. ಮಹದೇವಪ್ಪ: 118 ಕೋಟಿ ರೂಪಾಯಿಗಳನ್ನು ಪ್ರಪೋಸಲ್ ಮಾಡಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಏನಾಗಿದೆ ಅದು?

ಡಾ: ಹೆಚ್.ಸಿ. ಮಹದೇವಪ್ಪ: 59 ಕೋಟಿ ರೂಪಾಯಿಗಳನ್ನು first ಫಿಕ್ಸ್ ಮಾಡಿದರು, 60 ಪರ್‌ಸೆಂಟ್ ಮಾಡಿದರೆ ಉಳಿದುದ್ದನ್ನು ಕೊಡುತ್ತೇವೆಂದು 42 ಕೋಟಿ ರೂ.ಗೂ ಹೆಚ್ಚು ಹಣ ಖರ್ಚು ಮಾಡಿದ್ದೇವೆ. ಉಳಿದ 59 ಕೋಟಿ ರೂ. ಹಣವನ್ನು ಬಿಡುಗಡೆ ಮಾಡುತ್ತಾರೆ. This money will not be lapsed. It will never be given back.

SRI G.V. SRIRAMA REDDY: And it will never be used!

Dr. H.C. MAHADEVAPPA: It is going to be used.

SRI G.V. SRIRAMA REDDY: It will never be used.

(ಗೊಂದಲ)

ನೋಡಿ ಮಹದೇವಪ್ಪನವರೇ, ತಾವು ದಯವಿಟ್ಟು ಆ ರೀತಿ ಮಿಸ್‌ಲೀಡ್ ಮಾಡಬೇಡಿ. ನಿಮ್ಮ ಸೆಂಟ್ರಲ್ ಮಿನಿಸ್ಟರ್ ನಿಮ್ಮ ಫಂಡ್ ಖರ್ಚು ಮಾಡಿಲ್ಲವೆಂದು ನಿಮ್ಮ Chief Minister ಮುಂದೆ ಹೇಳಿದ್ದಾರೆ. ಪಿ.ಎಂ.ಜಿ.ವೈ.ಎಸ್. ಹಣವನ್ನು ಖರ್ಚು ಮಾಡಿಲ್ಲ.

ಡಾ: ಹೆಚ್.ಸಿ. ಮಹದೇವಪ್ಪ: 60 percent utilization certificate ಕೊಟ್ಟಮೇಲೆ ಉಳಿದ ಹಣವನ್ನು ಅವರು ರಿಲೀಸ್ ಮಾಡುತ್ತಾ ಹೋಗುತ್ತಿರುತ್ತಾರೆ. 59 ಕೋಟಿ ರೂ.ನಲ್ಲಿ ಇದುವರೆಗೆ 42 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆ. 118 ಕೋಟಿ ರೂ.ಯನ್ನು third phase ಗೆ ನಾವು ಇಟ್ಟುಕೊಂಡಿದ್ದೇವೆ.

SRI G.V. SRIRAMA REDDY: Utilization Certificate ಏಕೆ ಕೊಟ್ಟಿಲ್ಲ ಕೇಳಿ? Utilization Certificate ನ್ನು ಏಕೆ ಕೊಡಲಿಲ್ಲ?

ಡಾ: ಹೆಚ್.ಸಿ. ಮಹದೇವಪ್ಪ: ಮಾನ್ಯ ಸದಸ್ಯರಿಗೆ ಏನು ಹೇಳಲು ಬಯಸುತ್ತೇನೆಂದರೆ, ಪಿ.ಎಂ.ಜಿ.ವೈ.ಎಸ್. ಹಣ misuse ಆಗುವುದಿಲ್ಲ lapse ಆಗುವುದಿಲ್ಲ. It will not be given back.

Sri G.V. SriRama Reddy: And it cannot be used also.

Dr. H.C. Mahadevappa: It is used. Rest of the money is going to be released.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಏಕೆ? Before last year PMGYS Progrmme ಏನಾಯಿತಿ? ಏಕೆ ಇಂಪ್ಲಿಮೆಂಟ್ ಮಾಡಲಿಲ್ಲ?

ಡಾ: ಹೆಚ್.ಸಿ. ಮಹದೇವಪ್ಪ: ತಮಗೇ ಗೊತ್ತಿದೆ, ಪ್ರಪೋಸಲ್ಸ್ ಸಬ್‌ಮಿಟ್ ಮಾಡುತ್ತೇವೆ, ಗೈಡ್‌ಲೈನ್ಸ್ ಚೇಂಜ್ ಮಾಡಿಬಿಡುತ್ತಾರೆ. ತಾವೇ ಹೋದ ಸಲ ಮಾತನಾಡಿದ್ದೀರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅದನ್ನಲ್ಲ ನಾನು ಕೇಳುತ್ತಿರುವುದು. ಇದು ಒಂದೇ ಅಲ್ಲ, ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ಗೆ ಸೆಂಟ್ರಲ್ ಗೌರ್ನಮೆಂಟ್‌ನಿಂದ ಎಷ್ಟು ಹಣ ಬಂದಿದೆ? ಎಷ್ಟು ಯುಟಿಲೈಜೇಷನ್ ಆಗಿದೆ? ಎಸ್.ಜೆ.ಆರ್.ವೈ ಸ್ಕೀಮ್‌ನಲ್ಲಿ ಹಲವಾರು ಜಿಲ್ಲಾ ಪಂಚಾಯಿತಿಗಳು ಯು.ಸಿ. ಕಳಿಸಿಲ್ಲವೆಂದು further grantನ್ನು ನಿಲ್ಲಿಸಿದ್ದಾರೆ. ಟಿ.ಪಿ.ಎಸ್‌ಗಳು ಯು.ಸಿ.ಯನ್ನು ಕಳುಹಿಸಿಲ್ಲವೆಂದು further grant ಅನ್ನು ನಿಲ್ಲಿಸಿದ್ದಾರೆ. ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ ಹಾಗಾಗಿ ಇದಕ್ಕೆ Financial decentralization is most important. Financial allocation ಹೆಚ್ಚು ಮಾಡದೆ ಗ್ರಾಮೀಣಾಭಿವೃದ್ಧಿ ಇಲ್ಲ, ಇವತ್ತು ಜಿಲ್ಲಾ ಪಂಚಾಯಿತಿ ರಸ್ತೆಗಳು ಇದೆ, ಯಾವ ರಸ್ತೆಯಲ್ಲೂ ಓಡಾಡಲು ಆಗುವುದಿಲ್ಲ. ಒಂದು ಕಿಲೋಮೀಟರ್ ಟಾರ್ ಹಾಕಲು ಹಣ ಮಂಜೂರಾಗಲು ಸಾಧ್ಯವಿಲ್ಲ ಇವತ್ತು ಜಿಲ್ಲಾ ಪಂಚಾಯಿತಿಯಲ್ಲಿ, ಇವತ್ತು ಒಂದು ಕಿಲೋಮೀಟರ್ ಆಸ್ಫಾಲ್ಟ್ ಮಾಡಬೇಕಾದರೆ ಮೂರು ಲಕ್ಷ ರೂ.ಗಳು ಬೇಕು, ಮೆಟಲಿಂಗ್ ಮತ್ತು ಅಸ್ಫಾಲ್ಟ್ ಎರಡೂ ಮಾಡಬೇಕಾದರೆ ಒಂದು ಕಿಲೋಮೀಟರ್‌ಗೆ ಐದು ಲಕ್ಷ ರೂ.ಗಳು ಬೇಕು, ಆ ರೀತಿ ರಸ್ತೆ ಮಾಡಲು ಜಿಲ್ಲಾಪಂಚಾಯಿತಿಯಿಂದ, ಟಿ.ಪಿ.ಎಸ್. ನಿಂದ ಎಷ್ಟು ಹಣ ಕೊಟ್ಟಿದ್ದಾರೆ ಕೇಳಿ?

ಶ್ರೀ ಆರ್. ಅಶೋಕ್: ಸರ್, ಬೆಂಗಳೂರು ನಗರ ಜಿಲ್ಲೆಯಲ್ಲಿ ಒಂದು ಕಿಲೋಮೀಟರ್ ರಸ್ತೆ ಹಾಕಿದ್ದೀರಾ? ಈಗಾಗಲೇ ಹದಿನಾಲ್ಕು ತಿಂಗಳುಗಳಾಗುತ್ತಾ ಬಂದಿದೆ. ನೀವು ಮಂತ್ರಿಗಳಾಗಿದ್ದೀರಿ. ಬೆಂಗಳೂರು ನಾರ್ತ್ ಮತ್ತು ಸೌತ್ ತಾಲ್ಲೂಕಿನಲ್ಲಿ ಒಂದು ಕಿಲೋಮೀಟರ್ ರಸ್ತೆ ಹಾಕಿರುವುದನ್ನು ನೀವು ತೋರಿಸಿ. ನಾವ್ಯಾರೂ ಕೂಡ ಮುಖ ಎತ್ತಿಕೊಂಡು ಹೋಗುವುದಕ್ಕಾಗುವುದಿಲ್ಲ. 'ನಾವು ಅಧಿಕಾರ ಕೊಟ್ಟಿದ್ದೇವೆ, ಹಣ ಕೊಟ್ಟಿದ್ದೇವೆ' ಎಂದು ನೀವು ಹೇಳುತ್ತಿದ್ದೀರಿ.

ಉಪಾಧ್ಯಕ್ಷರು: ಶ್ರೀರಾಮರೆಡ್ಡಿಯವರೆ ನೀವು ಯಾರಿಗೂ ಯೀಲ್ಡ್ ಆಗಬೇಕಾಗಿಲ್ಲ. ಅಶೋಕ್‌ರವರೆ, ತಾವು ದಯವಿಟ್ಟು ಕುಳಿತುಕೊಳ್ಳಿ. ನೀವು ಮುಂದುವರೆಸಿ. ಮಹದೇವಪ್ಪನವರೆ, ಅವರು ಕೇಳುವ ಪ್ರಶ್ನೆಗಳನ್ನು ತಾವು ದಯವಿಟ್ಟು ಕೇಳಿ. ನೀವು ಮಧ್ಯೆ ಎದ್ದು ನಿಂತು ಉತ್ತರ ಕೊಡುವುದು ಬೇಡ. ಒಟ್ಟಿಗೆ ಉತ್ತರ ಕೊಟ್ಟುಬಿಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಇವೊತ್ತು ನಮ್ಮ ಕೋಲಾರ ಜಿಲ್ಲಾ ಪಂಚಾಯತ್ ರಸ್ತೆಗಳನ್ನೇ ನೋಡಲಿ. ನನಗೆ ಒಂದು ಕುತ್ತಿಗೆಗೆ ಬಂದಿದೆ. ಒಂದು ರಸ್ತೆ ಸಂಪೂರ್ಣವಾಗಿ ಹಾಳಾಗಿದೆ. ಅದು ಜಿಲ್ಲಾ ಪಂಚಾಯತ್‌ಗೆ ಸೇರುತ್ತದೆ. ಸಿಆರ್‌ಎಫ್‌ನಲ್ಲಿ ಸೇರಿಸುವುದಿಲ್ಲ, ನಬಾರ್ಡ್‌ನಲ್ಲಿ ಸೇರಿಸುವುದಿಲ್ಲ. ಯಾವುದೇ ಸ್ಕೀಮ್‌ನಲ್ಲೂ ಅದನ್ನು ಸೇರಿಸುವುದಕ್ಕಾಗುವುದಿಲ್ಲ. ಜಿಲ್ಲಾ ಪಂಚಾಯತ್‌ನವರೆ ಮಾಡಬೇಕು. ಜಿಲ್ಲಾ ಪಂಚಾಯತ್‌ನವರು ಮಾಡಬೇಕಾದರೆ, ಆ ರಸ್ತೆಗೆ ಇಪ್ಪತ್ತು ಲಕ್ಷ ರೂ.ಗಳು ಬೇಕು. ನೀವು ರಸ್ತೆಗೆ ಕಳೆದ ಇಪ್ಪತ್ತು ವರ್ಷಗಳಿಂದ ಇಪ್ಪತ್ತು ರೂಪಾಯಿಗಳನ್ನೂ ಕೊಟ್ಟಿಲ್ಲ. ನೀವು ಏನು ರಸ್ತೆ ಮಾಡುತ್ತೀರಿ? ಏನು ಡೆವಲಪ್‌ಮೆಂಟ್ ಮಾಡುತ್ತೀರಿ? ಜಿಲ್ಲಾ ಪಂಚಾಯತ್ ರಸ್ತೆಗಳು, ಆಮೇಲೆ ಎಂಡಿಆರ್‌ಗಳು . . . ಇವೊತ್ತು ಅಷ್ಟು ಅಧ್ವಾನವಾಗಿವೆ. ರಸ್ತೆಗಳನ್ನು ಕೊಡಲಿ, ನಾನೇ ದಮ್ಮಯ್ಯ ಹಾಕುತ್ತಿದ್ದೇನೆ. ಒಂದು ರಸ್ತೆ ಹಾಳಾಗಿದೆ, ಅದಕ್ಕೆ ಯಾರೂ ಹಣ ಕೊಡುವುದಿಲ್ಲ. ದಯವಿಟ್ಟು ಹಣ ಕೊಡಿ, ಅದಕ್ಕೆ ಅರವತ್ತು ಲಕ್ಷ ರೂ.ಗಳು ಖರ್ಚಾಗುತ್ತದೆಂದು ಕೇಳುತ್ತಿದ್ದೇನೆ. ಫೈನಾನ್ಸ್ ಮಿನಿಸ್ಟರ್ ಆರ್ಡರ್ ಮಾಡಿದರೂ ಕೂಡ ನನಗೆ ಕೊಡಲಿಲ್ಲ. ತಾವು ಏನು ಗ್ರಾಮೀಣಾಭಿವೃದ್ಧಿ ಮಾಡುತ್ತೀರಿ? ಆದುದರಿಂದ, ಫೈನಾನ್ಸಿಯಲ್ ಡಿ–ಸೆಂಟ್ರಲೈಜೇಶನ್ ಇಲ್ಲದೆ 'ನಾನು ಗ್ರಾಮೀಣಾಭಿವೃದ್ಧಿಯನ್ನು ಎಫೆಕ್ಟಿವ್ ಆಗಿ ಮಾಡುತ್ತೇನೆ' ಎಂದು ನೀವು ಹೇಳಿದರೆ ಅದು ಕನಸು. ಅದು ಬರೀ ಕಾಗದದಲ್ಲಿರುತ್ತದೆ, ಅದು ಸಾಧ್ಯವಿಲ್ಲ. ಫೈನಾನ್ಸಿಯಲ್ ಡಿ–ಸೆಂಟ್ರಲೈಜೇಶನ್ ಆಗಬೇಕು. ಸ್ಟೇಟ್‌ನ ಟೋಟಲ್ ರಿಸೋರ್ಸ್ ಏನಿದೆ, 50 ಪರ್ಸೆಂಟ್ ಅವರಿಗೆ ಕೊಡಿ, ಕೆಲಸ ಮಾಡಿಸಿ. Have your own recruitment policy, have your own cadres, train them, how to develop the villages, train the panchayat members. ಆಗ ಗ್ರಾಮೀಣಾಭಿವೃದ್ಧಿಯಲ್ಲಿ ಏನಾದರೂ ನಿರೀಕ್ಷೆ ಮಾಡಬಹುದು. ಇಲ್ಲದಿದ್ದರೆ, ಗ್ರಾಮೀಣಾಭಿವೃದ್ಧಿ ನಿರೀಕ್ಷಿಸುವುದಕ್ಕಾಗುವುದಿಲ್ಲ. ಸನ್ಮಾನ್ಯ ಉಪಾಧ್ಯಕ್ಷರೆ, ಇನ್ನು ಒಂದೇ ಒಂದು ವಿಚಾರ ಆಡಳಿತಕ್ಕೆ ಸಂಬಂಧಿಸಿದ್ದು. ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಯಾಕೆಂದರೆ, ಇವೊತ್ತು ಈ ರಾಜ್ಯದ ಆಡಳಿತ ಯಂತ್ರಾಂಗ ಸಂಪೂರ್ಣವಾಗಿ ಕುಸಿದು ಹೋಗಿದೆ. ಇದಕ್ಕೆ ಜೀವ ಇಲ್ಲ. ಇದಕ್ಕೆ ಯಾರು ಯಜಮಾನರೆಂಬುದು ಗೊತ್ತಿಲ್ಲ. ಅಧಿಕಾರ ನಡೆಸತಕ್ಕಂಥವರು ಯಾರೆಂದು ಗೊತ್ತಾಗಿಲ್ಲ. ಸಂಪೂರ್ಣವಾಗಿ ನೆಲ ಕಚ್ಚಿದೆ. ಆಗಲೇ ಮಾನ್ಯ ಮಾಧುಸ್ವಾಮಿಯವರು ಹೇಳಿರುವುದರಿಂದ ನಾನು ಹೆಚ್ಚಿನ ವಿವರಗಳಿಗೆ ಹೋಗುವುದಿಲ್ಲ. ಒಂದೇ ಒಂದು ಉದಾಹರಣೆ ಕೊಡುತ್ತೇನೆ. ಮುಖ್ಯಮಂತ್ರಿಗಳು ಒಂದು ಆದೇಶವನ್ನು ಪಾಲಿಸದೆ, 'ಇಲ್ಲಿ ಜಾಗ ಇಲ್ಲ, ಹೋಗಿ' ಎಂದು ವಾಪಸ್ಸು ಕಳುಹಿಸಿದ್ದಾರೆ. ಇನ್ನು ಯಾರು ಈ ರಾಜ್ಯದಲ್ಲಿ ದೊಡ್ಡವರೆಂದು ನಮಗೆ ನೀವು ಹೇಳಬೇಕು. ನಾನು ಉಪಾಧ್ಯಕ್ಷರ ಮುಖಾಂತರ ಕೇಳುತ್ತಿದ್ದೇನೆ. The Chief Minister has posted one Executive Engineer to the BDA. ಚೀಫ್ ಮಿನಿಸ್ಟರ್ ಆರ್ಡರ್ ಮಾಡಿದರೂ, ಆತ ಹೇಳುತ್ತಾನೆ: ನಮ್ಮಲ್ಲಿ ಜಾಗ ಇಲ್ಲ, ವಾಪಸ್ಸು ಹೋಗಪ್ಪಾ ಎಂದು ಕಳುಹಿಸುತ್ತಾನೆ. ಯಾರು ಇದಕ್ಕೆ ಯಜಮಾನರು?

ಶ್ರೀ ಕಾರಜೋಳ ಎಂ. ಗೋವಿಂದ: ದುಡ್ಡೇ ಯಜಮಾನರು. ದುಡ್ಡು ಯಾರು ಕೊಡುತ್ತಾರೆ..

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನನಗೆ ಗೊತ್ತಿಲ್ಲ. ನಾನಂದುಕೊಂಡಿರತಕ್ಕಂಥಾದ್ದು, ನನಗೆ ತಿಳಿವಳಿಕೆ ಇರತಕ್ಕಂಥಾದ್ದು Chief Minister is the highest executive authority in the State. ಅವರು ಮಾಡಿದಂಥ ಆದೇಶವನ್ನು ಒಬ್ಬ ಆಫೀಸರ್ ಇಂಪ್ಲಿಮೆಂಟ್ ಮಾಡುವುದಿಲ್ಲವೆಂದರೆ, ಈ ಸರ್ಕಾರ ಇರಬೇಕಾ? ಈ ಸರ್ಕಾರ ನಡೀಬೇಕಾ? ನೀವು ಹೇಳಿ

ಶ್ರೀ ಎಂ.ಪಿ. ಪ್ರಕಾಶ್: ಉಪಾಧ್ಯಕ್ಷರೆ, ನಿವೇಶನದ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬರೆದ ಪತ್ರದ ಮೇಲೆ ನಿವೇಶನದ ಲಭ್ಯತೆ ಇಲ್ಲವೆಂದು ಹೇಳಿ . . .

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಿವೇಶನ ಅಲ್ಲ. ದಯವಿಟ್ಟು ಕ್ಷಮಿಸಿ. ನಿವೇಶನ ಅಲ್ಲ. ಅಧಿಕಾರಿ ಎಂದು ನಾನು ಹೇಳಿದ್ದು. ಅಧಿಕಾರಿಯನ್ನು ವರ್ಗಾವಣೆ ಮಾಡಿರುವುದರ ಬಗ್ಗೆ ನಾನು ಹೇಳುತ್ತಿದ್ದೇನೆ. ನಾನು ನಿವೇಶನ ಎಂದು ಹೇಳಲಿಲ್ಲ. ನಾನು ಹೇಳುತ್ತಿರತಕ್ಕಂಥಾದ್ದು ಅಧಿಕಾರಿ ವರ್ಗಾವಣೆ. Chief Minister's Order has been sent back saying that there is no post. ಚೀಫ್ ಮಿನಿಸ್ಟರ್‌ರವರ ಆರ್ಡರ್‌ನಲ್ಲಿ ಸ್ಪೆಸಿಫಿಕ್ ಆಗಿ ಇಂತಹ ಜಾಗಕ್ಕೇ ಹಾಕಬೇಕೆಂದು ಆರ್ಡರ್ ಮಾಡಿದ್ದಾರೆ. ಆತ ಹೇಳುತ್ತಾನೆ, ಇಲ್ಲಿ ಜಾಗ ಇಲ್ಲ ಹೋಗು ಎಂದು. ಯಾರು ಈ ರಾಜ್ಯಕ್ಕೆ ಯಜಮಾನರು? ನೀವು ಹೇಳಿ. Who is the Chief?

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಮುಖ್ಯಮಂತ್ರಿಗಳೆ ಅದಕ್ಕೆ, He is the head of the State. ಗವರ್ನರ್ ಅಲ್ಲ. The Chief Minister of the State. He is the first among the equals. ಪ್ರಶ್ನೆ ಏನೆಂದರೆ, ಪೋಸ್ಟ್ ಲಭ್ಯತೆ ಇಲ್ಲದೇ ಇರಬಹುದು. ಅದರ ವಸ್ತುಸ್ಥಿತಿಯನ್ನು ಅವರು ಮುಖ್ಯಮಂತ್ರಿಗಳ ಗಮನಕ್ಕೆ ತಂದಿರುತ್ತಾನೆಯೇ ವಿನಾ ಅದನ್ನು ಉಲ್ಲಂಘಿಸಿ, ಆತನ ಮಾತೇ ನಡೆಯುತ್ತದೆ ಎನ್ನತಕ್ಕಂಥ ಪ್ರಶ್ನೆ ಇಲ್ಲ. ಈಗ for example, ಈ ಪೋಸ್ಟ್ ಹಾಕಿ ಎಂದು ನಮಗೆ ಮಾಹಿತಿ ಲಭ್ಯತೆ ಇಲ್ಲದೆ ಹೇಳಿರುತ್ತೇನೆ. ಅದರೆ, ಆ ಪೋಸ್ಟ್ ಅಲ್ಲಿರುವುದಿಲ್ಲ. ಅಥವಾ ಆ ಪೋಸ್ಟ್‌ಗೆ ಯಾರಾದರೂ ಒಬ್ಬರು ಬಂದಿರುತ್ತಾರೆ. ಈ ತರಹದಲ್ಲಿ ಆಗಿದೆಯೆಂದು ವಸ್ತುಸ್ಥಿತಿಯನ್ನು ಮತ್ತೆ ಮುಖ್ಯಮಂತ್ರಿಗಳಿಗೆ ತಿಳಿಸುತ್ತಾರೆ. ಅದು ಅವರ ಆದೇಶವನ್ನು ಉಲ್ಲಂಘಿಸಿದಂತಾಗುವುದಿಲ್ಲ ಮತ್ತು ಉದ್ಧಟತನವೂ ಕೂಡ ಅಲ್ಲ. ಆದರೆ, ಅದನ್ನು ಮತ್ತೆ ಸರಿಪಡಿಸತಕ್ಕಂಥಾದ್ದು ಇರುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಸರಿ ಆದೇಶ ಜಾರಿ ಮಾಡದೇ ಇದ್ದರೆ, ಏನು ಮಾಡಬೇಕು? ಮಾನ್ಯ ಪ್ರಕಾಶ್‌ರವರು ಹೇಳಿದ್ದು ಕರೆಕ್ಟ್ . . . ನಾನು ಒಪ್ಪುತ್ತೇನೆ. ಇದು ಒಂದು ಉದಾಹರಣೆ. ಅಂತಹದ್ದು ಐದಾರು ಉದಾಹರಣೆಗಳನ್ನು ನಾನು ಹೇಳುತ್ತೇನೆ. ಜಾರಿ ಮಾಡದಿರತಕ್ಕಂಥ ಐದಾರು ಉದಾಹರಣೆಗಳು ನನ್ನ ಹತ್ತಿರ ಇದೆ. ನಾನು ಒಂದನ್ನಷ್ಟೇ ಹೇಳಿದ್ದು. ಅದನ್ನು ಉದ್ಧಟತನವೆಂದು ಹೇಳಬೇಕೋ ನನಗೆ ಗೊತ್ತಿಲ್ಲ, ಹೇಳಿ. ಅದನ್ನು ಏನೆಂದು ಹೇಳಬೇಕು? ಸನ್ಮಾನ್ಯ ಉಪಾಧ್ಯಕ್ಷರೆ, ಇವೊತ್ತು ಯಾವ ಇಲಾಖೆ ಮೇಲೆ ಯಾರಿಗೆ ಹಿಡಿತ ಇದೆ? ಒಂದು ಆಜ್ಞೆ ಹೋದರೆ, ಒಂದು ಆರ್ಡರ್ ಹೋದರೆ, ಒಂದು ಪತ್ರ ಹೋದರೆ ತಿಂಗಳಾನುಗಟ್ಟಳೆ ಅದು ಹೊರಗಡೆ ಬರುವುದಿಲ್ಲ. ನೀವು ಏನು ಆರ್ಡರ್ ಮಾಡುತ್ತೀರೋ ಮಾಡಿ. Yes or No. That is left to you. ಹೌದಲ್ಲಾ? ಎಷ್ಟು ದಿವಸ ಅರ್ಜಿಯನ್ನು ಪೆಂಡಿಂಗ್ ಇಡಬೇಕು? ಎಷ್ಟು ದಿವಸ ಆರ್ಡರ್ ಪೆಂಡಿಂಗ್ ಇಡಬೇಕು? ಅದಕ್ಕೆ ಏನಾದರೂ ನಿಯಮವಿದೆಯೇ? ನೀವು ಏನು ಆಡಳಿತ ನಡೆಸುತ್ತಿದ್ದೀರಿ? ಆಡಳಿತ ಏಕೆ ಕುಸಿದಿದೆ ಗೊತ್ತೇ? ಮಾನ್ಯ ಪ್ರಕಾಶ್‌ರವರು ಇಲ್ಲಿ ಕುಳಿತಿದ್ದಾರೆ, ಅವರು ಹಿರಿಯ ಸಚಿವರಾಗಿದ್ದಾರೆ. ನಾನು ಬಹಳ ನಮ್ರತೆಯಿಂದ ಹೇಳುತ್ತಿದ್ದೇನೆ. Because of political irresponsibility of the Coalition Government, political bankruptcy of this Coalition Government has led to the total inaction of the administration.

ಇದಕ್ಕೆ ಬೇರೇನೂ ಕಾರಣವಲ್ಲ. ಒಬ್ಬ ಪೊಲೀಸಿನವನು ಮಾತನಾಡುತ್ತಾನೆ. ನಾವು ಇರುತ್ತಿದ್ದರೆ ನಮ್ಮ ಹಿಂದುಗಡೆ, 'ಅಯ್ಯೋ, ಈ ಸರ್ಕಾರ ಯಾವಾಗ ಬಿದ್ದುಹೋಗುತ್ತದೋ, ಹೋಗಿ ಸ್ವಾಮಿ. ಯಾರ ಮಾತು ನಾವು ಕೇಳಬೇಕು?' ಎಂದು ಇವೊತ್ತು ಮಾತನಾಡುತ್ತಾರೆ. ಬೀದಿಯಲ್ಲಿ ಹೋಗುವ ಒಬ್ಬ ಆರ್ಡಿನರಿ ಪೊಲೀಸ್ ಮಾತನಾಡುತ್ತಾನೆ. ಯಾರು ಸ್ವಾಮಿ ಇದಕ್ಕೆ ಜವಾಬ್ದಾರಿ? ಅಧಿಕಾರಕ್ಕೆ ಬಂದಾಗ ನೀವೇನು ಆಶ್ವಾಸನೆ ಕೊಟ್ಟಿರಿ? ನಾವು Coalition Government ರಚನೆ ಮಾಡುತ್ತಿರುವ ಕಾರಣವೇನೆಂದು ಮಾತನಾಡಿ, ಆಶ್ವಾಸನೆ ಕೊಟ್ಟು ನೀವು ಅಧಿಕಾರಕ್ಕೆ ಬಂದಿರಿ. ನಾನು ಪ್ರಾಮಾಣಿಕವಾಗಿ ಎಂ.ಪಿ. ಪ್ರಕಾಶ್‌ರವರಿಗೆ ಕೇಳುತ್ತಿದ್ದೇನೆ. ನನಗೆ ಅವರ ಬಗ್ಗೆ ಭಾರಿ ಗೌರವವಿದೆ. ಅವರು ಹಿರಿಯ ಸಚಿವರು. ಇವೊತ್ತಿಗೆ ಹದಿನಾಲ್ಕು ತಿಂಗಳುಗಳಾಗಿದೆ. ಮಾನ್ಯ ಪ್ರಕಾಶ್‌ರವರು, ಪ್ರತಿ ದಿವಸದ ನ್ಯೂಸ್ ಪೇಪರ್ ಅನ್ನು ತೆಗೆದು ನೋಡಲಿ. ಇಂತಹ ಒಂದು ದಿವಸ ನೀವು ಅವರ ಮೇಲೆ ಅಥವಾ ಅವರು ನಿಮ್ಮ ಮೇಲೆ ಟೀಕೆ ಮಾಡದಿರುವಂಥ ಒಂದೇ ಒಂದು ದಿವಸ ಇದೆ ಪೇಪರ್‌ನಲ್ಲಿ ಅಂತ ನೀವು ಪ್ರಾಮಾಣಿಕವಾಗಿ ಹೇಳಿಬಿಡಿ. ನೀವಿಬ್ಬರೂ ಸೇರಿದ್ದು ಏನು? ಬಿಜೆಪಿಯವರನ್ನು ದೂರ ಇಡಬೇಕೆಂದು. ಸ್ವಾಮಿ, ಶಿವಮೊಗ್ಗದಲ್ಲಿ ಚುನಾವಣೆ ನಡೆಸಿದರು. ಇಬ್ಬರೂ ಸೇರಿ ಬಿಜೆಪಿಯವರ ಬಗ್ಗೆ ಒಂದಕ್ಷರ ಕೂಡ ಮಾತನಾಡಲಿಲ್ಲ. ಇವರ ಮೇಲೆ ಅವರು, ಅವರ ಮೇಲೆ ಇವರು. ಹಾಗಾದರೆ, ನೀವು ಕರ್ನಾಟಕ ರಾಜ್ಯದ ಜನತೆಗೆ ಕೊಟ್ಟಂಥ ಆಶ್ವಾಸನೆ ಏನು? ಅವರನ್ನು ಆಚೆ ಇಡಬೇಕೆಂದು ನಾವು ಸರ್ಕಾರ ಮಾಡುತ್ತಿದ್ದೇವೆಂದು ಕರ್ನಾಟಕದ ಜನತೆಗೆ ನೀವು ಮೋಸ ಮಾಡಿದ್ದೀರಿ, ವಂಚನೆ ಮಾಡಿದ್ದೀರಿ, ಅದರಿಂದಾಗಿ ಇವೊತ್ತು ಅಧಿಕಾರ ಕುಸಿದುಹೋಗಿಬಿಟ್ಟಿದೆ. ಯಾವುದೇ ಅಧಿಕಾರಿ ಯಾರದೇ ಮಾತನ್ನು ಕೇಳುವ ಸ್ಥಿತಿಯಲ್ಲಿಲ್ಲ.

ಶ್ರೀ ಎಸ್.ಎಸ್. ಪಾಟೀಲ್: ಇದು ಬಜೆಟ್ ಆಗಿರುವುದರಿಂದ ಬೇಡಿಕೆ ಮೇಲೆ ತಾವು ಮಾತನಾಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಹೌದು. ಜನರಲ್ ಅಡ್ಮಿನಿಸ್ಟ್ರೇಷನ್ ಕುಸಿದಿದೆ ಎಂದು ಹೇಳುತ್ತಿರುವುದು. ಇಲ್ಲಿ ತೆಗೆದು ನೋಡಿ. ನಿಮ್ಮ ಲಿಸ್ಟ್‌ನಲ್ಲಿ ನೋಡಿ. ಅಜೆಂಡಾದಲ್ಲಿ ಸಾಮಾನ್ಯ ಆಡಳಿತದ ಬಗ್ಗೆ ಇದೆ. ಇವೊತ್ತು ಅಡ್ಮಿನಿಸ್ಟ್ರೇಷನ್ ಕುಸಿದಿರುವ ಬಗ್ಗೆ ಮಾತನಾಡುತ್ತಿರತಕ್ಕಂಥಾದ್ದು.

ಶ್ರೀ ಎಸ್. ರಾಜೇಂದ್ರನ್: ಮಾನ್ಯ ಉಪಾಧ್ಯಕ್ಷರೆ, ಕಳೆದ ಸೆಷನ್‌ನಲ್ಲಿ ಮಹದೇವಪ್ಪನವರಿಗೆ mis-use of funds, malpractice, mal-administration ಬಗ್ಗೆ whole opposition walked out. Whole opposition walked out ಮಾಡಿದೆವು. What action is taken till today? What answer he has given to the Government? ಅಡ್ಮಿನಿಸ್ಟ್ರೇಷನ್ ಬಗ್ಗೆ ಅವರು ಮಾತನಾಡಲೇಬೇಕು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅಡ್ಮಿನಿಸ್ಟ್ರೇಷನ್ ಬಗ್ಗೆ ಮಾತನಾಡುವಾಗ ಇನ್ನೇನು ಮಾತನಾಡಬೇಕು? ಅಡ್ಮಿನಿಸ್ಟ್ರೇಷನ್ ಕುಸಿದು ಹೋಗಿಬಿಟ್ಟಿದೆ. ಆಡಳಿತ ಯಂತ್ರಾಂಗ ಸಂಪೂರ್ಣವಾಗಿ ನಡೆಯುತ್ತಿಲ್ಲ. ಯಾವುದೇ ಒಂದು ಕೆಲಸ ಇವೊತ್ತು ಸರ್ಕಾರದಲ್ಲಿ ನಡೆಯುತ್ತಿಲ್ಲ. ನಮ್ಮ ಶಾಸಕರೇ ಇವೊತ್ತು ಫೈಲುಗಳನ್ನು ಕಂಕುಳಲ್ಲಿ ಇಟ್ಟುಕೊಂಡು ಆಫೀಸಿನಿಂದ ಆಫೀಸಿಗೆ ಸುತ್ತತಕ್ಕಂಥ ಕೆಲಸ ನಮಗಾಗಿದೆ. ಇನ್ನು ಸಾಮಾನ್ಯ ಮನುಷ್ಯನ ಗತಿ ಏನಾಗಬೇಕು ಎಂಬುದನ್ನು ಇವೊತ್ತು ನೀವು ಆಲೋಚನೆ ಮಾಡಬೇಕು. ನಾವು ಹತ್ತು ಸಲ ಫೋನ್ ಮಾಡಿದರೂ ಒಬ್ಬ ಆಫೀಸರ್ ಕೂಡ

ರೆಸ್ಪಾಂಡ್ ಮಾಡುವುದಿಲ್ಲ. ನಾನು ಆಗಲೇಬೇಕೆಂದು ಹೇಳುತ್ತಿಲ್ಲ. Whether it is done or not. ಇದು ಸರಿಯಾಗಿದೆಯೇ? ಇಲ್ಲವೇ? ಮಾಡುವುದಕ್ಕಾಗುವುದಿಲ್ಲ. ಅಷ್ಟಾದರೂ ಉತ್ತರ ನೀಡತಕ್ಕಂಥ ಸ್ಥಿತಿಯಲ್ಲಿ ಅಧಿಕಾರಿಗಳು ಇಲ್ಲ. ಮತ್ತು ಯಾವಾಗ ನೋಡಿದರೂ ಮೀಟಿಂಗ್. ಯಾವಾಗ ಯಾವ ಐಎಎಸ್ ಆಫೀಸರ್, ಯಾವ ಕ್ಲಾಸ್-1 ಆಫೀಸರ್‌ಗೆ any time ಫೋನ್ ಮಾಡಿದರೂ, ಮೀಟಿಂಗ್ ಹೋಗಿದ್ದಾರೆ ಸರ್ ಎಂದು ಹೇಳುತ್ತಾರೆ. ಎಲ್ಲಿಗೆ ಹೋಗಿದ್ದಾರೆ ಎಂದರೆ, ಮೀಟಿಂಗ್‌ಗೆ ಹೋಗಿದ್ದಾರೆ ಸಾರ್ ಎಂದು ಹೇಳುತ್ತಾರೆ. All the days meeting. ಮೀಟಿಂಗ್ ಹೆಸರಿನಲ್ಲಿ ಎಲ್ಲೆಲ್ಲಿಗೆ, ಯಾರ್‍ಯಾರು ಹೋಗುತ್ತಾರೆಂದು ನಾನು ಹೇಳುವುದಿಲ್ಲ. ಅದು ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ಮೀಟಿಂಗ್ ಅಂತ ಹೇಳಿ on duty ಅಂತ ಹೇಳಿ ಸೈನ್ ಮಾಡಿಬಿಟ್ಟು ಫೈಲನ್ನು ಕಂಕುಳಲ್ಲಿಟ್ಟುಕೊಂಡು, ಕಾರಿನಲ್ಲಿ ಹಾಕಿಕೊಂಡು, ಎಲ್ಲೆಲ್ಲಿಗೆ ಯಾರ್‍ಯಾರು ಹೋಗುತ್ತಾರೆ. ಅದು ನನಗೆ ಬೇಕಾಗಿಲ್ಲ. But, public response ಏನು? ಶಾಸಕರು ಏನಾದರೊಂದು ಕೆಲಸ ಹೇಳಿದರೆ, ಅದು ಆಗುತ್ತೆ ಅಥವಾ ಇಲ್ಲ. ಇದು ಕಾನೂನುಬದ್ಧವಾಗಿದೆ, ಮಾಡಲಿಕ್ಕೆ ಸಾಧ್ಯವಿದೆ, ಇಲ್ಲವೆಂದು ಹೇಳತಕ್ಕಂಥ ಸೌಜನ್ಯವನ್ನೂ ತೋರುವುದಿಲ್ಲ. ನಾವೇ ಆಫೀಸಿಗೆ ಸ್ವತಃ ಹೋಗಬೇಕಾಗಿದೆ. ಕರ್ನಾಟಕ ರಾಜ್ಯದಲ್ಲಿ ಇವೊತ್ತು ಆಡಳಿತ ಯಂತ್ರಾಂಗ ಈ ಸ್ಥಿತಿಗೆ ಬಂದಿದೆ. ಸಾಮಾನ್ಯ ಜನರಿಗೆ ನೀವು ಅಭಿವೃದ್ಧಿ ಏನು ಕೊಡುತ್ತೀರಿ? ನೀವೇನು ಮಾಡುತ್ತೀರಿ? ಯಾವ ರೀತಿ ನಿಯಂತ್ರಣ ಮಾಡುತ್ತೀರಿ? ಹೇಳಿ. ಹಾಗಾಗಿ ಇವತ್ತು ಕರ್ನಾಟಕ ರಾಜ್ಯದ ಜನತೆ ಇವರಿಂದ ಏನನ್ನು ನಿರೀಕ್ಷೆ ಮಾಡಿದ್ದರೋ, ಆ ನಿರೀಕ್ಷೆ ಸಂಪೂರ್ಣವಾಗಿ ಪೊಳ್ಳಾಗಿದೆ. ಇವರ ರಾಜಕೀಯ ದಿವಾಳಿತನದಿಂದ ಅದು ಪೊಳ್ಳಾಗಿದೆ. ಇವರ ರಾಜಕೀಯ ಬೇಜವಾಬ್ದಾರಿತನದಿಂದ ಆಡಳಿತ ಯಂತ್ರಾಂಗ, ಅಭಿವೃದ್ಧಿ ಎರಡೂ ಕುಸಿದಿದೆ. Where political leadership became weak, there, the bureaucracy will become strong. ಇದನ್ನು ದಯವಿಟ್ಟು ಅರ್ಥ ಮಾಡಿಕೊಳ್ಳಿ. ರಾಜಕೀಯ ನಾಯಕತ್ವ ಯಾವಾಗ ಅಸಮರ್ಥವಾಗುತ್ತದೋ, ಬಲಹೀನವಾಗುತ್ತದೋ, ಆಗ ಅಧಿಕಾರಶಾಹಿ ದರ್ಪ ಜಾಸ್ತಿಯಾಗುತ್ತದೆ. This is the main reason. ಹಾಗಾಗಿ ಇವತ್ತು ಆ ರೀತಿಯಲ್ಲಿ ಆಡಳಿತ ನಡೆಸತಕ್ಕಂತಹ ಶಕ್ತಿ ಇಲ್ಲದೇ ಇದ್ದರೆ, ಇವರು ಅಧಿಕಾರ ನಡೆಸತಕ್ಕಂಥ ಅವಶ್ಯಕತೆ ಇಲ್ಲ. Coalition Government ನಲ್ಲಿ 24 ಗಂಟೆ, ದಿನಬೆಳಗಾದರೆ ಇಬ್ಬರೂ ಕಿತ್ತಾಡುತ್ತಿದ್ದೀರಿ. ಪ್ರತಿದಿನ ಯಾವುದಾದರೂ ಒಂದು ದಿವಸ ಪತ್ರಿಕೆ ತೆಗೆದು ನೋಡಿ, ಇಲ್ಲ ಎನ್ನತಕ್ಕಂಥ ಪ್ರಶ್ನೆ ಇಲ್ಲ. ಅಷ್ಟು ಹೇಳಿ, ಸನ್ಮಾನ್ಯ ಉಪಾಧ್ಯಕ್ಷರೆ, ಈ ರೀತಿಯಾದಂತಹ ಅಧೋಗತಿಗೆ ಈ ರಾಜ್ಯದ ಆಡಳಿತ ಬಂದಿದೆ. ಈ ಗ್ರಾಮೀಣಾಭಿವೃದ್ಧಿ ಇಷ್ಟು ಹದಗೆಟ್ಟಿದೆ, ಅದನ್ನು ಸರಿಪಡಿಸಬೇಕು ಎಂದು ಹೇಳಿ, ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜ್‌ರವರೆ, ಒಂದೇ ಒಂದು ನಿಮಿಷ.